ರಂಜನೆ ಬೋಧನೆ ಪ್ರಚೋದನೆ

ಲಂಕೇಶ್

13 ಜನವರಿ 2016 ಪುಟ 20 ರೂ. 15/-


ಬುದ್ಧ, ಬಸವಣ್ಣನ ಹೋರಾಟವೂ ಅಸಹಿಷ್ಣುತೆ ವಿರುದ್ಧವೇ



ಮೇಲ್ಮನೆ

ಬಿಜೆಪಿಗೆ ಮುಖಭಂಗ ಜೆಡಿಎಸ್‌ಗೆ ಗರ್ವಭಂಗ

ಅಪರಾ ತಪರಾ!




ನಿಟ್ಟುಸಿರಿಟ್ಟ ಕಾಂಗ್ರೆಸ್

ರೊಕ್ಕಸ್ಥ ಅಪ್ಪಾಜಿ ಮುಂದೆ

ಗೌಡ ಥಂಡಾ!

'ಅಭಿವೃದ್ಧಿ'ಯ ಅಪಾಯವನ್ನು ಎದುರುಗೊಳ್ಳುವಲ್ಲಿ ಇರುವ ಸವಾಲುಗಳು



'ಅಭಿವೃದ್ಧಿ' ಎಂದು ಯಾವುದನ್ನು ಕರೆಯಲಾಗುತ್ತಿದೆಯೋ, ಅದರ ಅಪಾಯಗಳ ಕುರಿತು ಈಗಾಗಲೇ ಸಾಕಷ್ಟು ಚರ್ಚೆ ನಡೆದಿದೆ. ಅಭಿವೃದ್ಧಿಯ ಮಾನದಂಡಗಳಲ್ಲೇ ಇರುವ ಸಮಸ್ಯೆಯ ಕುರಿತು ನಮ್ಮಂಥವರಲ್ಲಿ ಒಮ್ಮತವೂ ಇದೆ. 'ಸಂಪತ್ತು ಸೃಷ್ಟಿಯಾಗಬೇಕು, ಯಾವ ರೀತಿಯಿಂದ ಸೃಷ್ಟಿಯಾದರೂ ಸರಿ, ಜನಸಾಮಾನ್ಯರನ್ನು ಹೀರಿ, ಹಿಂಡಿ ಹಿಪ್ಪೆ ಮಾಡಿಯಾದರೂ ಸರಿ; ಆ ರೀತಿ ಸೃಷ್ಟಿಯಾಗುವ ಸಂಪತ್ತು ಒಂದೇ ಕಡೆ ನಿಲ್ಲುವುದಿಲ್ಲ, ಅದು ಮೇಲೆ ಇರುವ ಕೆಲವೇ ಮಂದಿಯ ಹಿಡಿತಕ್ಕೆ ಹೋದರೂ, ಅಲ್ಲೇ ನಿಲ್ಲುವುದಿಲ್ಲ, ಅಲ್ಲಿಂದ ಕೆಳಗೆ ತೊಟ್ಟಿಕ್ಕಲೇಬೇಕು (Trickle down). ಆ ರೀತಿ ತೊಟ್ಟಿಕ್ಕುವ ಮೂಲಕ ಅದು ಕೆಳಗಿರುವ ಸಾಮಾನ್ಯರಿಗೂ ತಲುಪುತ್ತದೆ'. ನಮ್ಮೊಂದಿಗೆ ಸಹಮತ ಹೊಂದಿರದಿದ್ದ ಈ 'ತೊಟ್ಟಿಕ್ಕುವ ಸಿದ್ಧಾಂತ'ದ ಪ್ರತಿಪಾದಕರು ಈಗ ಸೋತಿದ್ದಾರೆ. ಏಕೆಂದರೆ, ಕಳೆದ 25 ವರ್ಷಗಳ ಭಾರೀ ಅಭಿವೃದ್ಧಿಯ ನಂತರ ಜಗತ್ತಿನಲ್ಲಿ ಅಸಮಾನತೆ ಹೆಚ್ಚಾಗಿದೆ, ಅಪೌಷ್ಟಿಕತೆ ಕಡಿಮೆಯಾಗಲಿಲ್ಲ, ಆತ್ಮಹತ್ಯೆಗಳು ಹೆಚ್ಚಾಗಿವೆ, ದುಡಿವ ಸಮುದಾಯಗಳಲ್ಲಿ ಅಭದ್ರತೆ ಹೆಚ್ಚಾಗಿದೆ ಎಂಬುದನ್ನು ಎಲ್ಲಾ ಅಧ್ಯಯನಗಳೂ ಸಾಬೀತುಪಡಿಸಿವೆ. ಈ ರೀತಿಯಲ್ಲಿ ನೋಡುವುದಾದರೆ 'ಅಭಿವೃದ್ಧಿ'ಯು ಜನಸಾಮಾನ್ಯರಿಗೆ ತಲುಪುತ್ತಿಲ್ಲ ಎಂಬ ಬಗ್ಗೆ ಒಂದು ರೀತಿಯ ಸಹಮತವಿದೆ.

ಆದರೂ, ಜನಸಾಮಾನ್ಯರು ಇನ್ನೂ ಅಭಿವೃದ್ಧಿಯ ಹಿಂದೆ ಬಿದ್ದಿದ್ದಾರೆ. ಅದರಲ್ಲೂ ಮಧ್ಯಮವರ್ಗಕ್ಕೆ ಅಭಿವೃದ್ಧಿ ಬೇಕಿದೆ. ಇದು ನಮ್ಮನ್ನು ಚಿಂತನೆಗೆ ಗುರಿ ಮಾಡುತ್ತಿದೆ, ಏಕೆಂದರೆ ಒಬ್ಬ ಸಾಮಾಜಿಕ ಕಾರ್ಯಕರ್ತನಾಗಿ ನಾನು ಅಭಿವೃದ್ಧಿಯ ಕುರಿತ ವಿಮರ್ಶೆಯನ್ನು ನೋಡಬಯಸುವುದು ಅದನ್ನು ಬದಲಿಸುವ ದೃಷ್ಟಿಯಿಂದ. ಅದರ ಪೊಳ್ಳುತನವನ್ನು ಬಯಲಿಗೆಳೆದು 'ನಿಜವಾದ ಅಭಿವೃದ್ಧಿ'ಗಾಗಿ ಆಗ್ರಹಿಸುವ ಚಳವಳಿಗೆ ಜನರನ್ನು ಹೇಗೆ ಅಣಿನೆರೆಸುವುದು (mobilise) ಎಂಬ ದೃಷ್ಟಿಯಿಂದ. ಈ ರೀತಿ ಮೊಬಿಲೈಸ್ ಮಾಡಬೇಕೆಂದರೆ, ಜನರಿಗೆ ಸುಲಭಕ್ಕೆ ಅರ್ಥವಾಗಬಲ್ಲ ಮತ್ತು ಒಪ್ಪಿಗೆಯಾಗಬಲ್ಲ ಪರ್ಯಾಯದ ಪರಿಕಲ್ಪನೆಯನ್ನು ಮುಂದಿಡುವ ಅಗತ್ಯವಿದೆ. ಸಾಮಾನ್ಯವಾಗಿ ನಾವು ಮುಂದಿಡುವ 'ಬಂಡವಾಳಶಾಹಿ ಅಭಿವೃದ್ಧಿಯ ಮಾದರಿ' ಮತ್ತು 'ಸಮಾಜವಾದಿ ಅಭಿವೃದ್ಧಿಯ ಮಾದರಿ' ಎಂಬ ಸ್ಥೂಲವಾದ ಎರಡು ಮಾದರಿಗಳ ವಿಂಗಡಣೆಯ ಮೂಲಕ ಮಾತ್ರ ಇದನ್ನು ಸಾಧಿಸಲು ಸಾಧ್ಯವಿಲ್ಲ. ಸಾಧ್ಯವಿಲ್ಲದಿರುವುದು, ಸಮಾಜವಾದ ಎಂಬುದು 'ಇಂದಿನ ಫ್ಯಾಷನ್ ಅಲ್ಲ' ಎನ್ನುವ ಕಾರಣಕ್ಕಾಗಿ ಮಾತ್ರವಲ್ಲ; ರಷ್ಯಾ ಮತ್ತು ಚೀನಾಗಳ ಅಭಿವೃದ್ಧಿಯ ಮಾದರಿಯ ಬಗೆಗೂ ತಕರಾರುಗಳಿವೆ ಎಂಬ ಕಾರಣಕ್ಕೆ ಮಾತ್ರವೂ ಅಲ್ಲ, ಈ ಶತಮಾನದಲ್ಲಿ ಈ ದೇಶದ ಜನರ ಕಲ್ಪನೆಗೆ ನಿಲುಕುವ ರೀತಿಯಲ್ಲಿ ಪರ್ಯಾಯವನ್ನು ಮುಂದಿಡುವುದು ನಮ್ಮ ಅಗತ್ಯವಾಗಿದೆ ಎನ್ನುವ ಕಾರಣಕ್ಕೆ ಅಷ್ಟೇ. ಆಮ್‌ಆದ್ಮಿ ಪಕ್ಷದ ಕುರಿತು ನಮಗೆ ಏನೇ ತಕರಾರುಗಳಿರಬಹುದಾದರೂ, ಅದು ಜನಸಾಮಾನ್ಯರ ಕಲ್ಪನೆಗೆ ಎಟುಕುವ ಮತ್ತು ಅವರಿಗೆ ಪರ್ಯಾಯವೆನಿಸಬಹುದಾದ ಪರ್ಯಾಯವನ್ನು ಮುಂದಿಡಲು ಯಶಸ್ವಿಯಾಯಿತು ಹಾಗೂ ಅದರ ಒಟ್ಟಾರೆ ಯಶಸ್ಸಿಗೆ ಪೂರಕವಾದ ಮುಖ್ಯ ಅಂಶಗಳಲ್ಲಿ ಇದೂ ಒಂದಾಗಿತ್ತು.

ಆದರೆ ಈ ಪರ್ಯಾಯದ ಪರಿಕಲ್ಪನೆಯ ವಿಚಾರದಲ್ಲಿ ನಮ್ಮೆಲ್ಲರಲ್ಲಿ ಒಮ್ಮತವಿಲ್ಲ. ಈಗಿನ ಅಭಿವೃದ್ಧಿಯ ಮಾದರಿಯನ್ನು ವಿರೋಧಿಸುವವರ ನಡುವೆಯೇ ಈ ಕುರಿತು ತೀವ್ರವಾದ ಭಿನ್ನಾಭಿಪ್ರಾಯಗಳಿವೆ. ಉದಾಹರಣೆಗೆ ಕೃಷಿಯನ್ನೇ ತೆಗೆದುಕೊಳ್ಳೋಣ. ಆಧುನಿಕ ಕೃಷಿ ಎಂದು ಯಾವುದನ್ನು ಕರೆಯಲಾಗುತ್ತಿದೆಯೋ, ಅದರ ಸುಧಾರಿತ ರೂಪ ಕೆಲವರಿಗೆ ಒಪ್ಪಿಗೆಯಾಗುತ್ತದೆ; ಇನ್ನು ಹಲವರು ಸಹಜ ಕೃಷಿ, ಸಾವಯವ ಕೃಷಿ ಇತ್ಯಾದಿಗಳ ಮೊರೆ ಹೋಗಿದ್ದಾರೆ. ಪರ್ಯಾಯ ಅಭಿವೃದ್ಧಿಯ ಮಾದರಿಯ ಕಡೆಗೆ ರೈತರನ್ನು ಮೊಬಿಲೈಸ್ ಮಾಡಬೇಕೆಂದರೆ, ನಾವು ಯಾವ ಬಗೆಯ ಕೃಷಿ ಮಾದರಿಯನ್ನು ಮುಂದಿಡಬೇಕು ಎಂಬುದೂ ಬಗೆಹರಿಯಬೇಕು. ಕರ್ನಾಟಕದ ಗ್ರಾಮಾಂತರ ಪ್ರದೇಶಗಳ ಅಧ್ಯಯನದ ಭಾಗವಾಗಿ ನಾವು ಕೆಲವು ಸ್ನೇಹಿತರು ಮಧುಗಿರಿ ತಾಲೂಕಿನ ಇಟ್ಟಿಗದಿಬ್ಬನಹಳ್ಳಿ (ಐ.ಡಿ.ಹಳ್ಳಿ) ಎಂಬ ಹಳ್ಳಿಗೆ ಹೋಗಿದ್ದೆವು. ಅಲ್ಲಿ ರಾಸಾಯನಿಕ ಕೃಷಿಯನ್ನು ವಿರೋಧಿಸುತ್ತಿದ್ದ ಹಿರಿಯ ರೈತರೊಬ್ಬರು ನಮ್ಮ ಮುಂದೆ ಪ್ರಶ್ನೆ ಎಸೆದರು. 'ಈಗಾ, ಸಹಜ ಕೃಷಿ ಅಂತೀರಿ, ಸಾವಯವ ಕೃಷಿ ಅಂತೀರಿ, ಮಿಶ್ರ ಬೇಸಾಯ ಅಂತೀರಿ, ಕಾಡು ಕೃಷಿ ಅಂತೀರಿ. ನಾವು ಯಾವುದನ್ನ ಮಾಡ್ಬೇಕಪ್ಪಾ? ನೀವು ಒಬ್ಬೊಬ್ರು ಒಂದೊಂದನ್ನ ಹೇಳಿ, ನಮ್ಗೆ ಗೊಂದ್ಲ ಮಾಡ್ಬಿದ್ರೆ ಎಂಗೆ? ನನ್ನ ಪ್ರಕಾರ ನಮ್ಗೆ ಬೇಕಿರೋದು ಸಮಗ್ರ ಕೃಷಿ.', 'ಹಾಗಾದ್ರೆ ನಿಮ್ಮ ಸಮಗ್ರ ಕೃಷಿ ಅಂದ್ರೆ ಹೇಗೆ ನೀವೇ ಹೇಳಿ', 'ಅದುನ್ನ ಹೇಳ್ಬೇಕಿರೋನು ನಾನಲ್ಲ, ನಿಮ್ ಸರ್ಕಾರ, ನಿಮ್ ವಿಜ್ಞಾನಿಗ್ಳು, ನಿಮ್ಮಂಥೋರು ಯಲ್ಲಾ ಸೇರ್ಕೊಂಡು, ರೈತುರ್ಗೆ ನೋಡಿ ಇದು ಸರಿಯಾದ್ದು ಅಂತ ಹೇಳ್ಬೇಕು'. ಸರ್ಕಾರ ಹಾಗೂ ಸರ್ಕಾರೀ ವಿಜ್ಞಾನಿಗಳು ಮುಂದಿಡುವ ಪರ್ಯಾಯದ ಕಥೆ ಬಿಡೋಣ. ಆದರೆ, ಕೃಷಿಕರ ಜೊತೆ ಕೆಲಸ ಮಾಡುತ್ತಿರುವ ಎಲ್ಲಾ ಪ್ರಗತಿಪರ ಸಂಘಟನೆಗಳು ಮತ್ತು ಗುಂಪುಗಳಲ್ಲೇ ಈ ಬಗ್ಗೆ ಒಮ್ಮತವಿದೆಯೇ? ಇಲ್ಲ.

ಹಾಗಾದರೆ ಯಾವುದು ಪರ್ಯಾಯ? ಯಾವುದು ಪರ್ಯಾಯ ಎನ್ನುವುದಕ್ಕೆ ಈಗಲೇ ಒಂದು ಸಿದ್ಧ ಉತ್ತರ ಕೊಡುವಷ್ಟು ಪರಿಣತಿ ನನಗಿಲ್ಲ. ಆದರೆ, ಪರ್ಯಾಯ ಕಂಡುಕೊಳ್ಳುವ ವಿಧಾನದ ಕುರಿತು ನನಗೆ ಪರಿಚಿತವಿರುವ ವೈದ್ಯಕೀಯ ಕ್ಷೇತ್ರದ ನೆಲೆಯಲ್ಲಿ ಕೆಲವು ಮಾತುಗಳನ್ನು ಹಂಚಿಕೊಳ್ಳಬಹುದು. ಅಲೋಪತಿ ಎಂದು ಕರೆಯಲಾಗುವ ವೈದ್ಯಕೀಯ ವಿಜ್ಞಾನಕ್ಕೂ, ಪರ್ಯಾಯ ವೈದ್ಯಕೀಯ ವಿಧಾನಗಳೆಂದು ಗುರುತಿಸಲಾಗುವ ಆಯುರ್ವೇದ, ಹೋಮಿಯೋಪತಿ, ಸಿದ್ಧ ಇತ್ಯಾದಿಗಳಿಗೂ ಒಂದು ಜಗಳ/ಪೈಪೋಟಿ ನಡೆಯುತ್ತಲಿದೆ. ವೈದ್ಯಕೀಯ ಪದವೀಧರನೂ, ಸಾಮಾಜಿಕ ಕಾರ್ಯಕರ್ತನೂ ಆಗಿರುವ ಕಾರಣಕ್ಕೆ ಇವೆರಡರ ನಡುವೆ ನಾನು ಎಲ್ಲಿ ನಿಲ್ಲುತ್ತೇನೆ ಎಂಬ ಪ್ರಶ್ನೆಯನ್ನು ಆಗಾಗ್ಗೆ ಎದುರಿಸಬೇಕಾಗಿ ಬರುತ್ತದೆ. ಇದಕ್ಕೆ ಉತ್ತರವನ್ನು ನಾನು ಇಂಗ್ಲೆಂಡಿನ ಪ್ರಸಿದ್ಧ ಔಷಧಶಾಸ್ತ್ರಜ್ಞ ಲಾರೆನ್ಸ್ ಅವರಲ್ಲಿ ಕಂಡುಕೊಂಡಿದ್ದೇನೆ.



ಲಾರೆನ್ಸ್ ಔಷಧಶಾಸ್ತ್ರದ (Pharmacology) ಕುರಿತು ಬರೆದಿರುವ ಪಠ್ಯಪುಸ್ತಕದಲ್ಲೇ ಈ ಚರ್ಚೆಯನ್ನು ಕೈಗೆತ್ತಿಕೊಂಡಿದ್ದಾರೆ. ಅವರು ಹೇಳುತ್ತಾರೆ, 'ಈ ಆಧುನಿಕ ವೈದ್ಯಶಾಸ್ತ್ರ ಮತ್ತು ಪರ್ಯಾಯ ವೈದ್ಯಶಾಸ್ತ್ರ ಎಂಬ ವಿಭಾಗೀಕರಣವೇ ತಪ್ಪು, ಆ ರೀತಿ ಇರಲು ಸಾಧ್ಯವಿಲ್ಲ, ಇರುವುದು ಎರಡೇ ಒಂದು ವೈಜ್ಞಾನಿಕವಾದ ವೈದ್ಯಶಾಸ್ತ್ರ ಇನ್ನೊಂದು ಅವೈಜ್ಞಾನಿಕವಾದ ವೈದ್ಯಶಾಸ್ತ್ರ'. ಸಾವಿರಾರು ವರ್ಷಗಳಿಂದ ಈ ಭೂಮಿಯ ವಿವಿಧ ಖಂಡಗಳಲ್ಲಿ ಜನರು ಅಲೋಪತಿಯೆಂಬ ಆಧುನಿಕ ವೈದ್ಯಶಾಸ್ತ್ರವಿಲ್ಲದೆಯೂ ಬದುಕಿದ್ದಾರೆ; ತಮ್ಮ ಜಡ್ಡುಗಳಿಗೆ ತಮ್ಮದೇ ಮದ್ದುಗಳಿಂದ ಇಲಾಜು ಮಾಡಿಕೊಂಡಿದ್ದಾರೆ. ಹೀಗಿರುವಾಗ ಅವರ ಪಾರಂಪರಿಕ ವೈದ್ಯಗಳನ್ನು ಸಾರಾಸಗಟಾಗಿ ಅವೈಜ್ಞಾನಿಕ ಎಂದು ಕರೆಯುವುದು ಉದ್ಧಟತನ ಅಲ್ಲವೇ? ಖಂಡಿತಾ. ಲಾರೆನ್ಸ್ ಅಲೋಪತಿಯೆಂಬುದು ವೈಜ್ಞಾನಿಕ ಪದ್ಧತಿ ಮತ್ತು ಉಳಿದವೆಲ್ಲವೂ ಅವೈಜ್ಞಾನಿಕ ಎಂದು ಹೇಳುತ್ತಿಲ್ಲ. 'ಯಾವುದೇ ವೈದ್ಯ ಪದ್ಧತಿಯಲ್ಲಿ ಮನುಷ್ಯರ ಅನಾರೋಗ್ಯದ ಸಮಸ್ಯೆಗಳನ್ನು ನಿವಾರಿಸುವ ಚಿಕಿತ್ಸಾ ವಿಧಾನ ಇದ್ದಲ್ಲಿ, ಅದರ ಕುರಿತು ವೈಜ್ಞಾನಿಕ ವಿಧಾನಗಳಲ್ಲಿ ಸಂಶೋಧನೆ ನಡೆಯಬೇಕು. ಅದು ಕೆಲಸ ಮಾಡುತ್ತದೆ ಎಂದು ನಿರೂಪಿತವಾದರೆ, ಆ ಚಿಕಿತ್ಸಾ ವಿಧಾನವು ವೈಜ್ಞಾನಿಕ ವೈದ್ಯ ಪದ್ಧತಿಯ ಭಾಗವಾಗಬೇಕು. ಇದರರ್ಥ ಆ ಚಿಕಿತ್ಸಾ ವಿಧಾನವು ನಿರ್ದಿಷ್ಟವಾಗಿ ಅಣು ಮಟ್ಟದಲ್ಲಿ (molecular level) ಹೇಗೆ ಕೆಲಸ ಮಾಡುತ್ತದೆ ಎಂಬುದು ಖಚಿತ ಪಡಬೇಕು ಎಂದಲ್ಲ, ಹಾಗೆ ನೋಡಿದರೆ ಅಲೋಪತಿಯಲ್ಲೂ, ಕೆಲವು ಔಷಧಿಗಳು ಕೆಲವು ಕಾಯಿಲೆಗಳನ್ನು ಗುಣಪಡಿಸುವ ವಿಧಾನದ ಅಂತಿಮ ವಿವರಣೆಗಳು ಲಭ್ಯವಿಲ್ಲ. ಆದರೆ, ಈ ಕಾಯಿಲೆಯಿದ್ದ ಇಂತಿಷ್ಟು ಜನರಿಗೆ ಈ ಔಷಧಿಯನ್ನು ಇಷ್ಟು ಕಾಲ ಕೊಟ್ಟೆವು. ಕಾಯಿಲೆಯಿದ್ದ ಇಷ್ಟೇ ಜನರಿಗೆ ಔಷಧಿಯ ಬದಲು ಅಕ್ಕಿ ಹಿಟ್ಟಿನ ಗುಳಿಗೆ ಕೊಟ್ಟೆವು. ಅಂತಿಮವಾಗಿ ಸದರಿ ಔಷಧಿಯು ಈ ನಿರ್ದಿಷ್ಟ ಕಾಯಿಲೆಯನ್ನು ಗುಣಪಡಿಸಿದೆಯೆಂದು ಕಂಡುಕೊಂಡೆವು ಎಂಬಂತಹ ಅನುಭವಜನ್ಯ (empirical) ವಿವರಣೆಗಳಷ್ಟೇ ಲಭ್ಯವಿರುತ್ತದೆ. ಅದನ್ನು ಅಲೋಪತಿ ಒಪ್ಪಿಕೊಂಡಿದೆ. ಕನಿಷ್ಠ ಆ ರೀತಿಯ ಎಂಪಿರಿಕಲ್ ಪ್ರಯೋಗಗಳಿಂದಾದರೂ 'ಪರ್ಯಾಯ ವೈದ್ಯವಿಜ್ಞಾನ'ದ ಚಿಕಿತ್ಸಾ ಪದ್ಧತಿಗಳು ಎಷ್ಟು ಸೂಕ್ತವಿದೆ, ಎಷ್ಟು ಸೂಕ್ತವಲ್ಲ ಎಂಬುದು ಬಗೆಹರಿಯಬೇಕು. ಈ ವಿವರಣೆಯೂ ಸಹ ಲಾರೆನ್ಸ್‌ರದ್ದೇ.

ಇದಕ್ಕೆ ಒಂದು ಉದಾಹರಣೆಯನ್ನೂ ನೀಡಬಹುದು. ಸರ್ಪಗಂಧ ಎಂಬ ಒಂದು ಔಷಧಿಯನ್ನು ಆಯುರ್ವೇದದಲ್ಲಿ ರಕ್ತದೊತ್ತಡಕ್ಕೆ ಬಳಸಲಾಗುತ್ತಿತ್ತು, ಅದೇ ಸರ್ಪಗಂಧದಿಂದ ತೆಗೆದ ರೆಸೆರ್ಪೀನ್ (reserpine) ಎಂಬ ರಾಸಾಯನಿಕವನ್ನು ಅಲೋಪತಿಯಲ್ಲೂ ರಕ್ತದೊತ್ತಡಕ್ಕೆ ನೀಡಲಾಗುತ್ತಿದೆ. ಈಗ ಸರ್ಪಗಂಧ ಅವೈಜ್ಞಾನಿಕವೆಂದು, ರೆಸೆರ್ಪೀನ್ ವೈಜ್ಞಾನಿಕ ಎಂದು ಹೇಳಲಾದೀತೇ? ಆದರೆ, ವಿವಿಧ ವೈದ್ಯಕೀಯ ಪದ್ಧತಿಗಳಲ್ಲಿ ಇರುವ ಒಳಿತು ಕೆಡುಕುಗಳ ಕುರಿತು ವೈಜ್ಞಾನಿಕ ಸಂಶೋಧನೆ ನಡೆಯದೇ ಅದು ಪಾರಂಪರಿಕವಾಗಿ ಬಳಕೆಯಾಗುತ್ತಿತ್ತು ಎಂಬ ಒಂದೇ ಕಾರಣಕ್ಕೆ ಒಪ್ಪಿಕೊಳ್ಳಬಾರದು ಅಷ್ಟೇ. ಆದರೆ, ಇಲ್ಲಿ ಇನ್ನೊಂದು ಪ್ರಶ್ನೆಯೂ ಉದ್ಭವಿಸುತ್ತದೆ. ಕಾರ್ಪೊರೇಟ್ ಉದ್ದಿಮೆದಾರರ ಕೈಯಲ್ಲಿ ಸಿಕ್ಕಿಕೊಂಡಿರುವ, ಅವರಿಂದಲೇ ಅನುದಾನ ಪಡೆದುಕೊಳ್ಳುವ ಸಂಶೋಧನೆಗಳು ಎಷ್ಟು ವೈಜ್ಞಾನಿಕವಾಗಿರುತ್ತದೆ; ಈ ಸಂಶೋಧನೆಯ ಫಲಿತಗಳೂ ಸಹ ಅವರ ಲಾಭಕ್ಕೆ ಅನುಗುಣವಾಗಿ ರೂಪಿತವಾಗಿರುವುದಿಲ್ಲ ಎಂದು ಏನು ಖಾತರಿ? ಖಾತರಿ ಇಲ್ಲ, ಅದನ್ನು ಸರಿಪಡಿಸುವ ಕೆಲಸವೂ ಒಂದು ಸುದೀರ್ಘ ಪ್ರಕ್ರಿಯೆಯೇ ಸರಿ.

ವಿಜ್ಞಾನವೆಂಬುದು ಸತ್ಯದ ಹುಡುಕಾಟವಾಗಿದ್ದಲ್ಲಿ ಅದಕ್ಕಿರುವ ಹಲವು ತೊಡಕುಗಳನ್ನು ನಿವಾರಿಸಿಕೊಳ್ಳುವುದು ಸತ್ಯಾನ್ವೇಷಕರಿಗೆ ಅನಿವಾರ್ಯ.

ಇದನ್ನೇ ಕೃಷಿಗೂ ಮತ್ತು ಇನ್ನಿತ್ಯಾದಿ ನೂರು ಸಂಗತಿಗಳಿಗೂ ಅನ್ವಯಿಸುವ ಅಗತ್ಯವಿದೆ. ಜೀವವಿರುವ, ಭಾವನೆಗಳಿರುವ, ಜನರ ಬದುಕು ಮತ್ತು ಪರಂಪರೆಯೊಂದಿಗೆ ಸಂಬಂಧವಿರುವ ಹಾಗೆ ಜ್ಞಾನಶಿಸ್ತುಗಳ ಅನ್ವಯಿಕ ತಿಳಿವಳಿಕೆ ರೂಪುಗೊಳ್ಳಬೇಕು ಮತ್ತು ಅದು ವಿಜ್ಞಾನದ ತಳಹದಿಯ ಮೇಲೆ ನಿಂತಿರಬೇಕು. ಆ ಮೂಲಕ ವೈಜ್ಞಾನಿಕವಾದ ಪರ್ಯಾಯಗಳನ್ನು ರೂಪಿಸಬೇಕು. ಪರ್ಯಾಯದ ಪರಿಕಲ್ಪನೆಯನ್ನು ಸೂಕ್ತವಾಗಿ ಕಟ್ಟಿಕೊಡದೇ, ಇರುವ ಅಭಿವೃದ್ಧಿಯ ಮಾದರಿಯನ್ನು ಒಡೆದು ಹಾಕಲು ಸಾಧ್ಯವಿಲ್ಲ. ನಾವು ಸಹಜ ಕೃಷಿ, ಸಾವಯವ ಕೃಷಿ ಇತ್ಯಾದಿ ಮಾತನಾಡುವಾಗಲೂ ದೇಶದ ಎಲ್ಲಾ ಜನರಿಗೂ ಹೊಟ್ಟೆ ತುಂಬಾ ಊಟ ಹಾಕಲು ಸಾಧ್ಯವಿರುವ, ನಿಸರ್ಗಕ್ಕೆ ಹೊಂದಿಕೊಳ್ಳುವ ವೈಜ್ಞಾನಿಕ ಕೃಷಿ ವಿಧಾನದಲ್ಲಿ ಏನೆಲ್ಲಾ ಇರಬೇಕೋ ಅವೆಲ್ಲಾ ಇರುವ ಕೃಷಿ ವಿಧಾನವು ನಮ್ಮ ಪರ್ಯಾಯವಾಗಬೇಕು.

ಎರಡನೆಯದ್ದು, ಪರ್ಯಾಯದ ಪರಿಕಲ್ಪನೆಯನ್ನೂ ಹಿಗ್ಗಿಸುವ ಮತ್ತು ಪರ್ಯಾಯದ ಕಡೆಗೆ ಸಾಧಿಸುವ ಚಳವಳಿಯ ಮಾರ್ಗದ ಪ್ರಶ್ನೆ. ಈ ವಿಚಾರದಲ್ಲಿ ನಾವು ಛತ್ತೀಸ್‌ಗಢ ಮುಕ್ತಿಮೋರ್ಚಾದ ನೇತಾರರಾಗಿದ್ದ ಶಂಕರ್ ಗುಹಾ ನಿಯೋಗಿಯವರು ಪ್ರತಿಪಾದಿಸಿದ 'ಸಂಘರ್ಷ್ ಔರ್ ನಿರ್ಮಾಣ್' ಮಾರ್ಗವನ್ನು ಚರ್ಚೆಗೆ ತೆಗೆದುಕೊಳ್ಳುವ ಅಗತ್ಯವಿದೆ. ಈ ವ್ಯವಸ್ಥೆಯ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ರಚನೆಗಳಲ್ಲೇ ಬದಲಾವಣೆ ಬಾರದೇ ನಾವು ಪರ್ಯಾಯದ ನಿರ್ಮಾಣವನ್ನು ಮಾಡಲು ಸಾಧ್ಯ... ಎಂಬುದರಲ್ಲಿ ಸಂದೇಹವೇ ಇಲ್ಲ, ಆದರೆ, ಈ ಸಂದ... ಮಾಡಬಹುದಾದ ಕೆಲವು ನಿರ್ಮಾಣ ಕಾರ್ಯಕ್ರಮ... ವಿಶಾಲ ಜನಸಮೂಹವನ್ನು ಪರ್ಯಾಯದ ಕ... ಕರೆದುಕೊಂಡು ಬರುತ್ತವೆ. ಆ ಮೂಲಕ ಪರ್ಯಾಯ... ಸಾಧ್ಯವಿಲ್ಲ ಎನ್ನುವ ಪರಿಸ್ಥಿತಿಯಲ್ಲಿ, ಚಳವಳಿ ನಿರ್ಮಾ... ಸುಲಭವಾಗಿಲ್ಲ. ಉದಾಹರಣೆಗೆ ಶಿಕ್ಷಣ ಚಳವಳಿ ಇ... ನಮ್ಮೆಲ್ಲರಿಗೂ ಸಮಾನ ಶಾಲೆ (commo... school)ಗಿಂತ ಕಡಿಮೆಯಾದದ್ದು ಯಾವುದ... ಒಪ್ಪಿಗೆಯಿಲ್ಲ. ಆದರೆ, ಇಂದು ಮತ್ತಷ್ಟು ಮಾನವೀ... ಸಮಾಜ ಬರಬೇಕೆಂದು ಬಯಸುವ ಹೆಚ್ಚಿನವರ ಕಲ್ಪ... ಅದು ಎಟುಕುವುದಿಲ್ಲ. ಅವರ ಪ್ರಕಾರ ಸಮಾನ ಶಾ... ಎಂಬುದು ಒಂದು ಸುಂದರ ಆದರೆ ಅಸಾಧ್ಯವಾದ ಕ... ಅಷ್ಟೇ. ಹೀಗಾಗಿ ನಾವು ಸರ್ಕಾರೀ ಶಾಲೆಗಳನ... ಸಮುದಾಯದ ಸಕ್ರಿಯ ಪಾಲುದಾರಿಕೆಯ ಜೊ... ಅಭಿವೃದ್ಧಿಪಡಿಸುತ್ತಲೇ ಸಮಾನಶಾಲಾ ಚಳವಳಿಯ... ಬಲಪಡಿಸುವ ಯೋಜನೆ ಹಾಕಿಕೊಂಡೆವು. ಆದರೆ, ನಮ್ಮ... ಕೆಲವು ಗೆಳೆಯರಿಗೆ ನಾವು ಸುಧಾರಣಾವಾ... ಕಾರ್ಯಕ್ರಮಗಳಲ್ಲೇ ಮುಳುಗಿಹೋಗಿಬಿಡುವ ಅಪಾಯ... ಕಂಡಿತು. ಆ ಅಪಾಯ ಇಲ್ಲದಿಲ್ಲ, ಅದೇ ಸಂದರ್ಭದ... ಇಂದು ಇರುವ ಸರ್ಕಾರೀ ಶಾಲೆಗಳನ್ನು ... ರೀತಿಯಲ್ಲಾದರೂ ಉಳಿಸಿಕೊಳ್ಳದೇ ಇದ್ದರೆ, ಸಮಾನ ಶಾ... ಚಳವಳಿಗೊಂದು ಸಾಮಾಜಿಕ ನೆಲೆಯ... ಉಳಿದುಕೊಳ್ಳುವುದಿಲ್ಲ. ಹಾಗಾಗಿ ಈ ರೀತಿಯ ಸುಧಾರ... ಕಾರ್ಯಕ್ರಮದ ಮುಖಾಂತರ ನಮಗೆ ಸಂಘರ್ಷಕ್ಕೆ ಬೇಕಾ... ಸಾಮಾಜಿಕ ನೆಲೆಯೂ, ಪರ್ಯಾಯದ ಪರಿಕಲ್ಪನೆಯನ್ನು... ಅರ್ಥಮಾಡಿಸುವ ಸಾಧ್ಯತೆಯೂ ತೆರೆದುಕೊಳ್ಳುತ್ತದಾದ... ಅದು ಮಹತ್ವದ ಪ್ರಯೋಗವಾಗಿರುತ್ತದೆ.

ಮೇಲೆ ಹೇಳಲಾದ ಇವೇ ಅಸಲೀ ಪರಿಹಾರಗ... ಮತ್ತು ಪರ್ಯಾಯಗಳು ಎಂಬ ಅಭಿಪ್ರಾಯ ನನ್ನದ... ಆದರೆ, ಈ ಕುರಿತು ಪರ್ಯಾಯವನ್ನು ಬಯಸುವ... ನಡುವ ಸಹಿಷ್ಣುತೆಯಿಂದ ಕೂಡಿದ ಚರ್ಚೆ ನಡೆಯುವುದ... ಸಾಧ್ಯವಾಗಬೇಕು.

ಮೂರನೆಯ ಅಂಶ ಅಭಿವೃದ್ಧಿಯ ಭಾಷೆಯದ... ಅಂದರೆ ನಾವು ಬಳಸುವ ವಾಕ್ಯ ಪದಗಳದ್ದು ಮಾತ್ರವ... ನಾವು ಮುಂದಿಡುವ ಹಕ್ಕೊತ್ತಾಯಗಳು ಏನು, ಎಂ... ಎಂಬುದೂ ಸೇರಿ ಕೆಲವೊಮ್ಮೆ ನಾವು ಮುಂದಿಡುತ್ತಿರು... ಅಭಿವೃದ್ಧಿಯ ಮಾದರಿಯನ್ನು ತೀರ್ಮಾನಿಸುತ್ತದ... ಉದಾಹರಣೆಗೆ, ಕೃಷಿಯ ಸಮಸ್ಯೆಗಳನ್ನು ಬಗೆಹರಿಸಲು... ದೊಡ್ಡ ಪ್ರಮಾಣದಲ್ಲಿ ಕೋಲ್ಡ್ ಸ್ಟೋರೇಜ್ ನಿರ್ಮಾ... ಆಗಬೇಕು. ಇದರಿಂದ ಹೆಚ್ಚಿನ ಉತ್ಪಾದನೆಯನ್ನು... ಸಂಗ್ರಹಿಸಿಟ್ಟುಕೊಳ್ಳಲು ಅನುಕೂಲವಾಗುತ್ತದೆ ಎಂದಷ್ಟೇ... ಹೇಳಿಬಿಟ್ಟರೆ ಅದರಿಂದ ಅಪಾಯವೇ ಹೆಚ್ಚು. ಇಂದು... ದೇಶದ ಅತ್ಯಂತ ದೊಡ್ಡ ಕೋಲ್ಡ್‌ಸ್ಟೋರೇಜ... ಹೊಂದಿರುವುದು ಗೌತಮ್ ಅದಾನಿ ಆಗಿದ್ದಾನೆ. ... ಸಾರಿಯ ತೊಗರಿಬೇಳೆ ಬೆಲೆ ಏರಿಕೆಯ ಹಿಂದೆ ಅ... ಪಾತ್ರವೇನು ಎಂಬುದರ ತನಿಖೆ ನಡೆದರೆ, ಈ ಅಪಾಯದ... ಪ್ರಮಾಣ ಇನ್ನೂ ನಿಚ್ಚಳವಾಗುತ್ತದೆ.

ಜಾಗತೀಕರಣ, ಉದಾರೀಕರಣ ಎನ್ನುವ ಪದಗಳು... ಸಹ ಸಕಾರಾತ್ಮಕ ಪದಗಳೇ. ಅಭಿವೃದ್ಧಿ ಎಂಬ... ಪದದಂತೆಯೇ. ಇವಕ್ಕೂ ಸೂಕ್ತ ಪರ್ಯಾಯಗಳನ್ನು ನಾವು... ಕಂಡುಕೊಳ್ಳಬೇಕು. ಅಭಿವೃದ್ಧಿ ಎಂಬ ಜಾಗದಲ್ಲಿ... ಸರ್ವೋದಯ ಎಂದು ಬಳಸೋಣ ಎಂದು... ಯು.ಆರ್.ಅನಂತಮೂರ್ತಿಯವರು ಹೇಳುತ್ತಿದ್ದರು. ಅದು... ಎಷ್ಟರಮಟ್ಟಿಗೆ ಎಲ್ಲರಿಗೂ ಒಪ್ಪಿಗೆಯಾಗುತ್ತದೋ ಗೊತ್ತಿಲ್ಲ... ಜಾಗತೀಕರಣ ಎಂದರೆ ಅಪಾಯದ ಅರಿವಾಗುವುದಿಲ್ಲವೆಂದು... ಕೆಲವು ಮಾರ್ಕ್ಸಿಸ್ಟರು ಸಾಮ್ರಾಜ್ಯಶಾಹಿ ಜಾಗತೀಕರಣ ಎಂದು... ಹೇಳುತ್ತಿದ್ದರು. ಅದು ಹೇಳಬೇಕಾದ್ದನ್ನು ಹೇಳುತ್ತಿತ್ತು, ಆದರೆ... ಅದು ಜನರಿಗೆ ಅರ್ಥವಾಗುತ್ತದಾ ಇಲ್ಲವೋ ಹೇಳಲು... ಕಷ್ಟ.

ಚಳವಳಿಯ ಭಾಷೆಯನ್ನೂ ಅದರ ವಿರೋಧಿಗಳು... ಬಳಸಲು ಆರಂಭಿಸಿದಾಗ ನಾವು ಹೊಸ ಭಾಷೆಯನ್ನು... ಕಂಡುಕೊಳ್ಳಬೇಕು. ಕಾರ್ಪೊರೇಟ್‌ಗಳೂ, ಫ್ಯಾಸಿಸ್ಟರೂ ಸಹ... ಚಳವಳಿಯ ವಿವಿಧ ರೂಪಗಳನ್ನು ಬಳಸಲು ಆರಂಭಿಸುತ್ತಿರು... ವಾಗ ಅಲ್ಲೂ ನಾವು ಭಿನ್ನವಾದ ಪ್ರಯೋಗಗಳನ್ನು ಮಾಡುವ... ಅಗತ್ಯವಿದೆ. ಅಂದರೆ ಸಂವಹನದ ವಿವಿಧ ಮಾದರಿಗಳ... ವಿಚಾರದಲ್ಲೂ ಪರ್ಯಾಯದ ಅನ್ವೇಷಣೆ ಅಗತ್ಯವಿದೆ.

ಈ ಎಲ್ಲಾ ಪ್ರಶ್ನೆಗಳನ್ನೂ ಕೈಗೆತ್ತಿಕೊಳ್ಳುವ ಚರ್ಚೆಯು... ನಮಗೆ ಪರ್ಯಾಯವನ್ನು ಕೊಡಬಲ್ಲುದು ಎಂಬ ಆಶಾವಾದ... ನನಗಿದೆ.

(ಈ ಅಂಕಣಕಾರನು ಮಂಗಳೂರಿನ 'ಜನನುಡಿ'ಯ... ಗೋಷ್ಠಿಯೊಂದರಲ್ಲಿ ಮಂಡಿಸಿದ ಮತ್ತು... ಮಂಡಿಸಬೇಕೆಂದುಕೊಂಡಿದ್ದ ವಿಚಾರಗಳು)

ಫ್ರೀ ಬೇಸಿಕ್ಸ್ ವಿರೋಧಿಸಿ, ನೆಟ್ ನ್ಯೂಟ್ರಾಲಿಟಿ ಕಾಪಾಡಿ



● ಗೌರಿ ಲಂಕೇಶ್
editorlankesh@gmail.com


ಕಳೆದ ಹಲವು ದಿನಗಳಿಂದ ಎಲ್ಲಾ ದಿನಪತ್ರಿಕೆಗಳಲ್ಲಿ ...ರತವನ್ನು ಒಗ್ಗೂಡಿಸುವ' ಒಂದು ಜಾಹೀರಾತು ...ರು-ನಾಲ್ಕು ಪುಟಗಳಲ್ಲಿ ಪ್ರಕಟಗೊಂಡಿದೆ. ಜೊತೆಗೆ ...ೀ ಜಾಹೀರಾತು ದೇಶದಾದ್ಯಂತ ಸಿನಿಮಾ ಮಂದಿರಗಳಲ್ಲಿ, ... ಚಾನೆಲ್‌ಗಳಲ್ಲಿ, ಅಂತರ್‌ಜಾಲದಲ್ಲಿ, ಹೋರ್ಡಿಂಗ್ ...ಲ್ಲೂ ಕಾಣಿಸಿಕೊಂಡಿದೆ. 'ಸಂಯುಕ್ತ ಭಾರತವನ್ನು ...ರ್ಥಿಸಿ', 'ಅಂಕೀಯ ಸಮಾನತೆಯ ದಿಕ್ಕಿನಲ್ಲಿ ಪ್ರಥಮ ...ಜ್ಜೆ', 'ಅಂಕೀಯ ಸಮಾನತೆಯನ್ನು ಸಮರ್ಥಿಸಲು 100 ...ೀಟಿ ಕಾರಣಗಳಿವೆ' ಎಂದು ಈ ಜಾಹೀರಾತು ಸಾರುತ್ತದೆ. ...ರ ಸಾರಾಂಶ ಇಷ್ಟು: ಫೇಸ್‌ಬುಕ್ ಪ್ರಾಯೋಜಿತ ...ೀ ಬೇಸಿಕ್ಸ್ ಎಂಬ 'ಉಚಿತ ಮಾಹಿತಿ ...ದೋಲನ'ದಿಂದಾಗಿ ನೂರು ಕೋಟಿ ಭಾರತೀಯರು ...ದ್ಯೋಗ, ಶಿಕ್ಷಣ ಮತ್ತು ಅವಕಾಶಗಳನ್ನು ಪಡೆಯುತ್ತಾರೆ; ...ನ್ನು ತಡೆದರೆ ಭಾರತದ ಪ್ರಗತಿಯೇ ಕುಂಟುತ್ತದೆ; ...ದಿಂದ ಎಲ್ಲರೂ ಜಾಹೀರಾತುಗಳಲ್ಲಿ ಪ್ರಕಟಗೊಂಡಿರುವ ...ೀನ್ ನಂಬರ್‌ಗೆ ಮಿಸ್ಡ್ ಕಾಲ್ ಕೊಟ್ಟು ಫೇಸ್‌ಬುಕ್‌ನ ... ಬೇಸಿಕ್ಸ್‌ಗೆ ಬೆಂಬಲ ಸೂಚಿಸಬೇಕು ಎಂದು ...ೀರಲಾಗಿದೆ.


...ಏನಿದು ಫ್ರೀ ಬೇಸಿಕ್ಸ್? ಇದನ್ನು ಯಾಕೆ ...ಬಲಿಸಬೇಕು? ಇದರಿಂದ ಭಾರತೀಯರಿಗೆ ಆಗುವ ...ಭವೇನು? ಇದನ್ನು ಫೇಸ್‌ಬುಕ್ ನಿಜವಾಗಲೂ ...ಚಿತವಾಗಿ ನೀಡಲಿದೆಯೇ? ಹಾಗಾದರೆ ಈ ...ಹೀರಾತುಗಳಿಗಾಗಿ ಫೇಸ್‌ಬುಕ್ ಕಂಪನಿ ಯಾಕೆ ...ೋಬ್ಬರಿ 20 ಮಿಲಿಯನ್ ಡಾಲರ್‌ಗಳನ್ನು (ಅಂದಾಜು ...2 ಕೋಟಿ ರೂಪಾಯಿಗಳು) ವ್ಯಯಿಸುತ್ತಿದೆ? ಈ ...ಲ್ಲಿ ಪ್ರಶ್ನೆಗಳನ್ನು ಇಟ್ಟುಕೊಂಡು ನೋಡಿದರೆ ಒಂದು ...ಡ್ಡ ಷಡ್ಯಂತ್ರವೇ ತೆರೆದುಕೊಳ್ಳುತ್ತದೆ.

... ಮೋದಿ ಮಹಾಶಯ ಅಮೆರಿಕಕ್ಕೆ ಭೇಟಿ ನೀಡಿದಾಗ ...ಜಿಟಲ್ ಇಂಡಿಯಾ' ಎಂಬ ಯೋಜನೆಯನ್ನು ...ೀಷಿಸಿದ. ಅದರ ಬೆನ್ನಲ್ಲೇ ಫೇಸ್‌ಬುಕ್ ಮಾಲೀಕ ...ರ್ಕ್ ಜುಕರ್‌ಬರ್ಗ್ 'ಇಂಟರ್ನೆಟ್.ಆರ್ಗ್' ಎಂಬ ...ೀಜನೆಯನ್ನು ಪ್ರಕಟಿಸಿದ. ಬಹಳಷ್ಟು ಜನರು ಈ ...ಟರ್ನೆಟ್.ಆರ್ಗ್ ಯೋಜನೆಯು ಭಾರತ ಸರ್ಕಾರದ ...ಜಿಟಲ್ ಇಂಡಿಯಾ'ದ ಭಾಗ ಎಂದೇ ತಪ್ಪಾಗಿ ...ವಿಸಿದ್ದರು. ಅಷ್ಟೇ ಅಲ್ಲ, ಇಂಟರ್ನೆಟ್.ಆರ್ಗ್ ಅನ್ನು ...ಬಲಿಸಿದರೆ 'ಡಿಜಿಟಲ್ ಇಂಡಿಯಾ'ವನ್ನೇ ...ಬಲಿಸಿದಂತೆ ಎಂಬಂತೆ ಅಂತರಜಾಲದಲ್ಲಿ ...ಬಿಸಲಾಗಿತ್ತು. ಆದರೆ ಇಂಟರ್ನೆಟ್.ಆರ್ಗ್ ಎಂಬುದು ...ತರಜಾಲದ ಮೇಲೆ ಸರ್ವಾಧಿಕಾರ ಸ್ಥಾಪಿಸಲು ...ಕೆರ್‌ಬರ್ಗ್ ಹೆಣೆದಿರುವ ತಂತ್ರ ಎಂದು ಗೊತ್ತಾಗಲು ...ಳ ಕಾಲ ಹಿಡಿಯಲಿಲ್ಲ, ದೇಶದಾದ್ಯಂತ ಜನ ಅದನ್ನು ...ೋಧಿಸಲು ಶುರುಮಾಡಿದರು. ಆಗ ವಿಧಿ ಇಲ್ಲದೆ ...ರ್‌ಬರ್ಗ್ ಅದನ್ನು ಕೈಬಿಟ್ಟಿದ್ದ, ಈಗ ಅದನ್ನೇ 'ಫ್ರೀ ...ಕ್ಸ್' ರೂಪದಲ್ಲಿ ಮತ್ತೊಮ್ಮೆ ಭಾರತೀಯರಿಗೆ ...ಚಯಿಸಿ, ಅದರ ಸುತ್ತ ಹಲವಾರು ಸುಳ್ಳುಗಳನ್ನು ... ಭಾರತೀಯರೇ ತಮ್ಮ ಸರ್ಕಾರದ ಮೇಲೆ ಒತ್ತಡ ...ವಂತೆ ಮಾಡಿ ತನ್ನ ಬೇಳೆ ಬೇಯಿಸಿಕೊಳ್ಳಲು ...ಂದಾಗಿದ್ದಾನೆ. ಅದನ್ನು ಅರಿತ ಒಂದಷ್ಟು ಭಾರತೀಯರು ...ಡ್ 'ಇಂಟರ್ನೆಟ್' ಎಂಬ ಪ್ರಚಾರಾಂದೋಲನವನ್ನು ...ಕ್ಕಿಕೊಂಡಿದ್ದಾರೆ. 'ಫ್ರೀ ಬೇಸಿಕ್ಸ್ ಅನ್ನು ಧಿಕ್ಕರಿಸಿ ...ರ್‌ಜಾಲ ತಾಟಸ್ಥ್ಯವನ್ನು ಕಾಪಾಡಿಕೊಳ್ಳೋಣ' ಎಂದು ...ನೀಡಿದ್ದಾರೆ.

...ಅಂತರ್‌ಜಾಲ ತಾಟಸ್ಥ್ಯ ಎಂದರೆ ಎಲ್ಲರಿಗೂ ...ರ್ನೆಟ್ ಮುಕ್ತವಾಗಿ ಸಿಗುವಂತೆ ನೋಡಿಕೊಳ್ಳುವುದು. ...ರ್‌ಜಾಲ ಮುಕ್ತವಾಗಿದ್ದರಿಂದಲೇ ಗೂಗಲ್ ಮತ್ತು ...-ಫೇಸ್‌ಬುಕ್ ಕೂಡ ಸೇರಿದಂತೆ-ಸಂಸ್ಥೆಗಳು ಬೆಳೆಯಲು ...ವಾಗಿದ್ದು. ಈಗಿನ ನಿಯಮಗಳ ಪ್ರಕಾರ ಯಾವುದೇ ...ಾವ ಸಂಸ್ಥೆಯಿಂದ ನಾವು ನೆಟ್ ಕನೆಕ್ಷನ್ ಪಡೆದಿದ್ದರೂ ... ಯಾವುದೇ ವೆಬ್‌ಸೈಟ್‌ಗೆ ಹೋಗುವ ಸ್ವಾತಂತ್ರ್ಯವನ್ನು ...ಂದಿದ್ದೇವೆ. ಅಷ್ಟೇ ಅಲ್ಲ, ಟೆಲಿಕಾಂ ಕಂಪನಿಗಳು ಯಾವುದೇ ತಾರತಮ್ಯವಿಲ್ಲದೆ ಸಮಾನಾಂತರ ವೇಗದಲ್ಲಿ ವೆಬ್‌ಸೈಟ್‌ಗಳು ತೆರೆಯುವಂತೆ ನೋಡಿಕೊಳ್ಳಬೇಕು. ಉದಾಹರಣೆಗೆ ರಿಲಯನ್ಸ್ ಟೆಲಿಕಾಂ ಕಂಪನಿಯು ಫ್ಲಿಪ್‌ಕಾರ್ಟ್ ಕಂಪನಿಯೊಂದಿಗೆ ಒಡಂಬಡಿಕೆ ಮಾಡಿಕೊಂಡಿದ್ದರೆ ಅದು ಗ್ರಾಹಕನಿಗೆ ಅಮೆಜಾನ್ ಎಂಬ ಇನ್ನೊಂದು ವೆಬ್‌ಸೈಟಿಗೆ ಪ್ರವೇಶವನ್ನು ನಿರಾಕರಿಸುವಂತಿಲ್ಲ ಅಥವಾ ಅದಕ್ಕೆ ಹೆಚ್ಚಿನ ದರವನ್ನು ಪಡೆಯುವಂತಿಲ್ಲ. ಇದನ್ನು ನೆಟ್ ನ್ಯೂಟ್ರಾಲಿಟಿ ಎಂದು ಕರೆಯುತ್ತಾರೆ. ಇಂತಹ ನ್ಯೂಟ್ರಲ್ ನೀತಿಯು ಹಲವಾರು ದೇಶಗಳಲ್ಲಿ ಈಗಾಗಲೇ ಜಾರಿಯಲ್ಲಿದೆ.

ಆದರೆ ನಮ್ಮ ದೇಶದಲ್ಲಿರುವ ಟೆಲಿಕಾಂ ಕಂಪನಿಗಳು ಹಲವಾರು ವರ್ಷಗಳಿಂದ ಈ ನೆಟ್ ನ್ಯೂಟ್ರಾಲಿಟಿ ನೀತಿಯನ್ನು ಬದಲಾಯಿಸಬೇಕೆಂದು ಟೆಲಿಕಾಂ ನಿಯಮಗಳನ್ನು ಜಾರಿಗೊಳಿಸುವ ಟ್ರಾಯ್ ಮೇಲೆ ಒತ್ತಡ ತರುತ್ತಿವೆ. ಈಗ ಅದನ್ನು ಫೇಸ್‌ಬುಕ್ ಮತ್ತು ರಿಲಯನ್ಸ್ ಕಂಪನಿ ಜೊತೆಗೂಡಿ ಫ್ರೀ ಬೇಸಿಕ್ಸ್ ಎಂಬ ಷಡ್ಯಂತ್ರದ ಮೂಲಕ ಮಾಡಲು ಮುಂದಾಗಿವೆ. ನೆಟ್ ನ್ಯೂಟ್ರಾಲಿಟಿಯನ್ನು ಫ್ರೀ ಬೇಸಿಕ್ಸ್ ಉಲ್ಲಂಘಿಸುತ್ತಿದ್ದರಿಂದ ಇತ್ತೀಚೆಗೆ ಟ್ರಾಯ್ ಸಂಸ್ಥೆ ರಿಲಯನ್ಸ್ ಕಂಪನಿಗೆ ಫ್ರೀ ಬೇಸಿಕ್ಸ್ ಅನ್ನು ತಡೆಯುವಂತೆ ಆದೇಶಿಸಿದ್ದರಿಂದ ಈಗ





ಈ ದೊಡ್ಡ ಪ್ರಚಾರಾಂದೋಲನ ನಡೆಯುತ್ತಿದೆ.

ಆದರೆ ಫೇಸ್‌ಬುಕ್‌ನ ಮಾಲೀಕ ಜುಕರ್‌ಬರ್ಗ್ ತಾನು ಫ್ರೀ ಬೇಸಿಕ್ಸ್ ಮೂಲಕ ಭಾರತದಿಂದ ಬಡತನವನ್ನು ತೊಲಗಿಸುತ್ತೇನೆ, ಇಲ್ಲಿನ ಎಲ್ಲಾ ಮಕ್ಕಳಿಗೆ ಉಚಿತ ಶಿಕ್ಷಣ ನೀಡುತ್ತೇನೆ, ಬಡವರಿಗೆ ಉದ್ಯೋಗಗಳನ್ನು ಸೃಷ್ಟಿಸುತ್ತೇನೆ, ಆರೋಗ್ಯ ಸೇವೆ ಸಲ್ಲಿಸುತ್ತೇನೆ ಎಂದೆಲ್ಲಾ ಬೂಸಿ ಬಿಡುತ್ತಿದ್ದಾನೆ. ಆದರೆ ಅಸಲಿಯತ್ತು ಬೇರೆ ಇದೆ. ಭಾರತದಲ್ಲಿ ಈಗ 30 ಕೋಟಿ ಜನ ಇಂಟರ್ನೆಟ್ ಕನೆಕ್ಷನ್ ಹೊಂದಿದ್ದಾರೆ. ಅಷ್ಟೇ ಅಲ್ಲ, ಎಲ್ಲರ ಕೈಗಳಿಗೆ ಈಗ ಸ್ಮಾರ್ಟ್ ಫೋನ್‌ಗಳು ಬಂದಿರುವುದರಿಂದ ಕಳೆದ ಒಂದು ವರ್ಷದಲ್ಲೇ ಆರು ಕೋಟಿ ಜನ ನೆಟ್ ಕನೆಕ್ಷನ್ ಪಡೆದಿದ್ದಾರೆ. ನಮ್ಮ ದೇಶದಲ್ಲಿ ನೆಟ್ ಕನೆಕ್ಷನ್ ಹೊಂದದೆ ಇರುವವರ ಸಂಖ್ಯೆ 60 ಕೋಟಿ ಎಂದು ಅಂದಾಜಿಸಲಾಗಿದೆ.

ಈಗ ಫೇಸ್‌ಬುಕ್ ಕಂಪನಿಯು ತನ್ನ ಭಾರತೀಯ ಗ್ರಾಹಕರಿಂದ ಪ್ರತಿ ವರ್ಷ ಒಂದು ಬಿಲಿಯನ್ ಡಾಲರ್‌ಗಳನ್ನು ಗಳಿಸುತ್ತಿದೆ. ಅಂದಹಾಗೆ, ತಾನು ವಿದೇಶಿ ಕಂಪನಿ ಆದ್ದರಿಂದ ಈ ಆದಾಯದ ಮೇಲೆ ಭಾರತ ಸರ್ಕಾರಕ್ಕೆ ನಯಾ ಪೈಸೆಯ ತೆರಿಗೆಯನ್ನು ಕಟ್ಟುವುದಿಲ್ಲ ಎಂದು ವಾದಿಸುತ್ತದಲ್ಲದೆ, ಅದೇ ನೆಪವನ್ನು ಇಟ್ಟುಕೊಂಡು ಇಲ್ಲಿನ ಕಾನೂನಿನಡಿ ತಾನು ಬರುವುದಿಲ್ಲ ಎಂದು ಹೇಳುತ್ತದೆ. ಇರಲಿ, ಬರುವ ವರ್ಷಗಳಲ್ಲಿ ಭಾರತದಲ್ಲಿ ಇಂಟರ್ನೆಟ್ ಬಳಕೆದಾರರು ಹೆಚ್ಚಾಗುವುದರಿಂದ ಅದನ್ನು ಆಧಾರವಾಗಿಟ್ಟುಕೊಂಡು ತನ್ನ ಆದಾಯವನ್ನು ಹೆಚ್ಚಿಸಿಕೊಳ್ಳಲು ಫೇಸ್‌ಬುಕ್ ಮತ್ತು ರಿಲಯನ್ಸ್ ಕಂಪನಿಗಳು ಈಗ ಫ್ರೀ ಬೇಸಿಕ್ಸ್ ಎಂಬ ಅಸ್ತ್ರವನ್ನು ಉಪಯೋಗಿಸುತ್ತಿದ್ದಾವೆ. ಆ ಆದಾಯ ಎಷ್ಟು ದೊಡ್ಡ ಮೊತ್ತದ್ದಾಗಿರುತ್ತದೆ ಎಂದು ಮೇಲೆ ತಿಳಿಸಿರುವ ಅಂಕಿಅಂಶಗಳೇ ತೋರಿಸುತ್ತವೆ.

ಫ್ರೀ ಬೇಸಿಕ್ಸ್ ಏನು ಮಾಡಲಿದೆ ಎಂದರೆ ಅಂತರ್‌ಜಾಲವನ್ನು ಸಣ್ಣಸಣ್ಣ ಭಾಗಗಳಾಗಿ ವಿಂಗಡಿಸಿ, ತನ್ನೊಂದಿಗೆ ಒಡಂಬಡಿಕೆ ಮಾಡಿಕೊಂಡಿರುವ ಕಂಪನಿಗಳು ಮಾತ್ರ ಅಂತರ್‌ಜಾಲದಲ್ಲಿ ಜನರಿಗೆ ಸುಲಭವಾಗಿ ಸಿಗುವಂತೆ ಮಾಡುತ್ತದೆ. ಆ ಮೂಲಕ ವೈರಿ ಕಂಪನಿಗಳಿಗೆ, ಹೊಸ ಕಂಪನಿಗಳಿಗೆ ಮಾರುಕಟ್ಟೆ ಸಿಗದಂತೆ ನೋಡಿಕೊಳ್ಳುತ್ತದೆ. ಹಲವರ ಪ್ರಕಾರ ತೈಲ ಹೇಗೆ 21ನೇ ಶತಮಾನದ ಪ್ರಮುಖ ಸರಕಾಗಿದೆಯೋ ಹಾಗೆ ಬರುವ ವರ್ಷಗಳಲ್ಲಿ ಜನರ ದತ್ತಾಂಶವು ಮುಖ್ಯ ಸರಕಾಗಲಿದೆ. ಆದ್ದರಿಂದ ಫ್ರೀ ಬೇಸಿಕ್ಸ್ ಅನ್ನು ಪಡೆಯುವ ಜನರ ದತ್ತಾಂಶವು ಫೇಸ್‌ಬುಕ್ ಕಂಪನಿಗೆ ಹೆಚ್ಚು ಲಾಭ ಮಾಡಿಕೊಳ್ಳಲು ದೊಡ್ಡ ಮಾರ್ಗವಾಗಲಿದೆ. ಇದೆಲ್ಲದರಷ್ಟೇ ಮುಖ್ಯವಾಗಿ ಯಾವ ನೆಟ್ ನ್ಯೂಟ್ರಾಲಿಟಿಯಿಂದಾಗಿಯೇ ಫೇಸ್‌ಬುಕ್ ಯಶಸ್ವಿಯಾಗಿ ರೂಪಗೊಂಡಿತೋ ಅದೇ ನ್ಯೂಟ್ರಾಲಿಟಿಯನ್ನು ನಾಶ ಮಾಡುವ ಮೂಲಕ ತನಗೆ ಮುಂದೆ ಯಾವ ಪ್ರತಿಸ್ಪರ್ಧಿಯೂ ಬೆಳೆಯದಂತೆ ತಡೆಯಲಿದೆ.

ಇವೆಲ್ಲ ಟೆಕ್ನಿಕಲ್ ವಿಷಯವಾದವು. ನಮ್ಮ ದೇಶದ ವಾಸ್ತವ ಹೇಗಿದೆ ಎಂದು ನೋಡುವುದು ಉತ್ತಮ. ಶಿಕ್ಷಣ ವ್ಯವಸ್ಥೆಗೆ ಇಂಟರ್ನೆಟ್ ಒಂದು ಪೂರಕ ವ್ಯವಸ್ಥೆಯೇ ಹೊರತು ಅದೇ ಶಿಕ್ಷಣ ಮಾಧ್ಯಮ ಆಗುವುದಿಲ್ಲ, ಅಷ್ಟೇ ಮುಖ್ಯವಾಗಿ ನಮ್ಮ ದೇಶದ ಹೆಚ್ಚಿನ ಮಕ್ಕಳು ತಮ್ಮ ಮಾತೃಭಾಷೆಯಲ್ಲೇ ಶಿಕ್ಷಣ ಪಡೆಯುತ್ತಾರೆ; ಆದರೆ ಇಂಟರ್ನೆಟ್‌ನಲ್ಲಿನ ಮಾಹಿತಿ ಶೇ. 53 ಇಂಗ್ಲಿಷ್‌ನಲ್ಲಿದೆ. ಫ್ರೀ ಬೇಸಿಕ್ಸ್ ಎಂದೂ ನಮ್ಮ ಶಾಲೆಗಳ ಮತ್ತು ನಮ್ಮ ಅಧ್ಯಾಪಕರ ಸ್ಥಾನವನ್ನು ತುಂಬಲು ಸಾಧ್ಯವಿಲ್ಲ.

ಇನ್ನು ಬಡತನ ನಿರ್ಮೂಲನೆ ಫ್ರೀ ಬೇಸಿಕ್ಸ್‌ನಿಂದ ಸಾಧ್ಯವೇ ಇಲ್ಲ. ಆರೋಗ್ಯ ನಿರ್ವಹಣೆಗೆ ವೈದ್ಯರು, ಔಷಧ ಮತ್ತು ಆಸ್ಪತ್ರೆಗಳು ಬೇಕೇ ಹೊರತು ಫ್ರೀ ಬೇಸಿಕ್ಸ್‌ನಲ್ಲಿ ಸಿಗುವ ಮಾಹಿತಿಯಿಂದ ಯಾವ ರೋಗವೂ ನಿವಾರಣೆ ಆಗುವುದಿಲ್ಲ. ಪ್ರಬೀರ್ ಪುರ್ಕಾಯಸ್ಥ ಎಂಬುವವರು ಹೇಳಿರುವಂತೆ, ಫ್ರೀ ಬೇಸಿಕ್ಸ್ ತರಹದ ಕಂಪನಿಗಳು ಕುಡಿಯುವ ನೀರು, ಸಾರ್ವಜನಿಕ ಸಂಪರ್ಕ ಇತ್ಯಾದಿ ಮೂಲ ಸೌಕರ್ಯಗಳನ್ನೇನೂ ಒದಗಿಸುವುದಿಲ್ಲ, ಹೆಚ್ಚೆಂದರೆ ಸಾರ್ವಜನಿಕ ಸಂಪರ್ಕವಾದ ಬಸ್ ಬದಲಾಗಿ ಉಬರ್ ಟ್ಯಾಕ್ಸಿಯನ್ನು ಫ್ರೀ ಬೇಸಿಕ್ಸ್ ಮೂಲಕ ಪಡೆಯಬಹುದಷ್ಟೇ. ಅದರಿಂದ ನಮ್ಮ ದೇಶದ ಬಡವರಿಗೆ ಆಗುವ ಲಾಭವಾದರೂ ಏನು?!

ಬರುವ ವರ್ಷಗಳಲ್ಲಿ ಎಲ್ಲರಿಗೂ ಇಂಟರ್ನೆಟ್ ಅತ್ಯಗತ್ಯವಾಗಲಿದೆ. ಆದ್ದರಿಂದ ಅದು ಎಲ್ಲರಿಗೂ ಮುಕ್ತವಾಗಿ ಲಭಿಸುವಂತಿರಬೇಕು. ಯಾವ ಕಾರಣಕ್ಕೂ ಅಲ್ಲಿ ಕೆಲವೇ ಕೆಲವರು ಸಾರ್ವಭೌಮ ಸ್ಥಾನವನ್ನು ಪಡೆಯದೆ ಇರುವಂತೆ ಕಾನೂನುಗಳು ರೂಪುಗೊಳ್ಳಬೇಕು. ಈ ಕಾರಣಕ್ಕಾಗಿ ಎಲ್ಲರೂ 'ಸೇವ್ ಇಂಟರ್ನೆಟ್' ಎಂಬ ಆಂದೋಲನಕ್ಕೆ ಬೆಂಬಲವನ್ನು ವ್ಯಕ್ತಪಡಿಸಬೇಕಿದೆ.

ಫ್ರೀ ಬೇಸಿಕ್ಸ್ ಹುನ್ನಾರವನ್ನು ಮತ್ತು ನೆಟ್ ನ್ಯೂಟ್ರಾಲಿಟಿಯ ಪ್ರಾಮುಖ್ಯತೆಯನ್ನು ಅರಿಯಲು 'ಆಲ್ ಇಂಡಿಯಾ ಬಕ್‌ಚೋದ್' ಎಂಬ ಹಾಸ್ಯ ತಂಡ ನಿರ್ಮಿಸಿರುವ ಮೂರು ಕಿರು ಚಿತ್ರಗಳನ್ನು ನೆಟ್‌ನಲ್ಲಿ ವೀಕ್ಷಿಸಬಹುದು. ದೊಡ್ಡದೊಡ್ಡ ಲೇಖನಗಳು ಗಂಭೀರವಾಗಿ ಕೊಡುವ ಮಾಹಿತಿಗಿಂತ ಈ ಹಾಸ್ಯಗಾರರು ಅದನ್ನೇ ಚೆನ್ನಾಗಿ ಹೇಳಿದ್ದಾರೆ. ●


ನಮ್ಮ ಎಲ್ಲಾ ಓದುಗರಿಗೆ ಮತ್ತು ಏಜೆಂಟರಿಗೆ ಹೊಸ ವರ್ಷದ ಶುಭಾಶಯಗಳು





ಸಮಯ್, ಸಮರ್ ಮತ್ತು ಇಶಾ ಲಂಕೇಶ್



ಜಸ್ಟೀಸ್ ಎಸ್ಸಾರ್ ನಾಯಕ್ ಲೋಕಾಯುಕ್ತಕ್ಕೆ ಲಾಯಕ್ಕಾ?







ಜಸ್ಟೀಸ್ ಎಸ್.ಆರ್. ನಾಯಕ್

ಲೋಕಾಯುಕ್ತ ಸಂಸ್ಥೆಯ ವಿಶ್ವಾಸಾರ್ಹತೆ ನೆಲ ಕಚ್ಚಿರುವ ಈ ಕೇಡು ಕಾಲ ಘಟ್ಟದಲ್ಲಿ ಹೊಸ ಲೋಕಾಯುಕ್ತ ನ್ಯಾಯಮೂರ್ತಿಗಾಗಿ ಹುಡುಕಾಟ-ತಡಕಾಟ ನಡೆಯುತ್ತಿದೆ. ಸರ್ಕಾರ ಪರಿಶೀಲಿಸುತ್ತಿರುವ ಮೂರ್‍ನಾಲ್ಕು ಜಸ್ಟೀಸ್‌ಗಳ ಪಟ್ಟಿಯಲ್ಲಿ ಮಾನವ ಹಕ್ಕು ಆಯೋಗದ ಮಾಜಿ ಆಧ್ಯಕ್ಷರೂ ಹಾಲಿ ಕಾನೂನು ಆಯೋಗಕ್ಕೆ ಅಧ್ಯಕ್ಷರಾಗಿರುವ ಎಸ್ಸಾರ್ ನಾಯಕ್ ಹೆಸರೂ ಸೇರಿಕೊಂಡಿದೆ ಎಂಬುದು ಆತನ ವ್ಯಕ್ತಿತ್ವ ವೈರುಧ್ಯ ಬಲ್ಲವರ ಬೆಚ್ಚಿಬೀಳಿಸಿದೆ. ಸಿಎಂ ಸಿದ್ದುರ ಆಪ್ತ ವಲಯದ ಸಖ್ಯದ 'ಜಸ್ಟೀಸ್' ಎಂಬ ಪ್ರತೀತಿಯ ಎಸ್ಸಾರ್ ನಾಯಕ್ ಏನಾದರೂ ಲೋಕಾ ಮುಖ್ಯಸ್ಥರಾದರೆ ರಾಜ್ಯ ಗತಿಯೇನೆಂಬ ಆತಂಕ ನ್ಯಾಯ ಪಕ್ಷಪಾತಿಗಳಲ್ಲಿ ಶುರುವಾಗಿದೆ!

ಉತ್ತರ ಕನ್ನಡದ 'ನಾಡವ' ಎಂಬ ಜನಾಂಗದ ಎಸ್ಸಾರ್ ನಾಯಕ್ ಕಷ್ಟಪಟ್ಟು ಮೇಲೆ ಬಂದವರು. ಅವರೇ ಕಂಡಕಂಡ ವೇದಿಕೆಯಲ್ಲಿ ಹೇಳಿಕೊಳ್ಳುವಂತೆ-ರಾಗಿ ಅಂಬ್ಲಿ ಉಂಡು ಬೆಳೆದದ್ದಕ್ಕೆ ಸುಬ್ರಾಯ ಒಬ್ಬ ಮನುಷ್ಯ ಎಂಬುದೇನೂ ನಿಜ. ಓದಲು ಕಾಸಿಲ್ಲದಿದ್ದಾಗ ಪಾತ್ರೆ ತೊಳೆದು ನ್ಯಾಯಮೂರ್ತಿಯಂಥ ದೊಡ್ಡ ಪದವಿಗೇರಿದವರು; ಸಾಮಾಜಿಕ ನ್ಯಾಯದ ಪ್ರಖರ ಪ್ರತಿಪಾದಕ ಎಲ್.ಜಿ. ಹಾವನೂರು ಗರಡಿಯಲ್ಲಿ ಪಳಗಿದವರು. ಈ ಕಾರಣಕ್ಕೇ ನಾಯಕ್ ಸಮಾಜಮುಖಿ ಪ್ರಗತಿಪರ ಎಂಬ ಭ್ರಮೆಯೂ ಮೂಡಿತ್ತು. ಆದರೆ ಯಾವಾಗ ನಾಯಕ್ ಹೈಕೋರ್ಟ್ ನ್ಯಾಯಮೂರ್ತಿಗಳಾಗಿ ಪ್ರತಿಷ್ಠಾಪಿತರಾದರೋ ಆಗವರ ಒಲವು ನಿಲುವುಗಳ್ಯಾಕೋ ದಿಕ್ಕುತಪ್ಪಿ ಹೋದವು. ಪಾಳೆಗಾರಿ ಡೌಲು, ಒಣ ಆಡಂಬರ, ಆತ್ಮರತಿ, ತೋಳೇರಿಸಿ ಮಾತಾಡುವ ಗುಣಧರ್ಮ ನಾಯಕ್‌ರಲ್ಲಿ ಬೆಳೆದುಬಿಟ್ಟವು. ದೊಡ್ಡವರ ಕಾಲಿಗೆ ಬೀಳುವ ಕೆಳಗಿನವರು ತನ್ನ ಕಾಲು ಹಿಡಿಯಬೇಕೆನ್ನುವ ಆಷಾಢಭೂತಿಯಂತಾಗಿ ಹೋದರು.

ಜನರಿಗೆ ಶಸ್ತ್ರಾಸ್ತ್ರಗಳನ್ನು ಕೊಟ್ಟು ನಕ್ಸಲರ ವಿರುದ್ಧ ಸಶಸ್ತ್ರ ಪ್ರತಿ ದಾಳಿಗೆ ಇಳಿಸುವ 'ಸಾಲ್ವಾ ಜುಡಂ' ಎಂಬ ಅಕ್ರಮ ಪದ್ಧತಿಯೊಂದು ಛತ್ತೀಸ್‌ಗಡ ರಾಜ್ಯದಲ್ಲಿದೆ. ಇದೊಂದು ಬರ್ಬರ ಅವಮಾನವೀಯ ಮತ್ತು



ಪ್ರಜಾಪ್ರಭುತ್ವ ವಿರೋಧಿ ಕಾರ್ಯಾಚರಣೆ ಎಂದೇ ಕುಖ್ಯಾತವಾಗಿದೆ. ಇದೇ ಛತ್ತೀಸಗಡದ ಹೈಕೋರ್ಟ್ ನ್ಯಾಯಮೂರ್ತಿಗಳಾಗಿ ನಿವೃತ್ತರಾಗಿರುವ ನಾಯಕ್ ಸಾಹೇಬರು ಸಾಲ್ವಾಜುಡಂ ಸಮರ್ಥಿಸಿಕೊಂಡು ತನ್ನ ಅಸಲಿ ಮನೋಭಾವ ಅನಾವರಣ ಮಾಡಿಕೊಂಡಿದ್ದರು!

ದುರಂತವೆಂದರೆ, ಮಾನವ ಹಕ್ಕುಗಳನ್ನೇ ದಮನ ಮಾಡುವ ನರಹತ್ಯೆಗೆ ಪ್ರಚೋದಿಸುವ ಸಾಲ್ವಾಜುಡಂ ಸರಿ ಎಂದಿದ್ದ ಎಸ್ಸಾರ್ ನಾಯಕ್‌ರಿಗೆ ಅಂದಿನ ಕರ್ನಾಟಕ ಸರ್ಕಾರದ ಪ್ರಭೃತಿಗಳು ಮಾನವ ಹಕ್ಕು ಆಯೋಗದ ಅಧ್ಯಕ್ಷ ಕಿರೀಟ ಕಟ್ಟಿದ್ದರು! ರಾಜ್ಯದ ಮಾನವ ಹಕ್ಕುಗಳ ಆಯೋಗದ ಮೊದಲ ಅಧ್ಯಕ್ಷರಾಗಿ ನಾಯಕ್ ಅವತರಿಸಿದ್ದು, ಆನಂತರ ಆತ ಎಡಬಿಡಂಗಿಯಂತೆ, ಆಘಾತಕಾರಿಯಂತೆ ವರ್ತಿಸಿದ್ದು ವಿಕಟವ್ಯಂಗ್ಯವೇ ಸರಿ!!

ಹಕ್ಕು ಆಯೋಗದ ಅಧ್ಯಕ್ಷರಾಗಿ ನಾಯಕ್ ಇಡೀ ರಾಜ್ಯದ ಮಾನವ ಹಕ್ಕು ಉಲ್ಲಂಘನೆಯ ಸಂತ್ರಸ್ತರ ಅಥವಾ ದಮನಿತರ ಧ್ವನಿಯಾಗಬೇಕಿತ್ತು, ಆದರೆ ಜಿಲ್ಲಾ ಉಸ್ತುವಾರಿ ಮಂತ್ರಿಗಳು ತಂತಮ್ಮ ಅಸೆಂಬ್ಲಿ ಕಾನ್‌ಸ್ಟ್ಯೂಯೆನ್ಸ್‌ಗಳಿಗೆ ಸೀಮಿತವಾಗುವಂತೆ ನಾಯಕ್‌ರ ಹಕ್ಕು ಅಧ್ಯಕ್ಷಗಿರಿ ಆತನ ಹುಟ್ಟೂರು ಕುಮಟಾ ಆದರ ಪಕ್ಕದ ಅಂಕೋಲೆ ಆಚೆಗೆ ವಿಸ್ತಾರಗೊಳ್ಳಲೇ ಇಲ್ಲ, ಅಷ್ಟು ಕುಬ್ಜರಾಗಿ ಹೋದರು ನಾಯಕ್ ಸಾಹೇಬರು, ಪಾಪ! ತವರೂರಿಗೆ, ತವರು ಜಿಲ್ಲೆಯ ಗುಡಿಗುಂಡಾರ ಭಾರದ ಭೂಪರ ಗರಡಿಗೆ ಸರ್ಕಾರಿ ಖರ್ಚಿನಲ್ಲಿ ಪದೇಪದೇ ಸರ್ಕೀಟ್ ಹೊಡೆದ ನಾಯಕರು ತಮ್ಮ ಸ್ವಂತ ಕಾರ್ಯ ಖಯಾಲಿ ಪೂರೈಸಿಕೊಂಡಿದ್ದರು. ನಾಯಕರ ಅಧ್ಯಕ್ಷಗಿರಿ ಅವಧಿಯ ತವರೂರು ಭೇಟಿಯನ್ನೂ ಮಾನದಂಡವಾಗಿ ಪರಿಗಣಿಸಿದರೆ ಒಂದಂಶ ಖಾತ್ರಿಯಾಗುತ್ತದೆ. ಅದೆಂದರೆ, ಮಾನವ ಹಕ್ಕು ಉಲ್ಲಂಘನೆ ಆ ಅವಧಿಯಲ್ಲಿ ಉತ್ತರ ಕನ್ನಡದಲ್ಲಾದಷ್ಟು ಇನ್ನೆಲ್ಲಿಯೂ ಆಗಿರಲಿಕ್ಕಿಲ್ಲ ಎಂಬುದು!


ಹಕ್ಕು ಸಾಹೇಬರು ಉತ್ತರ ಕನ್ನಡಕ್ಕೆ ಬರ್ತಾರೆಂದರೆ ಸಾಕು, ಜಿಲ್ಲಾಡಳಿತ ಮತ್ತು ಕುಮಟಾ ತಾಲ್ಲೂಕಾಡಳಿತ ಚಡಪಡಿಕೆಗೆ ಬೀಳುತ್ತಿತ್ತು! ಜಡ್ಜ್ ಸಾಹೇಬರ ಚಪಲ ತೆವಲು ತಣಿಸಲು ತಿಪ್ಪರಲಾಗ ಕಂದಾಯ ಅಧಿಕಾರಿಗಳೂ ಹಾಕುವಂತಾಗುತ್ತಿತ್ತು. ಕರಿಕೋಟಿನ ಸಾಹೇಬರ ಅಚ್ಚುಮೆಚ್ಚಿನ ನಾಟಿ ಕೋಳಿ ಹುಡುಕಿಕೊಂಡು ಐಬಿ ಮೇಟಿ, ಪೊಲೀಸರು, ಕಂದಾಯ ನೌಕರರು ಅಂಡಲೆಯಬೇಕಾಗಿತ್ತು. ಈ ನಾಟಿ ಕೋಳಿ ಸಾರು, ನೀರ್ ದೋಸೆ, ರುಚಿ ರಹಸ್ಯದ ಹಿಂದೆ ಗುಪ್ತಚರ ಇಲಾಖೆ ಬಿದ್ದರೆ, ಖಂಡಿತ ನಾಯಕ್‌ರ ನ್ಯಾಯವಂತಿಕೆಯ ಮುಖವೊಂದು ಗೋಚರಿಸುತ್ತದೆ. ಇಂತಿಪ್ಪ ಎಸ್ಸಾರ್ ನಾಯಕರು ಲೋಕಾಯುಕ್ತರಾಗುತ್ತಾರೆಂಬ ಸುದ್ದಿ ಕೇಳಿಯೇ ಈ ಚಳಿಗಾಲದಲ್ಲೂ ಉತ್ತರಕನ್ನಡದ ಸರ್ಕಾರಿ ನೌಕರರು ಬೆವರುತ್ತಿದ್ದಾರೆ. ಭ್ರಷ್ಟಾಚಾರ ಬಯಲಾಗುತ್ತದೆಂಬ ಭಯದಿಂದ ಅಲ್ಲ; ಲೋಕಾಯುಕ್ತರು ಬಂದಾಗೆಲ್ಲ "ಮಾರಿಹಬ್ಬ"ದ ವ್ಯವಸ್ಥೆ ಮಾಡಬೇಕಲ್ಲ ಎಂಬ ಆತಂಕದಿಂದ.

ನ್ಯಾಯಮೂರ್ತಿ ನಾಯಕರು ಮಾನವ ಹಕ್ಕು ಸಂಸ್ಥೆಯ ಮುಖ್ಯಸ್ಥರಾಗಿದ್ದಾಗಲೇ ಉತ್ತರ ಕನ್ನಡ ಜಿಲ್ಲೆಯಲ್ಲಿ ಗಣಿಧೂಳಿನವರ ದೌರ್ಜನ್ಯ ಆಟಾಟೋಪ ಮಿತಿ ಮೀರಿತ್ತು. ನಿತ್ಯ ಮಾನವ ಹಕ್ಕುಗಳ ಮಾರಣಹೋಮವೇ ನಡೆಯುತ್ತಿತ್ತು. ಹಕ್ಕು ಸಾಹೇಬರು ಜಿಲ್ಲೆಗೆ ಬಿಜಯಂಗೈದಾಗ ಒಮ್ಮೆ ಜೋರಾಗಿ ಗಣೀ ಮಾಫಿಯಾದ ವಿರುದ್ಧ ಗುಡುಗುತ್ತಿದ್ದರು. ಎಲ್ಲಿ ಹಣದ ಮಳೆ ಬೀಳುತ್ತಿತ್ತೋ ಏನೋ? ಇದ್ದಕ್ಕಿದ್ದಂತೆ ಮಳೆ ನಂತರದ ನಿಶ್ಶಬ್ಧತೆ ನಿರಾಳತೆ ಸಾಹೇಬರ ಮುಖದಲ್ಲಿ ಲಾಸ್ಯವಾಡುತ್ತಿತ್ತು! ಈ ಗುಡುಗು ಮಳೆ ಮೌನ ಗಣಿ ಮಾಫಿಯಾ ದೊರೆಗಳ ಸಾಮ್ರಾಜ್ಯದಲ್ಲಿ ವ್ಯಂಗ್ಯದ ನಗೆ ಬುಗ್ಗೆ ಉಕ್ಕಿಸುತ್ತಿತ್ತು....

ಸರ್ಕಾರಿ ಏಜೆನ್ಸಿಗಳಿಂದ ಅಥವಾ ಇನ್ಯಾರಿಂದಲೋ ಅಮಾಯಕರ ಮೇಲೆ ಬಲಪ್ರಯೋಗ, ದಬ್ಬಾಳಿಕೆ, ದೌರ್ಜನ್ಯ ಶೋಷಣೆ ನಡೆದರೆ ಅದು ಪಕ್ಕಾ ಮಾನವ ಹಕ್ಕು ಉಲ್ಲಂಘನೆ ಎನಿಸಿಕೊಳ್ಳುತ್ತದೆ. ಆದರೆ ನಾಯಕ್ ಎಂದೂ ಸಮಾಜದ ಕಟ್ಟಕಡೆಯ ದಮನಿತರತ್ತ ದೃಷ್ಟಿ ಹಾಯಿಸಲೇ ಇಲ್ಲ. ಈ ಹೊಣೆಗೇಡಿತನಕ್ಕಿಂತಲೂ ಘೋರವಾದುದೆಂದರೆ, ಶೋಷಕರ, ಪ್ರತಿಷ್ಠಿತ, ಪ್ರಭಾವಿಗಳ ಮತ್ತು ಪಟ್ಟಭದ್ರರ ಹಿತ ಕಾಪಾಡಲು ತುಂಡುಗುಪ್ಪಳ ಹೊಡೆದರು. ಸರ್ಕಾರಿ ವ್ಯವಸ್ಥೆಯಿಂದ ವ್ಯಕ್ತಿಯ ಮೂಲಭೂತ ಹಕ್ಕಿಗೆ ಧಕ್ಕೆ ಬಂದಾಗ ಸಂವಿಧಾನದ 226ನೇ ವಿಧಿಯಂತೆ ಹೈಕೋರ್ಟಿಗೆ ರಿಟ್ ಆಫ್ ಮ್ಯಾಂಡಮಸ್ ಸಲ್ಲಿಸಿ ಪರಿಹಾರ ಪಡೆಯಬೇಕಾಗುತ್ತದೆ. ಈ ಕರ್ತವ್ಯ ನಿಭಾವಣೆಯಲ್ಲಂತೂ ನಾಯಕ್ ತಮ್ಮ ವ್ಯಾಪ್ತಿ ಮೀರಿ ಹಸ್ತಕ್ಷೇಪ ಮಾಡಿ ಅವಾಂತರ ಸೃಷ್ಟಿಸಿದ್ದರು.

ನ್ಯಾ. ನಾಯಕ್‌ರ ಸ್ವಂತ ಊರಾದ ಕುಮಟಾದ ರಾಷ್ಟ್ರೀಯ ಹೆದ್ದಾರಿ 66ರ ಅಂಚಿನಲ್ಲಿ ಕೊಂಕಣಿ ವರ್ತಕ ಮಾಫಿಯಾ ಅಕ್ರಮವಾಗಿ ಬಹುಮಹಡಿ ವಾಣಿಜ್ಯ ಸಂಕೀರ್ಣ ಕಟ್ಟತೊಡಗಿತ್ತು. ಇದಕ್ಕೆ ಪುರಸಭೆಯ ಪರವಾನಗಿಯೂ ಸಿಕ್ಕಿರಲಿಲ್ಲ. ಅಷ್ಟೇ ಅಲ್ಲ, ಹೆದ್ದಾರಿ ನಿಯಮಗಳನ್ನು ಧಿಕ್ಕರಿಸಿ ನಿರ್ಮಾಣ ಆಗುತ್ತಿರುವ ಈ ಕಟ್ಟಡ ತೆರವುಗೊಳಿಸುವಂತೆ ರಾಷ್ಟ್ರೀಯ ಹೆದ್ದಾರಿ ಇಲಾಖೆ ಆದೇಶ ಮಾಡಿತ್ತು! ತಮಾಷೆಯೆಂದರೆ, ಮಾನವ ಹಕ್ಕು ಉಲ್ಲಂಘಿಸಿರುವ ಈ ಪಾಪಿ ಬಿಲ್ಡಿಂಗ್ ಪರ ಖುದ್ದು ನ್ಯಾ. ನಾಯಕ್ ವಾದಕ್ಕೆ ನಿಂತಿದ್ದರು. ಈ ಕಟ್ಟಡಕ್ಕೆ ಪರವಾನಗಿ ಕೊಡುವಂತೆ ನಾಯಕ್ ಕುಮಟಾ ಪುರಸಭೆಗೆ ತಾಕೀತು ಮಾಡಿ ಬಣ್ಣ ಬಯಲಾಗಿಸಿಕೊಂಡಿದ್ದರು. ಊರಿಗೆ ಉಪದ್ರವಿಯಾದ ಈ ಕಟ್ಟಡದ ಖದೀಮರಿಗೆ ಬೆಂಗಾವಲಾಗಿ ನಿಲ್ಲುವುದು ಯಾವ ಸೀಮೆ ಹಕ್ಕು ಪರಿಪಾಲನೆ?!


ಉತ್ತರ ಕನ್ನಡದ 'ಮೊಗೇರ' ಎಂಬ ಜಾತಿಯ ಮೀನುಗಾರ ಸಂಕುಲಿಗರು ಮೀಸಲಾತಿ ನಿಯಮದ ಇಂಗ್ಲಿಷ್ ಪದಗಳ ತಾಂತ್ರಿಕ ತೊಡಕು ಬಳಸಿಕೊಂಡು 'ಪರಿಶಿಷ್ಟ ಜಾತಿ' ಪ್ರಮಾಣಪತ್ರ ಪಡೆಯುತ್ತ ಬಂದಿದ್ದಾರೆ. ಸ್ಪೃಶ್ಯ ಸಮುದಾಯದ ಮೊಗೇರರು ಎಸ್‌ಸಿ ಸರ್ಟಿಫಿಕೇಟ್ ಪಡೆಯುತ್ತಿರುವುದನ್ನು ದಲಿತರು ಪ್ರಬಲವಾಗಿ ವಿರೋಧಿಸುತ್ತಿದ್ದಾರೆ. ಆಗ ಎಚ್ಚೆತ್ತ ಸರ್ಕಾರ ಮೊಗೇರರಿಗೆ ಎಸ್‌ಸಿ ಸವಲತ್ತು ನೀಡೋದು ನಿಲ್ಲಿಸಿತ್ತು. ಹೈಕೋರ್ಟ್ ಸಹ ಈ ಆದೇಶ ಎತ್ತಿಹಿಡಿದಿತ್ತು. ಆದರೆ ನ್ಯಾ. ನಾಯಕ್ ಪ್ರಕಾರ ಮೊಗೇರರಿಗೆ ಆಗುತ್ತಿರುವ 'ಅನಾನುಕೂಲ' ಮಾನವ ಹಕ್ಕು ಉಲ್ಲಂಘನೆ. ಹುಂಬ ನಾಯಕ್ ಮೊಗೇರರಿಗೆ ಎಸ್‌ಸಿ ಪ್ರಮಾಣ ಪತ್ರ ಕೊಡುವಂತೆ ಆದೇಶ ಹೊರಡಿಸಿ ನಗೆಪಾಟಲಿಗೀಡಾಗಿದ್ದು ಮೋಜಾಗಿದೆ.



ಸರ್ಕಾರಿ ಸವಲತ್ತು, ಐಷಾರಾಮ ಪ್ರೋಟೋಕಾಲ್, ಕೆಂಪುದೀಪದ ಕಾರು, ಆಳು ಕಾಳು, ಪೊಲೀಸ್ ಬೆಂಗಾವಲು, ಹೊಗಳಿಕೆ ಬಿರುದು ಬಾವಲಿಗಳ ವಿಪರೀತ ವ್ಯಾಮೋಹ ನ್ಯಾ. ನಾಯಕ್‌ಗೆ. ಹಕ್ಕು ಆಯೋಗದ ಅಧ್ಯಕ್ಷರಾಗಿದ್ದಾಗ ನಾಯಕ್ ತನಗೆ ಸವಲತ್ತು ಸಿಬ್ಬಂದಿಯಿಲ್ಲ, ಕಾರಿಗೆ ಕೆಂಪು ಗೂಟವಿಲ್ಲ ಎಂದು ಮೇಲಿಂದ ಮೇಲೆ ಸಣ್ಣ ಮಕ್ಕಳಂತೆ ಹಠ ಹಿಡಿದು ಅಳುತ್ತಿದ್ದರು. ಈ ಕಾನೂನು ಆಯೋಗದ ಅಧ್ಯಕ್ಷರಾಗಿಯೂ ಅದೇ 'ಕೊರತೆ'ಯ ಕೊರೆತ ಶುರುಹಚಿಕೊಂಡು ರಾಜ್ಯದ ಜನರಿಗೆ ಪುಕ್ಕಟೆ ಮನರಂಜನೆ ಕೊಡುತ್ತಿದ್ದಾರೆ.

ವೇದಿಕೆಗಳ ಮೇಲೆ ಮೌಲ್ಯ, ತತ್ವ, ಸಿದ್ಧಾಂತ, ಆಚಾರವಿಚಾರಗಳ ಬಗ್ಗೆ ಉದ್ದುದ್ದ ವ್ಯಾಖ್ಯಾನ ಬಿಗಿಯುವ ಜಸ್ಟೀಸ್ ನಾಯಕ್‌ಜೀ ಆತ್ಮರತಿ ಭಾಷಣಗಳ ಬೋರು ಲೋಕ ಪ್ರಸಿದ್ಧ. ಆತ ಹೇಳೋದು ಒಂದು; ಮಾಡೋದು ಮಾತ್ರ ಮತ್ತೊಂದು. ಕಾನೂನು ಆಯೋಗದ ಅಧ್ಯಕ್ಷರಾಗಿ ನಾಯಕ್ ಅದ್ದೂರಿ ಮದುವೆ ಮತ್ತು ಮೌಢ್ಯ ನಿಷೇಧ ಶಿಫಾರಸು ವರದಿ ಸರ್ಕಾರಕ್ಕೆ ಕೊಟ್ಟಿದ್ದಾರೆ. ಇದೇ ನಾಯಕ್ ಕರ್ನಾಟಕ ಹೈಕೋರ್ಟ್‌ನ ಪ್ರಭಾರ ಮುಖ್ಯ ನ್ಯಾಯಮೂರ್ತಿಗಳಾಗಿದ್ದಾಗಲೇ ಬೆಂಗಳೂರು ಅರಮನೆಯಲ್ಲಿ ರಾಜ-ಮಹಾರಾಜರೇ ನಾಚಿ ತಲೆತಗ್ಗಿಸುವಷ್ಟು ವೈಭವ ಆಡಂಬರದಲ್ಲಿ ಮಗಳ ಮದುವೆ ಮಾಡಿದ್ದರು. ಈ ಅದ್ದೂರಿ ಖರ್ಚುವೆಚ್ಚದ ಬಗ್ಗೆ ಅನೇಕಾನೇಕ ಊಹಾಪೋಹ ಆಗ ಹಬ್ಬಿತ್ತು. ನಾಯಕರ ಈ ಒಣ ಆಡಂಬರದ ಮದುವೆಯೇ ಆತನನ್ನು ಸುಪ್ರೀಂ ನ್ಯಾಯಾಧೀಶರಾಗುವ ಚಾನ್ಸ್ ತಪ್ಪಿಸಿತೆನ್ನುವವರು ಇದ್ದಾರೆ. ಇದೊಂದು ದಿಗ್ಭ್ರಮೆಯ ಸಮಾರಂಭ ಆಗಿತ್ತು!!

ನ್ಯಾ. ನಾಯಕರ ಮೌಢ್ಯ ವಿರೋಧಿ 'ಮನೋಭಾವ' ಮತ್ತೂ ರೋಚಕ!! ಸದಾ ಸರ್ಕಾರಿ ಖರ್ಚಿನಲ್ಲಿ, ಪೊಲೀಸರ ಬೆಂಗಾವಲಿನಲ್ಲಿ ದೇವಾಲಯ ಮತ್ತು ಚೋರ ಗುರೂಜಿ, ಸ್ವಾಮೀಜಿಗಳ ದರ್ಶನಕ್ಕೆ ಹೋಗುವ ಖಯಾಲಿ ನಾಯಕ್ ಲಾಗಾಯ್ತಿನಿಂದ ಬೆಳೆಸಿಕೊಂಡಿದ್ದಾರೆ. ರಾಜಕಾರಣಿಗಳ ಮಂತ್ರವಾದಿ ಸದಾನಂದ ಸ್ವಾಮೀಜಿಯಿಂದ ಬಂಗಾರಮಕ್ಕಿ (ಹೊನ್ನಾವರ)ಯ ಭಾರದ ಭಂಡ ಮಾರುತಿ ಭಟ್ಟನವರೆಗಿನ ಕಾವಿಗಳ ಕಾಲಿಗೆ ಡೈಹೊಡೆಯುವ ಕಲೆ ನಾಯಕ್‌ಗೆ ಕರತಲಾಮಲಕವಾಗಿದೆ. ಗೋಕರ್ಣ ದೇವಸ್ಥಾನ ರಾಮಚಂದ್ರಾಪುರ ಮಠಕ್ಕೆ ಹಸ್ತಾಂತರಿಸಿದಾಗ ರಂಗ್‌ರಂಗೀಲಾ ರಾಘು ಸ್ವಾಮೀ ಇಡೀ ಗೋಕರ್ಣ ಸೀಮೆಯನ್ನೇ ಗೆದ್ದ



ಸಂಭ್ರಮದಲ್ಲಿ ಮೆರೆದಾಡಹತ್ತಿದ್ದ. ಅಂದು ಆತ ಮೊದಲ ಶಿವರಾತ್ರಿಯಂದು ದೊಡ್ಡದೊಂದು ವಿವಿಧ ವಿನೋದಾವಳಿ ಕಾರ್ಯಕ್ರಮ ಹಮ್ಮಿಕೊಂಡಿದ್ದ. ಅದರಲ್ಲಿ ನ್ಯಾ. ನಾಯಕ್‌ಗೆ ಕರೆದು 'ಸಾರ್ವಭೌಮ' ಎಂಬ ಬೋಗಸ್ ಬಿರುದು ರಾಘು ದಯಪಾಲಿಸಿದ್ದ. ಆಗಲೇ ದೇವಸ್ಥಾನ ಹಸ್ತಾಂತರ ವಿವಾದ ಹೈಕೋರ್ಟ್ ಮೆಟ್ಟಿಲೇರಿತ್ತು. ಇಂಥ ಸಂದರ್ಭದಲ್ಲಿ ತಗಾದೆ ಸ್ವಾಮಿಯಿಂದ ಹೈಕೋರ್ಟ್ ನ್ಯಾಯಾಧೀಶನಾಗಿ ನಿವೃತ್ತನಾದ ತಾನು ಪೊಕ್ಕು ಪ್ರಶಸ್ತಿ ಪಡೆಯಬಾರದೆಂಬ ನೈತಿಕತೆ ಜಸ್ಟೀಸ್ ನಾಯಕ್‌ರ ಕಾಡಲೇ ಇಲ್ಲ! ಅಷ್ಟೇ ಅಲ್ಲ, ಕಳ್ಳ ಸ್ವಾಮಿಯನ್ನು ಕಂಡಾಪಟ್ಟೆ ಹೊಗಳಿ ಕೃತಾರ್ಥರಾದರು! ಈಗ ರಾಮಚಂದ್ರಾಪುರ ಮಠದ ಮಾಣಿಗಳು ತಮ್ಮ ಹಿತಚಿಂತಕ ನ್ಯಾ. ನಾಯಕ್‌ರ

ೋಕಾಯುಕ್ತರಾಗಿಸಲು ಬಿಜೆಪಿ ಪುಢಾರಿಗಳ ಮೂಲಕ ಲಾಬಿ ಮಾಡಿಸುತ್ತಿದ್ದಾರೆ.

ಇಂತಹ ಪ್ರಶಸ್ತಿ ದಕ್ಷಿಣ ಕನ್ನಡದ ಕುಖ್ಯಾತ ಕೋಮು ಕಿತಾಪತಿಗಾರ ವಜ್ರದೇಹಿ ಠದ ಸ್ವಾಮಿಯಿಂದಲೂ ನ್ಯಾ.ನಾಯಕ್ ಪಡೆದು ಪಾವನರಾಗಿದ್ದರು. ಹಕ್ಕು ಆಯೋಗದ ಯಿಂದ ತನಗೆ ಪ್ರಶಸ್ತಿ ಬಂದ ಬಗ್ಗೆ ಪ್ರೆಸ್‌ನೋಟ್ ಪತ್ರಿಕಾಲಯಗಳಿಗೆ ಕಳಿಸಿ ಯಕ್ ತನ್ನತನ ತೋರಿಸಿಕೊಂಡಿದ್ದು ದೊಡ್ಡ ಜೋಕ್‌ನಂತಾಗಿ ನಗಿಸಿದ್ದು ಇವತ್ತಿಗೂ ಿವಳಿ ಜನರು ಮರೆತಿಲ್ಲ. ಇದೇ ಸ್ಟೈಲಿನ ಕಾವಿ ಸನ್ಮಾನಗಳು ಉತ್ತರ ಕರ್ನಾಟಕದ ದೆರಡು ಕಡೆ ನಾಯಕ್ ಸಾಹೇಬರಿಗಾಗಿತ್ತು. ಇದು ಹಕ್ಕು ಆಯೋಗದ ಷ್ಪಸಾರ್ಹತೆಯನ್ನೇ ಅನುಮಾನಿಸುವ ಪರಿಸ್ಥಿತಿ ನಿರ್ಮಾಣ ಮಾಡಿತ್ತು ನ್ಯಾಯಾಧೀಶರು ಥವಾ ಅದಕ್ಕೆ ಸಮಾನ ಹುದ್ದೆಯಲ್ಲಿರುವವರು ಆಕ್ಷೇಪಾರ್ಹ, ಅನುಮಾನಾಸ್ಪದ ತಿಷ್ಠಿತ'ರಿಂದ ಪ್ರಶಸ್ತಿ ಸ್ವೀಕರಿಸುವುದು ಮತ್ತು ಅದಕ್ಕೆ ಕೃತಜ್ಞರಾಗಿರುವುದು ಮಾನಸಿಕ ್ಟಾಚಾರವಷ್ಟೇ ಅಲ್ಲ, ಸಾಮಾನ್ಯ ಜನರ ಹಕ್ಕುಗಳಿಗೆ ಚ್ಯುತಿ ತಂದಂತೆಯೇ!

ಬಿಜೆಪಿ ಆಡಳಿತ ಯುಗದಲ್ಲಿ ದಕ್ಷಿಣ ಕನ್ನಡದ ಚರ್ಚ್‌ಗಳ ಮೇಲೆ ಳಿಯಾದಾಗ ಹಕ್ಕು ಆಯೋಗದ ಜಸ್ಟೀಸ್ ನಾಯಕ್ ಅಲ್ಲಿಗೆ ತಡವಾಗಿ ವಿಸಿದ್ದರು. ಭಜರಂಗಿಗಳ ದಾದಾಗಿರಿ ಕಣ್ಣಾರೆ ಕಂಡ ನಾಯಕ್ ಪ್ರೆಸ್‌ಮೀಟ್ ಾಡಿದಾಗ ಆರೋಪಿ ಪೊಲೀಸ್ ಅಧಿಕಾರಿಗಳ ಅಕ್ಕಪಕ್ಕ ಕೂರಿಸಿಕೊಂಡಿದ್ದು ಕ್ಕು ಆಯೋಗದ ಪ್ರತಿಷ್ಠೆ ಮತ್ತು ಪಾವಿತ್ರ್ಯವನ್ನೇ ಕುಗ್ಗಿಸಿಬಿಟ್ಟಿತ್ತು. ಕಲ್ಲೆಸೆತದಿಂದ ಶವಾಗಿದ್ದ ಚರ್ಚ್‌ಗಳಿಗೆ ಭೇಟಿ ನೀಡಿದಾಗ ಹಿಂಸಾಪೀಡಿತ ಕ್ರಿಶ್ಚಿಯನ್ನರು ದಿನ ದ.ಕ. ಎಸ್ಪಿ ಮತ್ತು ಇತರ ಪೊಲೀಸ್ ಅಧಿಕಾರಿಗಳ ಅಮಾನವೀಯ-ದೂತ್ವ ಪರವಾದ ನಡವಳಿಕೆ ಬಗ್ಗೆ ಜಸ್ಟೀಸ್ ನಾಯಕರಲ್ಲಿ ದೂರಿದ್ದರು. ವರೂ ಆರೋಪಿ ಎಸ್ಪಿ-ಐಜಿಪಿಯನ್ನು 'ಸಾಹೇಬ್ರು' ಎಂದು ನ್ಯಾ.ನಾಯಕ್ ರವಿಸಿದ್ದು ಹಕ್ಕು ಆಯೋಗದ ಮಾನ ಹರಾಜು ಹಾಕಿತ್ತು. ಎತ್ತಿಂದೆತ್ತ ತಾಳೆ ಕೆ ನೋಡಿದರೂ ಹಕ್ಕು ಆಯೋಗದ ಅಧ್ಯಕ್ಷರು ಕಳಂಕಿತ ಪೊಲೀಸ್ ಧಿಕಾರಿಗಳ ಜತೆ ಬಹಿರಂಗವಾಗಿ ಒಡನಾಡಿದ್ದೇ ಅಪರಾಧ-ಅನುಚಿತ. ಚಾರಣೆಗೂ ಮೊದಲೇ ಪಾಪಿ ಪೊಲೀಸ್ ಅಧಿಕಾರಿಗಳಿಗೆ ನ್ಯಾ. ನಾಯಕ್ ನ್‌ಚಿಟ್ ಕೊಟ್ಟಿದ್ದು ಹೊಗಳಿ ಅಟ್ಟಕ್ಕೇರಿಸಿದ್ದು ನಾಚಿಕೆಗೇಡಿನ ಸಂಗತಿಯಾಗಿತ್ತು. ಯಕ್‌ರ ಈ ನಡವಳಿಕೆ ಆತ ಅಧಿಕಾರಿಗಳ ಓಲೈಸುವ ಪೈಕಿ ಮತ್ತು ಮನಿತರ ಭಾವನೆ ಅರ್ಥವಾಗದ ಎಡವಟ್ಟು ಎಂಬುದನ್ನು ಸಾಕ್ಷ್ಯಾಧಾರ ಮೇತ ಸಾಬೀತು ಪಡಿಸುವಂತಿದೆ!

ಹಕ್ಕು ಆಯೋಗದ ಅಧ್ಯಕ್ಷರಾಗಿದ್ದಾಗ ಅಪದ್ಧ ಮಾತಾಡಿ ಹಲವು ಬಾರಿ ದ್ದಿಯಾಗಿದ್ದರು ನಾಯಕ್ ಸಾಹೇಬ್ರು! ಮಹಿಳೆಯರು ಕತ್ತಲಾಗುವ ಮೊದಲೇ ನೆ ಸೇರಿಕೊಳ್ಳಬೇಕೆಂದು ನಾಯಕ್ ನೀತಿ ಪಾಠ ಹೆಂಗಸರಿಗೆ ಬೋಧಿಸಿದ್ದು ತನೆಂಥ ಪ್ರತಿಗಾಮಿ ಎಂಬುದು ಪರಿಚಯಿಸಿತ್ತು! ಲಿಂಗಭೇದವಿಲ್ಲದೆ ಎಲ್ಲ ಗರಿಕರೂ ನ್ಯಾಯಬದ್ಧ ಚಟುವಟಿಕೆಗಾಗಿ ಮುಕ್ತವಾಗಿ ಓಡಾಡುವುದನ್ನು ತ್ರಿ ಪಡಿಸಲು ಭದ್ರತೆ ಏರ್ಪಡಿಸಬೇಕಾದ್ದು ಸರ್ಕಾರದ ಕರ್ತವ್ಯ. ಹಾಗೆ ಾಡುವಂತೆ ಸರ್ಕಾರದ ಕಿವಿ ಹಿಂಡುವ ಹಕ್ಕು ಅಂದು ಹಕ್ಕು ಆಯೋಗದ ಧ್ಯಕ್ಷರಾಗಿ ನಾಯಕ್‌ಗೆ ಇತ್ತು. ಆದರೆ ಆಗ ನಾಯಕ್ ಎಡಬಿಡಂಗಿಯಂತೆ ಾತಾಡಿದ್ದರು. ದಮನಕಾರಿಗಳೂ ಅಥವಾ ಸರ್ಕಾರದ ಪುಂಡ ಅಧಿಕಾರಿ ರ್ಗದ ವಿರುದ್ಧ ಹಕ್ಕು ಆಯೋಗ ತೀರ್ಮಾನ ತೆಗೆದುಕೊಳ್ಳಬೇಕಾದ ಪ್ರಸಂಗ ಲವು ಎದುರಾಗುತ್ತದೆ. ಶೋಷಿತರ ಪರ ತಾನು ತೆಗೆದುಕೊಂಡ ನಿರ್ಧಾರ ರಿಗೆ ಬಂದಿದೆಯಾ ಎಂದು ಖಾತ್ರಿಪಡಿಸಿಕೊಳ್ಳಬೇಕಾಗುತ್ತದೆ. ಆದರೆ ಇಂಥ ರ್ಜಿ-ಕರ್ತವ್ಯ ಬದ್ಧತೆ ಎಸ್ಸಾರ್ ನಾಯಕ್ ಎಂದೂ ತೋರಿಸಿದ ನಿದರ್ಶನಗಳೇ ಸಿಸದು!!

ರಾಜಕಾರಣಿಗಳ ಸಂಪ್ರೀತಗೊಳಿಸುವ ಸ್ವಭಾವ ನಾಯಕ್‌ರದು. ಮಂತ್ರಿ ರ್.ವಿ. ದೇಶಪಾಂಡೆ ಮಗನನ್ನು ಕಾಂಗ್ರೆಸ್ ಲೋಕಸಭಾ ಅಭ್ಯರ್ಥಿ ಮಾಡಲು ಗ ತಾಲೀಮು 2009ರಲ್ಲಿ ನಡೆಸಿದ್ದರು. ಆಗ ಅಪ್ಪ-ಮಗ ತಮ್ಮ ಕುಟುಂಬ ್ಟ್‌ನಿಂದ ತರಹೇವಾರಿ ಸನ್ಮಾನ ಇಟ್ಟುಕೊಂಡಿದ್ದರು. ಆ ಸನ್ಮಾನಿತರಲ್ಲಿ ಸ್ಟೀಸ್ ನಾಯಕರೂ ಒಬ್ಬರು. ಸನ್ಮಾನ ಸ್ವೀಕರಿಸಿ ಮುದಗೊಂಡಿದ್ದ ನಾಯಕ್ ೇಶಪಾಂಡೆ ಮತ್ತವರ ಮಗ ಪ್ರಶಾಂತ ದೇಶಪಾಂಡೆಯನ್ನು ಹೊಗಳಿದ್ದು ತಿಹಾಸದ ಪುಟದ ಭಟ್ಟಂಗಿಗಳೂ ಬೆಚ್ಚಿಬೀಳುವಂತಿತ್ತು. ಇಂಥ ನಾಯಕ್ ೋಕಾಯುಕ್ತರಾದರೆ ಭ್ರಷ್ಟಾಗ್ರೇಸ ದೇಶಪಾಂಡೆ ಸೇಫ್ ಅಲ್ಲವಾ?

ಬಾಯಿಗೆ ಬಂದಂತೆ ಮಾತನಾಡುವ ನಾಯಕ್ ಹಲವು ಸಲ ಹಕ್ಕು ಯೋಗದ ಮಾನ-ಮರ್ಯಾದೆಯನ್ನೇ ಕಳೆದಿದ್ದರು. ಆನಂದ ಅಸ್ನೋಟಿಕರನಂಥ ಧಿಕಪ್ರಸಂಗಿ ಮಂತ್ರಿಯಿಂದ ಮೂದಲಿಸಿಕೊಂಡಿದ್ದ ನಾಯಕ್ ಚೆಡ್ಡಿ ರಾಮಚಂದ್ರ ಡರಿಂದ ಬೀದಿ ದಾಸಯ್ಯ ಎಂದು ಬೈಸಿಕೊಂಡಿದ್ದರು. ಇವರಿಗೆಲ್ಲ ಸಮರ್ಥ ತ್ತರ ಕೊಡುವ ನೈತಿಕ ಧೈರ್ಯ ಅಂದು ನಾಯಕ್ ಪ್ರದರ್ಶಿಸಿರಲಿಲ್ಲ. ಥರಾ ಬ್ಲ್ಯಾಕ್‌ಮೇಲ್‌ಗೆ ಒಳಗಾದವರಂತೆ ಮುಗುಮ್ಮಾಗುಳಿದು ಹಕ್ಕು ಯೋಗದ ಅಧ್ಯಕ್ಷತೆ ಅಗ್ಗಗೊಳಿಸಿದ್ದರು ನಾಯಕರು.

ನ್ಯಾಯಮೂರ್ತಿಗಳಾಗಿದ್ದಾಗಲೂ ನಾಯಕರ 'ಜಸ್ಟೀಸ್ ಗ್ರಾಪು' ಹಲವು ಪ್ಪು ಚುಕೈಗೀಡಾಗಿತ್ತು! ಟಿಪಿಕಲ್ ಹುಂಬನಂತಿರುವ ನಾಯಕ್ ಸಹೋದ್ಯೋಗಿ ್ಯಾಯಾಧೀಶರೊಬ್ಬರಿಗೆ ಕಪಾಳಮೋಕ್ಷ ಮಾಡಿ ಕುಖ್ಯಾತರಾಗಿದ್ದರು. ಬೆಂಗಳೂರಿನ ಂಕಿತ ನ್ಯಾಯಾಂಗ ಬಡಾವಣೆಯಲ್ಲಿ ಸೈಟ್ ಪಡೆದಿರುವ ನಾಯಕರ ಊರಿನ-ರ ಊರಿನ ಆಸ್ತಿ-ಸಂಪತ್ತು-ಭೂಮಿ ಬಗ್ಗೆ ತರತರದ ಸುದ್ದಿಗಳಿವೆ.

ನ್ಯಾ. ಸಂತೋಷ್ ಹೆಗ್ಡೆ ಲೋಕಾಯುಕ್ತರಾಗಿ ನೇಮಕವಾದ ತಕ್ಷಣ ತಮ್ಮ ಸ್ತಿ ವಿವರ ವೆಬ್‌ಸೈಟ್‌ನಲ್ಲಿ ಬಹಿರಂಗಪಡಿಸಿದ್ದರು. ಅನಂತರ ಮಾನವ ಕ್ಕು ಆಯೋಗದ ಅಧ್ಯಕ್ಷತೆಗೆ ಏರಿದ್ದ ನಾಯಕ್ ಮಾತ್ರ ತಮ್ಮ ಆಸ್ತಿ ವಿವರ ಳಲೇ ಇಲ್ಲ! ಸಂತೋಷ್ ಹೆಗ್ಡೆ ನಂತರ ಲೋಕಾಯುಕ್ತರಾದವರೂ ಆಸ್ತಿ ಿಂದಂಗ ಪಡಿಸಲಿಲ್ಲ. ನ್ಯಾ. ಶಿವರಾಜ್ ಪಾಟೀಲ್ ವಿವಾದಿತ ನ್ಯಾಯಾಂಗ ಡಾವಣೆಯಲ್ಲಿ ಸೈಟ್ ಮಾಡಿದ ಅಪರಾಧಕ್ಕೆ ಲೋಕಾಯುಕ್ತ ನ್ಯಾಯಮೂರ್ತಿ ್ಥಾನ ಬಿಡಬೇಕಾಗಿ ಬಂದಿತ್ತು ಅಲ್ಲವಾ? ಜಸ್ಟೀಸ್ ನಾಯಕ್ ಕೂಡ ಇದೇ ಂಕ ಮೆತ್ತಿಕೊಂಡಿದ್ದಾರೆ.

ನ್ಯಾಯಮೂರ್ತಿಗೆ ಇರಬೇಕಾದ ಗಾಂಭೀರ್ಯ, ಸರಳತೆ, ಸಜ್ಜನಿಕೆ, ವಿವೇಕದ ೊರತೆಯ ನಾಯಕ್ ಲೋಕಾಯುಕ್ತರಾದರೆ ಸಿದ್ದುಗೆ ಸಂಕಟ ಶತಸಿದ್ಧ! ಭ್ರಷ್ಟ ಸ್ಕರ್ ರಾವ್ ಆದರೂ ಬೇಕಿತ್ತು ಈ ಚಪಲ ಚನ್ನಿಗರಾಯ ಬೇಡ ಮಾರಾಯ್ರೆ ಬಂಧ ಪರಿಸ್ಥಿತಿ ಬಂದರೂ ಅಚ್ಚರಿಯೇನಿಲ್ಲ, ಜಸ್ಟೀಸ್ ನಾಯಕರ ಟ್ರ್ಯಾಕ್ ರ್ಡೇ ಹಾಗಿದೆ!!

● ವರದಿಗಾರ

ಒಂದು ಕೊಲೆನೆ ಸಾಕು ಮಾಡ್ಬದೆ ಕಂಡ್ರಿ!


ಥೂತ್ತೇರಿ

ಯಾಹೂ

"ಇನ್ನ ಐವತ್ತು ವರ್ಷಗಳಲ್ಲಿ ಭಾರತದಲ್ಲಿ ಬರೀ ಹುಚ್ಚರೇ ಇರುತ್ತಾರೆ. ಅದೇ ಅಮೆರಿಕ ಆತ್ಮಾತ್ಮದ ದೇಶವಾಗುತ್ತೆ, ಅದರಲ್ಲೂ ಭಾರತದ ವೇದ, ಉಪನಿಷದ್, ಭಗವದ್ಗೀತೆ ಪಠಣದ ಭೂಮಿಯಾಗುತ್ತೆ" ಎಂದು ದಕ್ಷಿಣ ಕನ್ನಡದ ಕಾಲಜ್ಞಾನಿ ಬನ್ನಂಜೆ ಗೋವಿಂದಾಚಾರ್ಯ ಹೇಳಿದ್ದಾರಂತಲ್ಲಾ, ಬನ್ನಂಜೆ ಮಾತನ್ನ ಕೇಳಿದ ಜನ "ಇನ್ನ ಐವತ್ತು ವರ್ಷಕ್ಕೆ ತಾನೆ. ಆಗ್ಲಿ ಬಿಡಿ. ಅಲ್ಲಿವರಿಗೂ ನಾವಿದ್ದರೆ ತಾನೆ" ಎಂಬ ಸಕಾಲಿಕವೂ ಸರಾಗವೂ ಆದ ಉತ್ತರ ಹೊರಡಿಸುತ್ತಿದ್ದಾರಂತಲ್ಲಾ, "ಇನ್ನ ಐವತ್ತು ವರ್ಷಕ್ಕೆ ಭಾರತದಲ್ಲಿ ಹುಚ್ಚುರೋಗ ವ್ಯಾಪಿಸುವುದಾದರೆ ಅದಕ್ಕೆ ಕಾರಣರಾರು ಸ್ವಾಮಿ?" ಎಂದು ಪ್ರಶ್ನಿಸುತ್ತಿರುವ ಕೋಟಗಾನಹಳ್ಳಿ ರಾಮಯ್ಯನ ಕಡೆಯ ಹುಡುಗರು "ಭಟ್ಟಂ ಬಯಲಲ್ಲಿ ಇರುವ ಜನ ಆರಾಮವಾಗಿಯೇ ಇರುತ್ತಾರೆ. ಆದರೆ ಯಾರು ಗರ್ಭಗುಡಿಯಲ್ಲಿ ಕುಳಿತು ಹೋತ, ಮೇಕೆ, ನಾಯಿ, ನರಿಗಳ ತರಹ ಸಂಸ್ಕೃತ ಶ್ಲೋಕಗಳನ್ನು ಊಳಿಡುತ್ತಾ ಮೈಗೆಲ್ಲಾ ಹೇಸಿಕೆ ಬಳಿದುಕೊಂಡು ಗುಡಿ ಸುತ್ತ ಓಡಾಡುತ್ತ ಮಡೆಸ್ನಾನ, ಎಡೆಸ್ನಾನ, ಚಾತುರ್ಮಾಸ, ಮಧ್ವ ಜಯಂತಿ ಇತ್ಯಾದಿ ಅನರ್ಥಕ ಚಟುವಟಿಕೆಯಲ್ಲಿ ನಿರತರಾಗಿರುತ್ತಾರೋ ಅವರ ಪೈಕಿ ಈಗಾಗಲೇ ಅರ್ಧದಷ್ಟು ಜನ ಹುಚ್ಚರ ಲಿಸ್ಟಿಗೆ ಜಮೆಯಾಗಿದ್ದಾರೆ. ಮನೋ ವೈದ್ಯನೊಬ್ಬ ಮಾನವೀಯ ನೆಲೆಯಲ್ಲಿ ಕೌನ್ಸಿಲಿಂಗ್ ಮಾಡಿದ್ದಾದರೆ ಬನ್ನಂಜೆ, ಪೇಜಾವರರ ಸಮೇತ ಅಷ್ಟಮಠಗಳ ಯತಿಗಳೆಲ್ಲಾ ಐವತ್ತು ವರ್ಷಕ್ಕಾಗಿ ಕಾಯಬೇಕಿಲ್ಲ" ಎಂದರಂತಲ್ಲಾ, ಥೂತ್ತೇರಿ!!

* * *

ಬಿಹಾರದಲ್ಲಿ ನಡೆದ 'ಬಹಾರಿ, ಬಿಹಾರಿ' ಚುನಾವಣೆಯಿಂದ ದಿಗ್ವಿಜಯ ಸ್ಥಾಪಿಸಿದ ಜೆಡಿಯುನ ಕ್ರಾಂತಿ ನೋಡಿ ಕರ್ನಾಟಕದ ಕಾರ್ಯಕರ್ತರು ತೆನೆಹೊತ್ತ ಮಹಿಳೆ ಕೈಗೆ ಬಾಣಕೊಟ್ಟು ನಿಲ್ಲಿಸಿದರೆ ಹೇಗೆ ಎಂಬ ತರ್ಕವನ್ನು ದೇವೇಗೌಡರ ಮುಂದೆ ಮಂಡಿಸಿ ನೋಡತೊಡಗಿದವಂತಲ್ಲಾ, ಅದಾಗತಾನೆ ಸೊಪ್ಪಿನ ಸಾರಲ್ಲಿ ಮುದ್ದೆ ಮತ್ತು ಗುಳಿಗೆ ನುಂಗಿದ್ದ ಗೌಡರು ಸುಮಾರು ಹೊತ್ತು ಹಾಗೇ ಇದ್ದು ನಂತರ ಅರೆಗಣ್ಣು ಬಿಟ್ಟು; ಎದುರಿಗಿದ್ದ ಲಿಂಗಾಯತ ಹೈದರನ್ನು ನೋಡಿ ಮತ್ತೆ ಕಣ್ಮುಚ್ಚಿಕೊಂಡವರು ತೆರೆಯಲೇಯಿಲ್ಲವಂತಲ್ಲಾ.



ಗೌಡರ ಚಾತುರ್ಮಾಸಕ್ಕೆ ಸಮನಾದ ವ್ರತವನ್ನು ನಾನಾರೀತಿ ಅರ್ಥೈಸಿಕೊಂಡು ಹೊರಟ ಬಾಣದ ಹುಡುಗರು "ನೋಡಿ ಮಾಜಿ ಪ್ರಧಾನಿಗಳಾದ ದೇವೇಗೌಡರದ್ದು ರಾಷ್ಟ್ರೀಯ ಪಕ್ಷವಾದರೂ ಅದಕ್ಕೆ ರಾಷ್ಟ್ರ ಬೇಡ. ತೆನೆಹೊತ್ತ ಮಹಿಳೆ ಕೈಗೆ ಬಾಣವಂತೂ ಬೇಡವೇ ಬೇಡ. ಅದಕ್ಕಿಂತಲೂ ಮುಖ್ಯವಾಗಿ ಅವರಿಗೆ 224 ಕ್ಷೇತ್ರವೇ ಬೇಡ. ಅವರಿಗೇನಿದ್ದರೂ 50 ಕ್ಷೇತ್ರಗಳು ಸಾಕು. ಬಹುಮತಕ್ಕೆ ಶಾರ್ಜೀಜಾದ ರಾಷ್ಟ್ರೀಯ ಪಕ್ಷಗಳು ಅವರ ಮನೆಬಾಗಿಲಿಗೆ ಬರುತ್ತವೆ. ಇದೆಲ್ಲಕ್ಕಿಂತ ಮುಖ್ಯವಾಗಿ ಅವರು ಜೆಡಿಯು ಜೊತೆ ಅಕಸ್ಮಾತ್ ಯು ಟರ್ನ್ ತೆಗೆದುಕೊಂಡರೆ ಅನಿತಕ್ಕ, ಭವಾನಕ್ಕ, ಪ್ರಜ್ವಲ್, ನಿಖಿಲ್, ಕುಮಾರಣ್ಣ, ರೇವಣ್ಣ, ಬಾಲಣ್ಣ, ಡಿ.ಸಿ. ತಮ್ಮಣ್ಣ ಇಂತವರು ಹಂಚಿಕೊಳ್ಳುವ ಕ್ಷೇತ್ರದ ಸಮಸ್ಯೆ ಎದುರಾಗಬಹುದು. ಅದಕ್ಕಾಗಿಯೇ ಗೌಡರು ಕಣ್ಣು ತೆರೆಯಲಿಲ್ಲ" ಎಂದುಕೊಂಡು ಬಾಣಬಿಟ್ಟಂತೆ ಓಡಿದವಂತಲ್ಲಾ, ಥೂತ್ತೇರಿ!!

* * *

ಮಂಡ್ಯ ಜಿಲ್ಲೆಯ ಇಂಟರೆಸ್ಟಿಂಗ್ ಸಮಸ್ಯೆಯನ್ನು ವಿಧಾನ ಪರಿಷತ್ ಚುನಾವಣೆಗೆ ಮುನ್ನವೇ ಮಾತನಾಡಿಸಬೇಕಿತ್ತು, ಆದರೂ ಕಾಲಮಿತಿಯಿಲ್ಲದೆ ಯಾವಾಗಲಾದರೂ ಮಾತನಾಡಿಸಿದರೆ ಎಷ್ಟಾದರೂ ವಿಷಯ ಸಂಗ್ರಹಿಸಲು ಅವಕಾಶ ಮಾಡಿಕೊಡುವ ಶಿವರಾಮೇಗೌಡರು, ಈ ನಾಡು ಕಂಡ ಅಪರೂಪದ ರಾಜಕಾರಣಿ. ಒಂದು ತರ ಕೂಗುಮಾರಿಯ ಸಹೋದರನಿದ್ದಂತೆ ಎಂದು ಉತ್ಸಾಹದಿಂದಲೇ ಫೋನ್ ಮಾಡಿದರೆ ರಿಂಗಾಯ್ತು

ರಿಂಗ್ ಟೋನ್: "ನನ್ನ ಸಮ ಯಾರಿಲ್ಲ ನಿನ್ನ ಗೆಲ್ಲೋರು ಯಾರಿಲ್ಲ ನನ್ನ ಸಮ.... "

"ಹಲೋ"

"ಹಲೋ ಸಾರ್, ನಾನು ಯಾಹು ಅಂತ."

"ಯಾವ್ರೂ ಅಂದ್ಯಾರ್ರಿ?"

"ನಾನು ಸಾರ್ ಪತ್ರಕರ್ತ."

"ಈಗ ಫೋನ್ ಮಾಡ್ತಿರಲ್ರೀ, ನಾಳೆನೆ ರಿಜಲ್ಟು."

"ನಾನು ಮಾಡಿದ್ದು ಅದಕ್ಕಲ್ಲ ಸಾರ್, ಒಂದೆರಡು ಮಾತಾಡಬೇಕು."

"ಎಂಟಿಆರಿಗೆ ಬತ್ತಿರಾ? ಕುತಗಂಡು ಮಾತಾಡನ."

"ಟೈಮಿಲ್ಲ ಸಾರ್, ಡೆಡ್‌ಲೈನ್."

"ನಮ್ದು ಡೆಡ್‌ಲೈನ್ ಕಂಡ್ರಿ, ಇನ್ನ ಹನ್ನೆರಡು ಗಂಟೆ ಇದೆ ಅಷ್ಟೆ."

"ಗಲ್ತಿರಿ ಬುಡಿ ಸಾರ್"

"ಗೆದ್ದಾಗಿದೆ. ಲೀಡೆಷ್ಟು ಅಂತ ಯೋಚನೆ ಮಾಡ್ತ ಇದ್ದಿನಿ."

"ಅದ್ರು ಒಂದು ಡವುಟು ಸಾರ್."

"ಏನ್ ಡವುಟು?"

"ದಳದವ್ರುರು ನಿಮಗಿಂತ ಜಾಸ್ತಿ ಹಣ ಕೊಟ್ಟಿದ್ರಂತೆ."

"ಕೊಟ್ಟೇನಂತೆ? ತಗಂಡು ನನಿಗೆ ಓಟಾಕಿ ಅಂದಿದ್ದಿನಿ."

"ನೀವು ದಳಕ್ಕಿಂತ ಜಾಸ್ತಿ ಖರ್ಚು ಮಾಡಿದ್ರು ಸಾರ್?"

"ಗೆಲ್ಲಬೇಕಾದ್ರೆ, ಮಾಡ್ಲೆಬೇಕಲ್ಲಪ್ಪ"

"ಯಾರೊ ಕಿಡಿಗೇಡಿಗಳು ನಿಮ್ಮ ವಿರುದ್ಧ ಹ್ಯಾಂಡ್ ಬಿಲ್ಹಾಕಿದ್ರು, ಸಾರ್."

"ಆ ನನ್ನ ಮಕ್ಕಳ ರಿಜಲ್ಟು ಬಂದಮ್ಯಾಲೆ ನೋಡಿಕೊತ್ತಿನಿ."

"ಕೊಲೆಗಿಲೆ ಪ್ಲಾನಿದೆಯಾ?"

"ಅದ್ಯಲ್ಲ ಇಲ್ಲ, ಒಂದಕೆ ಸಾಕಾಗ್ಯದೆ. ಕೊಲೆ ಮಾಡ್ಲದೂ ಬ್ಯಾಡ ಜೈಲಿಗೊಗದೂ ಬ್ಯಾಡ, ಈಗೇನು ಬುದ್ಧಿ ಕಲಸಕೆ ಬೇಕಾದಷ್ಟು ದಾರಿಯವೆ."

"ಯಾವನೋ ಡಾಕ್ಟರ ಜಮೀನ ಲಪಟಾಯಿಸಿದ್ದಿರಂತೆ."

"ಅದ್ಯಲ್ಲ ಹಳೆ ಕತೆ ಕಂಡ್ರೀ. ಆ ನನಮಗ ಡೆಲ್ಲಿಗಂಟ ಹೋಗಿ ಕಾಂಗ್ರೆಸ್ ಹೈಕಮಾಂಡಿಗೂ ದೂರು ಕೊಟ್ಟಿದ್ದ."

"ನಮ್ಮಲ್ಲಿಗೂ ಬಂದಿದ್ದ ಸಾರ್. ನಿಮ್ಮ ವಿರುದ್ಧ ಹೋರಾಡಿ ಹೋರಾಡಿ ಸ್ವಲ್ಪ ತಲೆಕೆಟ್ಟಂಗಾಗಿದೆ."

"ಸ್ವಲುಪ ಏನು ಪೂರಾ ಕೆಟ್ಟದೆ."

"ನಾಲ್ಕೈದೆಕರೆ ಜಮೀನ್ನೆ ಕಳಕಂಡ್ರೆ ಕೆಡಲ್ಲವ ಸಾರ್."

"ಹ್ಯಾಂಡಬಿಲ್ಲಲ್ಲಿ ಅವ್ರುನ ಕೈವಾಡನೂ ಇದೆ ಕಂಡ್ರಿ. ಅವನೂ ಆ ಸಿದ್ದರಾಮಯ್ಯನ ಪೈಕಿ. ಆದ್ರೂ ಏನು ಕಿತಗಳಕ್ಕಾಗಲಿಲ್ಲ."

"ರಿಯಲಿ ಗ್ರೇಟ್ ಸಾರ್ ನೀವು. ಅಷ್ಟೊಂದು ವಿರೋಧ ಇದ್ರೂ ಪರಿಷತ್ ಚುನಾವಣೆಗೆ ಟಿಕೆಟ್ ತಂದ್ರಲ್ಲ ಹೇಳಿ."

"ನನಿಗೆ ಕೊಡದೆ ಇನ್ಯಾರಿಗೆ ಕೊಡ್ತರ್ರೀ?"

"ನಿಜ ಸಾರ್. ಇವತ್ತಿನ ಚುನಾವಣೇಲಿ ಪ್ರತಿ ಓಟಿಗೂ ಹತ್ತು ಇಪ್ಪತ್ತು ಸಾವಿರ ಕೊಡೋ ಶಕ್ತಿ ಇದ್ದದ್ದು ಮಂಡ್ಯದಲ್ಲಿ ನಿಮಗೆ ಮಾತ್ರ."

"ನಾನಾಗ್ಲೆ ಹೇಳಿರಲಿಲ್ಲವೇನ್ರಿ. ನನ್ನ ಎದುರಾಳಿಗಿಂತ್ಲೂ ಜಾಸ್ತಿ ದುಡ್ಡು ತತ್ತಿನಿ ಅಂತವ."

"ಬೆಂಗಳೂರಲ್ಲಿನ್ನು ಎಷ್ಟು ಸೈಟವೆ ಸಾರ್?"

"ಯಾಕೆ ತಗತಿಯಾ?"

"ಅಂತ ಶಕ್ತಿ ನಮಗಿಲ್ಲ ಸಾರ್, ಸುಮ್ನೆ ಮಾಹಿತಿಗೆ ಕೇಳಿದೆ."

"ಮಾಹಿತಿ ತಗಂಡು ಬರಿಯಕ್ಕಾ?"

"ಬರದ್ರೇನಾಯ್ತದೆ ಸಾರ್. ನಿಮ್ಮನ್ನು ಕೊಲೆಗಾರ ಅಂತ ಬರದೋ. 420 ಅಂತ ಬರದೊ. ರಮ್ಯನ್ನ ಸೋಲಿಸ್ದ ಅಂತ ಬರದೊ. ಎಡೂರಪ್ಪನ ಹಿತೈಷಿ ಅಂತ ಬರದೊ. ಸದಾನಂದಗೌಡ ರಾಜಿನಾಮೆ ಕೊಟ್ಟಾಗ ಪ್ರತಿಭಟಿಸಿ ಅಂತ ಒಕ್ಕಲಿಗರ ಸಂಘಕ್ಕೆ ನೀವೇ ಪ್ರಚೋದನೆ ಮಾಡಿದಾಗ್ಲು ಬರದೊ. ನಿಮ್ಮ ವಿರುದ್ಧ ನಮ್ಮ ಹೋರಾಟವ್ಯಲ್ಲ ಸೋತವೆ ಸಾರ್. ಇವತ್ತು ನೋಡಿ ಡಿಕೆಶಿ, ಅಂಬರೀಶ್, ಆತ್ಮಾನಂದನಂತಹ ಕಾಂಗ್ರೆಸ್ಸಿನ ಘಟಾನುಘಟಿಗಳೆಲ್ಲಾ ಬಂದು ನಿಮಗೆ ಓಟು ಕೇಳಿದ್ರು. ನಿಮ್ಮ ಜಾಗದಲ್ಲಿ ಇನ್ನ್ಯಾರೆ ಇದ್ರೂ ಸರ್ವನಾಶವಾಗಿ ಹೋಯ್ತಿದ್ರು ಸಾರ್."

"ಈಗ್ಲಾರ ಗೊತ್ತಾಯ್ತಾ ಈ ಶಿವರಾಮೇಗೌಡ ಏನು ಅಂತ?"

"ನಿಜವಾಗ್ಲು ನೀವು ದೇವೇಗೌಡ್ರು ಮನೇಲಿ ಹುಟ್ಟಬೇಕಿತ್ತು ಸಾರ್?"

"ಥೂ ನಿಮ್ಮ. ನನ್ನಂಥೋನು ಅಲ್ಲಿರಕ್ಕಾಗದಿಲ್ಲ ಕಂಡ್ರಿ."

"ಮತ್ತೆ ದೇವೇಗೌಡ್ರು ಕಂಡೇಟಿಗೆ ಕಾಲಿಗೆ ಬೀಳ್ತಿರಿ?"

"ಅದ ನಿಜವಾದ ಭಕ್ತಿ ಅನ್ನಕಂಡ್ರ ನೀವು?"

"ನಿಜವಾದ ಭಕ್ತಿಯಿಂದ್ಲೇ ಬಿದ್ರು ತಪ್ಪಿಲ್ಲ ಸಾರ್, ಇಡೀ ದಳದ ರಾಜಕಾರಣಾನೆ ನಿಮ್ಮನ್ನ ತಿರಸ್ಕರಿಸಿದ್ದಾಗ ದೇವೇಗೌಡ್ರು ಹೌಸಿಂಗ್ ಬೋರ್ಡು ಚೇರ್ಮನ್ ಮಾಡಿದ್ರು. ಬಿಡಿಎ ಚೇರ್ಮನ್ ಆದ್ರಿ. ಆಗ ಮಾಡಿಕಂಡ ಸೈಟು, ಸ್ಕೂಲಿಂದ ಇನ್ನು ರಾಜಕಾರಣ ಮಾಡ್ತಯಿದ್ದಿರಿ. ಅಲ್ಲವ ಸಾರ್."

"ನಾನೊಬ್ಬನೇ ಮಾಡಿಕಂಡನೇನ್ರಿ? ಯಲ್ರೂ ಮಾಡಿಕಂಡ್ರಪ್ಪ."


"ನಿಜ ಸಾರ್. ನಿಮಿಗೋಲಿಸಿದ್ರೆ, ಸುಮಾರು ಜನ ಬರಿಗೈಲಿ ರಾಜಕಾರಣಕ್ಕೆ ಬಂದು ಇವತ್ತು ಸುಮಾರು ಕೋಟಿ ಒಡೆಯರಾದ್ರು."

"ಮತ್ತೆ, ಬರಿ ನಂದೆ ಹೇಳ್ತಿರಿ ನೀವು. ಫ್ಯಾಕ್ಟರಿ ಮಾರಿದ್ದಿನಿ, ತೋಟ ಮಾರಿದ್ದಿನಿ, ಗೊತ್ತ."


"ಹೋಗ್ಲಿ ಬಿಡಿ ಸಾರ್. ಬೆಂಗಳೂರಿನ ಆಯಕಟ್ಟಿನ ಜಾಗದಲ್ಲಿ ಸೈಟವೆ. ಡಾ. ರಾಮಕೃಷ್ಣನತ್ರ ಹೊಡದಿರೊ ಜಾಗನೆ ಕೋಟ್ಯಾಂತರ ರೂಪಾಯಿ ಆಯ್ತದೆ. ಇನ್ನೊಂದಿಸಿಯ ಸಾರ್. ನಿಮ್ಮ ವಿರುದ್ಧ ಇರೋ ಹ್ಯಾಂಡಬಿಲ್ಲಲಿ ನೀವು, ನಿಮ್ಮಗ ತಂದು ಇಟಗಂಡಿದ್ದ ದಲಿತ್ರ ಹುಡುಗಿ ಓಡಿಸಿ ಬ್ಯಾರೆ ಹೆಣ್ಣು ತಂದು ಮದುವೆ ಮಾಡಿದರಂತೆ. ನಿಜವೆ?"

"ಅಲ್ಲ ಕಂಡ್ರೀ, ನಾನು ಪಟೇಲ್ ರಾಮೇಗೌಡ್ರ ಮಗ, ನಮ್ಮ ಮನಿಗೆ ಒಬ್ಬ ದಲಿತ್ರುಡುಗಿ ಸೊಸೆಯಾಗಿ ಬರದ ಜನ ಒಪ್ತರ? ನಮ್ಮ ಮನೆ ಮರಿಯಾದಿಯೇನು? ನೀವು ವಂಶೀಕರ ಮಗನಾಗಿ ಇದ ಒಪ್ತಿರೇನ್ರಿ? ಅದ್ಕೆ ಆ ಹುಡುಗಿ ಬುಡುಸಿ ನಮ್ಮ ಜಾತಿ ಹೆಣ್ಣು ತಂದು ಮದುವೆ ಮಾಡಿದೆ. ಅದೂ ಬೆಂಗಳೂರ ಅರಮನೇಲಿ ಮಾಡಿದೆ."

"ಥೂತ್ತೇರಿ!!!"



ಜೇಟ್ಲಿ ಕ್ಲೀನ್ ಬೋಲ್ಡ್ ಬಟ್ ನಾಟೌಟ್!!



ಅರುಣ್ ಜೇಟ್ಲಿ

ಈ ಅರುಣ್ ಜೇಟ್ಲಿ ತಾನೇನೋ ಭಾರೀ ಚಾರಿತ್ರ್ಯವಂತ ಎಂಬ ಹಮ್ಮಿನಿಂದಲೇ ವ್ಯವಹರಿಸುತ್ತಿದ್ದ ವ್ಯಕ್ತಿ. ಈ ಹಿಂದೆ ಯಾವುದೇ ಹಗರಣಗಳಲ್ಲಿ ಜೇಟ್ಲಿ ಹೆಸರು ಕೇಳಿಬರದಿದ್ದುದು (ಭಾಗಿಯಾಗಿಲ್ಲ ಎಂದರ್ಥವಲ್ಲ; ಸಿಕ್ಕಿಹಾಕಿಕೊಂಡಿರಲಿಲ್ಲ ಎಂದರ್ಥ) ಇವರ ದಾರ್ಷ್ಟ್ಯವನ್ನು ಮತ್ತಷ್ಟು ಹೆಚ್ಚಿಸಿತ್ತು. ಜೊತೆಗೆ ಮಾಧ್ಯಮ ನಿರ್ವಹಣೆಯ ಕಲೆ ಚೆನ್ನಾಗಿ ಕರಗತವಾಗಿದ್ದುದರಿಂದ ಈತ ಮಾಧ್ಯಮಗಳಲ್ಲಿ ಮಿಂಚಿದ್ದೇ ಮಿಂಚಿದ್ದು.

ಹೀಗಿದ್ದ ಜೇಟ್ಲಿ ಕೊರಳಿಗೆ ಹಗರಣವೊಂದು ಸುತ್ತಿಕೊಂಡಿದೆ. ಪ್ರಧಾನಿ ಮೋದಿ ಮತ್ತು ಇಡೀ ಕೇಂದ್ರ ಸರ್ಕಾರ ಜೇಟ್ಲಿ ಬೆನ್ನಹಿಂದೆ ನಿಂತಿದ್ದಾರೆ. ಹೀಗಿದ್ದರೂ ಕೂಡ ಜೇಟ್ಲಿ ಗಂಡಾಂತರದಿಂದ ಪಾರಾಗಿದ್ದಾರೆ ಎಂದು ಹೇಳಲಿಕ್ಕಾಗದು. ಯಾಕೆಂದರೆ ಈ ಹಗರಣದ ಒಳಸುಳಿಗಳು ಅಷ್ಟು ಜಟಿಲವಾಗಿವೆ.

ಹಿನ್ನೆಲೆ

ಡಿಡಿಸಿಎ (ಡೆಲ್ಲಿ & ಡಿಸ್ಟ್ರಿಕ್ಟ್ ಕ್ರಿಕೆಟ್ ಅಸೋಸಿಯೇಷನ್) ಎಂಬ ಕ್ರಿಕೆಟ್ ಸಂಸ್ಥೆಯೊಂದಿದೆ. ಈ ಕ್ರಿಕೆಟ್ ಸಂಸ್ಥೆಗಳಿಗೂ ಹಗರಣಗಳಿಗೂ ಭಾರೀ ನಂಟು. ಈ ಕ್ರಿಕೆಟ್ ಸಂಸ್ಥೆಗಳ ಆಯಕಟ್ಟಿನ ಹುದ್ದೆಗೆ ಭಾರೀ ಪೈಪೋಟಿ ಇರುತ್ತದೆ. ಕ್ರಿಕೆಟ್‌ನ ಸುತ್ತ ಹರಿಯುವ ಝಣಝಣ ಕಾಂಚಾಣದ ಮಹಿಮೆಯೇ ಅಂಥಾದ್ದು. ಹಣಕಾಸು ಸಚಿವ ಮಾನ್ಯ ಅರುಣ್ ಜೇಟ್ಲಿಯವರು 1999 ರಿಂದ 2013ರವರೆಗೆ ಸುದೀರ್ಘಕಾಲ ಡಿಡಿಸಿಎ ಅಧ್ಯಕ್ಷರಾಗಿದ್ದರು. ಅವರು ಕ್ರಿಕೆಟ್ ಸಂಸ್ಥೆಗೆ ಅಧ್ಯಕ್ಷರಾಗಿದ್ದದ್ದು ಕೇವಲ 'ಕ್ರೀಡಾಪ್ರೇಮ' ಮತ್ತು ಕ್ರೀಡೆಗೆ 'ಸೇವೆ' ಸಲ್ಲಿಸುವ ಕಾರಣಕ್ಕಾಗಿ ಮಾತ್ರ ಎಂದು ನಾವೆಲ್ಲಾ ನಂಬಬೇಕೆಂಬುದು ಜೇಟ್ಲಿ ಮತ್ತು ಬಿಜೆಪಿ ಕೂಟದ ಆಗ್ರಹ. ಆದರೆ ಅಗೆದಂತೆಲ್ಲಾ ಮತ್ತಷ್ಟು ಕೊಳಕು ಹೊರಬಿದ್ದು ಡಿಡಿಸಿಎ ಒಂದು ದೊಡ್ಡ ತಿಪ್ಪೆಗುಂಡಿಯಂತಾಗಿದೆ.

ಜೇಟ್ಲಿ ಅಧ್ಯಕ್ಷರಾಗಿದ್ದ ಅವಧಿಯಲ್ಲಿ ಭಾರೀ ಪ್ರಮಾಣದ ಅವ್ಯವಹಾರಗಳು ನಡೆದಿವೆ ಎಂಬುದು ಈಗಿನ ವಿವಾದದ ಕೇಂದ್ರ ಬಿಂದು. ಕೆಲವು ವಾಸ್ತವಾಂಶಗಳನ್ನು ಪರಿಶೀಲಿಸೋಣ.

ಇತರೆ ರಾಜ್ಯ ಕ್ರಿಕೆಟ್ ಸಂಸ್ಥೆಗಳಿಗಿಂತ ಭಿನ್ನವಾಗಿ ಡಿಡಿಸಿಎ, ಕಂಪನಿ ಕಾಯ್ದೆಯಡಿ ರಿಜಿಸ್ಟರ್ ಆಗಿರುವ ಖಾಸಗಿ ಸಂಸ್ಥೆಯಾಗಿದೆ. ಇದರಲ್ಲಿ ಒಟ್ಟು 4,600 ಮಂದಿ ಸದಸ್ಯರಿದ್ದು ಅವರಲ್ಲಿ 300 ಸುಮಾರು ಮಂದಿ ಕಾರ್ಪೊರೇಟ್ ಸದಸ್ಯರು.

ಡಿಡಿಸಿಎ ಮಾಹಿತಿ ಹಕ್ಕು ಕಾಯ್ದೆ ವ್ಯಾಪ್ತಿಗೆ ತಾನು ಒಳಪಡುವುದಿಲ್ಲ ಎಂದು ಉದ್ದಕ್ಕೂ ಪ್ರತಿಪಾದಿಸುತ್ತಾ ಬಂದಿದೆ. ಹೀಗಾಗಿ ಸಂಸ್ಥೆಯ ಆಂತರಿಕ ವ್ಯವಹಾರಗಳ ಬಗ್ಗೆ ಯಾವುದೇ ಮಾಹಿತಿಯನ್ನು ಬಹಿರಂಗಗೊಳಿಸಬೇಕಾದ ಅಗತ್ಯವಿಲ್ಲ ಎಂಬುದು ಅದರ ವಾದ. ಆದರೆ ಈ ಕ್ರಿಕೆಟ್ ಸಂಸ್ಥೆ ಸರ್ಕಾರಿ ಭೂಮಿಯನ್ನು ಬಳಸಿಕೊಂಡು ಕಾರ್ಯನಿರ್ವಹಿಸುತ್ತಿರುವ ಸ್ವಾಯತ್ತ ಸಂಸ್ಥೆಯಾಗಿರುವುದರಿಂದ ಅದು ಆರ್‌ಟಿಐ ವ್ಯಾಪ್ತಿಗೆ ಒಳಪಡುತ್ತದೆ ಎಂದು ತನಿಖಾ ಸಂಸ್ಥೆಯೊಂದು ಅಭಿಪ್ರಾಯಪಟ್ಟಿದೆ. ಬಚ್ಚಿಡುವಂಥ ವ್ಯವಹಾರಗಳು ಏನೂ ಇಲ್ಲದಿದ್ದ ಮೇಲೆ ಡಿಡಿಸಿಎ ಸಂಸ್ಥೆ ಮಾಹಿತಿಗಳನ್ನು ಯಾಕೆ ಮುಚ್ಚಿಡುತ್ತಿದೆ ಎಂಬುದು ಅಷ್ಟು ಅರ್ಥವಾಗದ ರಹಸ್ಯವೇನಲ್ಲ ಬಿಡಿ.

ಅಂದಹಾಗೆ ಈ ಹಗರಣ ಹೊರಬಂದಿದ್ದು ಈಗ ಫೋಕಸ್‌ನಲ್ಲಿರುವ ದೆಹಲಿಯ ಎಎಪಿ ಸರ್ಕಾರ ಅಥವ ಅದರ ಸಿಎಂ ಕೇಜ್ರಿವಾಲ್‌ರಿಂದ ಅಲ್ಲ. ಇದು ಹೊರಬಂದಿದ್ದು ಕೀರ್ತಿ ಆಜಾದ್ ಎಂಬ ಮಾಜಿ ಕ್ರಿಕೆಟಿಗರೊಬ್ಬರಿಂದ; ಅವರು ಕಳೆದ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ಪಕ್ಷದ ಅಭ್ಯರ್ಥಿಯಾಗಿ ಬಿಹಾರ ರಾಜ್ಯದ ದರ್ಭಾಂಗ್ ಲೋಕಸಭಾ ಕ್ಷೇತ್ರದಿಂದ ಆರಿಸಿಬಂದಿರುವ ಸಂಸದ ಎಂಬುದು ಇನ್ನಷ್ಟು ಕುತೂಹಲಕಾರಿ ಸಂಗತಿ. ಡಿಡಿಸಿಎಯಲ್ಲಿ ನಡೆಯುತ್ತಿರುವ ಅಕ್ರಮಗಳ ಬಗ್ಗೆ ಹಾಗೂ ಅರುಣ್ ಜೇಟ್ಲಿ ಪಾತ್ರದ ಬಗ್ಗೆ ಸುಮಾರು ಒಂದು ದಶಕ ಕಾಲದಿಂದಲೂ ಕೀರ್ತಿ ಆಜಾದ್ ಅವರು ಪದೇ ಪದೇ ಪ್ರಶ್ನೆ ಎತ್ತುತ್ತಾ ಬಂದಿದ್ದಾರೆ.

ಕೀರ್ತಿ ಆಜಾದ್ ಅವರ ನಿರಂತರ ಪ್ರಯತ್ನದ ಫಲವಾಗಿ ಡಿಡಿಸಿಎ ತನಿಖೆಯನ್ನು ಎಸ್‌ಎಫ್‌ಐಒ (ಸೀರಿಯಸ್ ಫ್ರಾಡ್ ಇನ್ವೆಸ್ಟಿಗೇಷನ್ ಆರ್ಗನೈಸೇಷನ್) ಸಂಸ್ಥೆ ಕೈಗೆತ್ತಿಕೊಂಡಿದೆ. ಈ ಸಂಸ್ಥೆ ಕಾರ್ಪೊರೇಟ್ ವ್ಯವಹಾರಗಳ ಇಲಾಖೆಯಡಿ ಕಾರ್ಯ ನಿರ್ವಹಿಸುತ್ತಿದೆ. ವಿಪರ್ಯಾಸವೆಂದರೆ ಈ ಇಲಾಖೆಯನ್ನು ಹಣಕಾಸು ಸಚಿವಾಲಯದಡಿ ವಿಲೀನಗೊಳಿಸಿರುವುದರಿಂದ ಸದ್ಯ ಈ ತನಿಖಾ ಸಂಸ್ಥೆ ಮಾನ್ಯ ಜೇಟ್ಲಿಯವರ ಮುಷ್ಟಿಯಲ್ಲೇ ಇದೆ. ಇದು ಆಶ್ಚರ್ಯವೆನಿಸಿದರೂ ಇದೇ ವಾಸ್ತವ. ಈ ಸಂಸ್ಥೆ ಅಕ್ರಮಗಳ ಬಗ್ಗೆ 23 ಅಂಶಗಳನ್ನು ಪಟ್ಟಿ ಮಾಡಿದೆ. ಹಣಕಾಸು ದುರ್ಬಳಕೆ, ತೆರಿಗೆ ವಂಚನೆ, ಟೆಂಡರ್ ನಿಯಮಾವಳಿಗಳ ಉಲ್ಲಂಘನೆ, ಕಳಂಕಿತ ಆಡಿಟರ್‌ಗಳ ನೇಮಕ, ಸದಸ್ಯತ್ವ ನಿರ್ವಹಣೆಯಲ್ಲಿ ಅಕ್ರಮಗಳು, ಟಿಕೆಟ್ ವಿತರಣೆಯಲ್ಲಿ ಭ್ರಷ್ಟಾಚಾರ ಹೀಗೆ ಆ ಪಟ್ಟಿಯಲ್ಲಿ ಹಲವು ಗಂಭೀರ ಅಂಶಗಳಿವೆ.

ಎಸ್‌ಎಫ್‌ಐಒ ವರದಿಯಲ್ಲಿ ಸ್ಪಷ್ಟವಾಗಿ ಉಲ್ಲೇಖವಾಗಿರುವಂತೆ ಇಷ್ಟೆಲ್ಲಾ ಅಕ್ರಮಗಳ ಬಗ್ಗೆ ಪದೇಪದೇ ದೂರುಗಳು ಬಂದಾಗ್ಯೂ ಅವುಗಳನ್ನು ತಡೆಗಟ್ಟಲು ಸಾಸಿವೆ ಕಾಳಿನಷ್ಟು ಪ್ರಯತ್ನವನ್ನೂ ಮಾಡಲಾಗಿಲ್ಲ. ಅಂದಹಾಗೆ ಇದನ್ನೆಲ್ಲಾ ಮಾಡಬೇಕಿದ್ದುದ್ದು ಮಾನ್ಯ ಜೇಟ್ಲಿಯವರೆ. ಉಣ್ಣೋ ತಟ್ಟೆಯನ್ನೇ ಬಿಸಾಕಲು ಅವರಿಗೆ ಹೇಗೆ ಮನಸ್ಸು ಬಂದೀತು?

ಈ ಅಕ್ರಮಗಳಲ್ಲಿ ಪ್ರಮುಖವಾದುದು ಫಿರೋಜ್ ಶಾ ಕೋಟ್ಲಾ ಕ್ರೀಡಾಂಗಣಕ್ಕೆ ಸಂಬಂಧಿಸಿದ್ದು.

• ಫಿರೋಜ್ ಶಾ ಕೋಟ್ಲಾ ಕ್ರೀಡಾಂಗಣದ ಭೂಮಿ ದೆಹಲಿ ಅಭಿವೃದ್ಧಿ ಪ್ರಾಧಿಕಾರ (ಡಿಡಿಎ)ಕ್ಕೆ ಸೇರಿದ್ದು, ಅದನ್ನು ಗುತ್ತಿಗೆ ಆಧಾರದಲ್ಲಿ ಡಿಡಿಸಿಎ ಸಂಸ್ಥೆಗೆ ನೀಡಲಾಗಿತ್ತು. ಆಶ್ಚರ್ಯವೆಂದರೆ ಈ ಗುತ್ತಿಗೆ ಕರಾರು 2002ಕ್ಕೆ ಮುಕ್ತಾಯಗೊಂಡಿದ್ದು ಕಳೆದ 13 ವರ್ಷಗಳಿಂದ ಡಿಡಿಸಿಎ ಎಂಬ ಖಾಸಗಿ ಸಂಸ್ಥೆ ಈ ಭೂಮಿಯನ್ನು ಅಕ್ರಮವಾಗಿ ತನ್ನ ವಶದಲ್ಲಿಟ್ಟುಕೊಂಡಿದೆ. ಈ ಬಗ್ಗೆ ಡಿಡಿಎ ಈವರೆಗೂ ಬಾಯೇ ಬಿಚ್ಚಿಲ್ಲ ಎಂಬುದಕ್ಕೆ ಅಕ್ರಮ ಒಳಒಪ್ಪಂದಗಳನ್ನು ಬಿಟ್ಟರೆ ಸದ್ಯಕ್ಕೆ ಬೇರೆ ಯಾವ ಕಾರಣಗಳೂ ಕಂಡುಬರುತ್ತಿಲ್ಲ.

• ತಾನು ಅಕ್ರಮವಾಗಿ ಸ್ವಾಧೀನದಲ್ಲಿರಿಸಿಕೊಂಡಿರುವ ಭೂಮಿಯ ಮೇಲೆ ಯಾವುದೇ ಅಧಿಕಾರ ಇಲ್ಲದಿದ್ದಾಗ್ಯೂ ಡಿಡಿಸಿಎ ಕಳೆದ ಐದಾರು ವರ್ಷಗಳಲ್ಲಿ ಸುಮಾರು 500 ಕೋಟಿಗಳನ್ನು ಕಟ್ಟಡ ನಿರ್ಮಾಣ ಮತ್ತು ನವೀಕರಣ ಕಾಮಗಾರಿಗಳಿಗಾಗಿ ವೆಚ್ಚ ಮಾಡಿದೆ. ಅಂದರೆ ಪ್ರತಿವರ್ಷ ಸರಾಸರಿ 100 ಕೋಟಿಗಳು! ಈ ದಾರ್ಷ್ಟ್ಯ ಮತ್ತು ಧೈರ್ಯ ಡಿಡಿಸಿಎಯನ್ನು ನಿಯಂತ್ರಿಸುತ್ತಿರುವ ಕಾರ್ಪೊರೇಟ್ ಮಂದಿಗೆ ಎಲ್ಲಿಂದ ಬಂದಿದೆ? ಯಾವುದೇ ಸರಕಾರ ಬಂದರೂ ಅವರೆಲ್ಲ ತಮ್ಮ ಕಿಸೆಯಲ್ಲಿರುತ್ತಾರೆ ಎಂಬ ಧೈರ್ಯ ತಾನೇ? ಹಾಗಾದರೆ ಪ್ರಜಾತಂತ್ರದ, ಸಂವಿಧಾನದ ಕತೆಯೇನು?

ನಮ್ಮ ಪ್ರಜಾತಂತ್ರದಲ್ಲಿ ಕೆಲವರು ಹೆಚ್ಚು ಸಮಾನರು ಎಂಬುದಕ್ಕೆ ಇದು ಮತ್ತೊಂದು ನಿದರ್ಶನ ಅಷ್ಟೆ.

• 13 ಸ್ಥಳಗಳಲ್ಲಿ ಅಕ್ರಮ, ಕಾನೂನುಬಾಹಿರ ಕಟ್ಟಡಗಳನ್ನು ನಿರ್ಮಿಸಿರುವುದಾಗಿ ಸ್ಥಳ ತನಿಖೆಯಿಂದ ಬಹಿರಂಗವಾಗಿದೆ.

• ಹಲವಾರು ಸಂದರ್ಭಗಳಲ್ಲಿ ಕೋಟ್ಯಾಂತರ ರೂ. ಹಣವನ್ನು, ಅಧಿಕೃತ ಒಪ್ಪಿಗೆಯಿಲ್ಲದೆ ನಗದು ರೂಪದಲ್ಲಿ ಸಂದಾಯ ಮಾಡಿರುವುದು ಆಡಿಟಿಂಗ್ ವರದಿಯಲ್ಲಿ ಪತ್ತೆಯಾಗಿದೆ.

• ವಿಧಾನ್ ಇನ್ಫ್ರಾಸ್ಟ್ರಕ್ಚರ್, ಶ್ರೀರಾಮ್ ಟ್ರೇಡ್‌ಕಾಂ ಮತ್ತು ಮ್ಯಾಪಲ್ ಇನ್‌ಫ್ರಾ ರಿಯಾಲಿಟಿ ಎಂಬ ಕಂಪನಿಗಳಿಗೆ ಯಾವುದೇ ಕಾಮಗಾರಿಯನ್ನು ಕೈಗೊಳ್ಳದಿದ್ದಾಗ್ಯೂ ಮುಂಗಡ ಹಣ ಪಾವತಿ ಮಾಡಲಾಗಿದೆ.

• ಪ್ರತಿವರ್ಷ ಡಿಡಿಸಿಎ ಸರಾಸರಿ 30 ಕೋಟಿ ರೂಪಾಯಿಗಳನ್ನು ಕ್ರಿಕೆಟ್ ಉತ್ತೇಜನದ ಹೆಸರಿನಲ್ಲಿ ಪಡೆದುಕೊಳ್ಳುತ್ತಿದ್ದು, ಅದರ ವೆಚ್ಚದ ಬಗ್ಗೆ ಸರಿಯಾದ ದಾಖಲೆಗಳನ್ನು ನಿರ್ವಹಿಸಿಲ್ಲ.


ಕೀರ್ತಿ ಆಜಾದ್ ಜೊತೆಗೆ ಬಿಶನ್ ಸಿಂಗ್ ಬೇಡಿ ಎಂಬ ಮತ್ತೊಬ್ಬ ಕ್ರೀಡಾಪಟುವೂ ಸೇರಿಕೊಂಡಿರುವುದರಿಂದ ಜೇಟ್ಲಿ ವಿರುದ್ಧದ ದನಿ ಗಟ್ಟಿಗೊಂಡಿದೆ. ಈ ಇಬ್ಬರೂ ಸೇರಿ ಇದುವರೆಗೆ ಸುಮಾರು 200 ಪತ್ರಗಳನ್ನು ಬರೆದಿದ್ದಾರೆ. ಈ ಪತ್ರಗಳ ಒಕ್ಕಣೆ ಡಿಡಿಸಿಎನಲ್ಲಿ ನಡೆಯುತ್ತಿರುವ ಅಕ್ರಮಗಳ ವಿವರಣೆ ಹಾಗೂ ಅವುಗಳಿಗೆ ಕಡಿವಾಣ ಹಾಕಬೇಕೆಂಬ ಆಗ್ರಹ ಮಾತ್ರ. ಈ ಬಹುಪಾಲು ಪತ್ರಗಳನ್ನು ಅವರು ಮಾನ್ಯ ಜೇಟ್ಲಿಯವರಿಗೆ ಡಿಡಿಸಿಎ ಅಂದಿನ ಅಧ್ಯಕ್ಷರಾಗಿದ್ದ ಅವಧಿಯಲ್ಲೂ, ಸಚಿವರಾಗಿರುವ ಅವಧಿಯಲ್ಲೂ ಬರೆದಿದ್ದಾರೆ. ಅಷ್ಟೇ ಅಲ್ಲದೆ ಪ್ರಧಾನಿ ಮೋದಿಗೂ ಹಲವು ಪತ್ರ ಬರೆದಿದ್ದಾರೆ. ಕೆಲವೊಮ್ಮೆ ಪತ್ರಗಳನ್ನು ಮಾಧ್ಯಮಗಳಿಗೂ ಬಿಡುಗಡೆ ಮಾಡಿದ್ದಾರೆ. ಆದರೆ ಜೇಟ್ಲಿಯಾಗಲಿ, ಮೋದಿಯಾಗಲಿ ಈ ಕೂಗನ್ನು ಕನಿಷ್ಠ ಪಕ್ಷ ಕೇಳಿಸಿಕೊಳ್ಳುವ ಗೋಜಿಗೂ ಹೋಗಲಿಲ್ಲ. ಹೇಗಿದ್ದರೂ ಅವರ ನಿಘಂಟಿನಲ್ಲಿ ಕಾಂಗ್ರೆಸ್ ಅಥವ ಇತರೆ ಪಕ್ಷಗಳು ಮಾಡಿದ ಭ್ರಷ್ಟಾಚಾರಗಳು ಮಾತ್ರ ಭ್ರಷ್ಟಾಚಾರ ಎನಿಸಿಕೊಳ್ಳುತ್ತವೆ; ತಮ್ಮ ಪಕ್ಷದವರೇ ಮಾಡುವ ಭ್ರಷ್ಟಾಚಾರಗಳಿಗೆ 'ವಿರೋಧ ಪಕ್ಷಗಳ ಅಪಪ್ರಚಾರ'ವೆಂಬ ವಿಶೇಷ ಅರ್ಥವನ್ನು ಈಗಾಗಲೇ ಜಾರಿ ಮಾಡಲಾಗಿದೆ.

ಬಿಜೆಪಿ ಪಕ್ಷದವರ ನಡೆಯಲ್ಲಿ ಅಂಥಾ ಆಶ್ಚರ್ಯವಾದುದೇನೂ ಇಲ್ಲ ಬಿಡಿ. ಆದರೆ ಈ ಮಾಧ್ಯಮಗಳಿಗೆ ಕನಿಷ್ಠ ಮಾನಮರ್ಯಾದೆಯಾದರೂ ಬೇಡವೆ? ಆಡಳಿತ ಪಕ್ಷದ ಸಂಸದರೊಬ್ಬರು ಪ್ರಮುಖ ಸಚಿವರ ಬಗ್ಗೆ ಭ್ರಷ್ಟಾಚಾರದ ಗಂಭೀರ ಆರೋಪ ಮಾಡುತ್ತಿದ್ದರೂ, ಆ ಬಗ್ಗೆ ಬಹಿರಂಗ ಪತ್ರ ಬರೆಯುತ್ತಿದ್ದರೂ ಅವೆಲ್ಲವನ್ನೂ ಕುಂಡಿ ಕೆಳಗೆ ಹಾಕಿ ಕೂತಿದ್ದು ಮಾತ್ರ ಅಕ್ಷಮ್ಯ ಅಪರಾಧ. ಡಿಡಿಸಿಎ ದಲ್ಲಿ ತೊಡಗಿಕೊಂಡಿರುವ ಕಾರ್ಪೊರೇಟ್ ಕುಳಗಳಿಗೂ ಮಾಧ್ಯಮಗಳನ್ನು ನಿಯಂತ್ರಿಸುತ್ತಿರುವ ಕುಳಗಳಿಗೂ ನಡುವಿನ ಬಾಂಧವ್ಯಗಳ ಬೆಸುಗೆಯೇ ಅಂಥಾದ್ದು.

ಕೇಜ್ರಿವಾಲ್ ಎಂಟ್ರಿ

ವಿಷಯ ಹೀಗಿದ್ದಾಗ ದೆಹಲಿಯಲ್ಲಿ ಕೇಜ್ರಿವಾಲ್ ಸರ್ಕಾರ ಅಧಿಕಾರಕ್ಕೆ ಬಂದಿದೆ. ಡಿಡಿಸಿಎ ಸಂಸ್ಥೆ ಹಾಗೂ ಕ್ರಿಕೆಟ್ ಮೈದಾನ ಇತ್ಯಾದಿ ಸ್ವತ್ತುಗಳು ದೆಹಲಿ ಸರ್ಕಾರದ ವ್ಯಾಪ್ತಿಯಲ್ಲಿ ಬರುತ್ತವೆಯಾದ್ದರಿಂದ ಈ ಬಗ್ಗೆ ಎಎಪಿ ಸರ್ಕಾರ ತನಿಖೆ ಕೈಗೊಂಡಿದೆ. ಅದಕ್ಕಾಗಿ ಒಂದು ತನಿಖಾ ಆಯೋಗವನ್ನು ನೇಮಿಸಿದೆ. ಸದರಿ ತನಿಖಾ ಆಯೋಗ ತನ್ನ ವರದಿಯನ್ನು ಕೊಟ್ಟಿದ್ದೂ ಆಗಿದೆ.

ಹೀಗೆ ದಿನಗಳು ಕಳೆದಂತೆಲ್ಲಾ ಕ್ರಮೇಣ ತನ್ನ ಕೊರಳಿಗೆ ಉರುಳಾಗುತ್ತಿರುವ ಕೇಜ್ರಿವಾಲ್ ಸರ್ಕಾರವನ್ನು ಬೆದರಿಸಿ, ಮಟ್ಟ ಹಾಕಲು ಜೇಟ್ಲಿ ಏನೆಲ್ಲ ಕಸರತ್ತು ನಡೆಸುತ್ತಿದ್ದಾರೆ. ಕೇಜ್ರಿವಾಲ್ ಕಚೇರಿ ಮೇಲೆ ಸಿಬಿಐ ರೈಡು ಮಾಡಿಸಿದರು; ಉಹೂಂ, ಕೇಜ್ರಿವಾಲ್ ಜಗ್ಗಲಿಲ್ಲ. ಜೇಟ್ಲಿ ಅಕ್ರಮಗಳ ವಿರುದ್ಧ ತನಿಖೆ ನಡೆಸಿಯೇ ಸಿದ್ಧ ಎಂದು ಘಂಟಾಘೋಷವಾಗಿ ಘೋಷಿಸಿಬಿಟ್ಟರು. ಜೇಟ್ಲಿಗೆ ಮುಖ ಉಳಿಸಿಕೊಳ್ಳಲು ಗತ್ಯಂತರ ಇಲ್ಲದಂತಾಗಿ ಈಗ ಮಾನನಷ್ಟ



ಕೇಜ್ರಿವಾಲ್



ಕೀರ್ತಿ ಆಜಾದ್

ಜೇಟ್ಲಿ ಚರಿತ್ರೆಯ ಜಟಿಲತೆ

ಜೇಟ್ಲಿ ವಿದ್ಯಾರ್ಥಿ ದೆಸೆಯಿಂದಲೂ ಸಂಘ ಪರಿವಾರದ ಸಖ್ಯದಲ್ಲೇ ಬೆಳೆದವರು. ತುರ್ತು ಪರಿಸ್ಥಿತಿ ಕಾಲದಲ್ಲಿ ಜೈಲುವಾಸ ಅನುಭವಿಸಿದ್ದು ಇವರ ಕೆರಿಯರ್‌ಗೆ ಭದ್ರಬುನಾದಿ ಹಾಕಿಕೊಟ್ಟಿತು. ನಂತರ ಜೈಪ್ರಕಾಶ್ ನಾರಾಯಣ್ ಅವರ ಚಳವಳಿಯಲ್ಲಿ ಕಾಣಿಸಿಕೊಂಡು, ಮುಂದಿನ ದಿನಗಳಲ್ಲಿ ಬಿಜೆಪಿ ಪಕ್ಷದಲ್ಲಿ ಭದ್ರ ನೆಲೆ ಕಂಡುಕೊಂಡವರು.

ದಶಕಗಳ ಕಾಲ ವೃತ್ತಿಪರ ವಕೀಲರಾಗಿದ್ದವರು. ಅದರಲ್ಲೂ ಕಾರ್ಪೊರೇಟ್ ಸಂಬಂಧಿ ಪ್ರಕರಣಗಳಲ್ಲಿ ಇವರದು ಎತ್ತಿದ ಕೈ. ದೇಶಭಕ್ತಿ ಸ್ವದೇಶಿ ಮುಖವಾಡಗಳ ನಡುವೆಯೂ ವಿದೇಶಿ ಕಂಪನಿಗಳಾದ ಪೆಪ್ಸಿ, ಕೋಕೋಕೋಲಾದಂಥ ಕಂಪನಿಗಳ ಪರವಾಗಿ ವಕಾಲತ್ತು ವಹಿಸಿ ಪುಣ್ಯ ಕಟ್ಟಿಕೊಂಡಿದ್ದಾರೆ. ಹಾಗೆಯೇ ಕಾಂಗ್ರೆಸ್ ನಾಯಕ ಮಾಧವ್‌ರಾವ್ ಸಿಂಧಿಯಾ, ಜನತಾ ದಳದ ಶರದ್ ಯಾದವ್ ಮುಂತಾದವರ ಕೇಸುಗಳಲ್ಲೂ ವಕಾಲತ್ತು ವಹಿಸಿದ್ದಾರೆ. ಹೀಗೆ ಎಲ್ಲ ಪಕ್ಷಗಳ ಆಯ್ದ ನಾಯಕರೊಂದಿಗೆ ಬಾಂಧವ್ಯ ಹೊಂದಿರುವುದು ಇವರ ವೈಶಿಷ್ಟ್ಯ.

ಪಕ್ಷದ ಪ್ರಧಾನ ಕಾರ್ಯದರ್ಶಿಯಾಗಿದ್ದ ಅವಧಿಯಲ್ಲಿ, ಹಲವು ರಾಜ್ಯಗಳ ವಿಧಾನಸಭಾ ಚುನಾವಣೆಯಲ್ಲಿ ಪಕ್ಷದ ಪರ ಉಸ್ತುವಾರಿ ವಹಿಸಿ ಗೆಲುವು ತಂದುಕೊಟ್ಟ ಖ್ಯಾತಿ ಜೇಟ್ಲಿಯವರದು. ಈ ಹಿಂದಿನ ವಿಧಾನಸಭಾ ಚುನಾವಣೆಯಲ್ಲಿ ಯಡ್ಯೂರಪ್ಪ ನೇತೃತ್ವದಲ್ಲಿ ಬಿಜೆಪಿ ಕರ್ನಾಟಕದಲ್ಲಿ ಜಯಭೇರಿ ಬಾರಿಸಲು ಜೇಟ್ಲಿ ತಂತ್ರಗಳೇ ಕಾರಣ ಎಂದು ರಾಜಕೀಯ ಪಂಡಿತರು ಷರಾ ಬರೆದಿದ್ದರು. ಆ ದಿನಗಳಲ್ಲಿ ನಡೆದ ಆಪರೇಷನ್ ಕಮಲದಲ್ಲೂ ಜೇಟ್ಲಿ ತಂತ್ರಗಾರಿಕೆ ಕೆಲಸ ಮಾಡಿತ್ತು. ಅಷ್ಟೇ ಏಕೆ? 2002ರ ಗುಜರಾತ್ ಚುನಾವಣೆಯಲ್ಲಿ ಮೋದಿ ನೇತೃತ್ವದಲ್ಲಿ ಬಿಜೆಪಿ ಪ್ರಪ್ರಥಮ ಬಾರಿಗೆ ಭಾರೀ ಬಹುಮತ ಗಳಿಸಲು ಜೇಟ್ಲಿ ವ್ಯೂಹತಂತ್ರಗಳು ಸಾಕಷ್ಟು ಕೆಲಸ ಮಾಡಿದ್ದವು. ಮೋದಿ - ಅದಾನಿ ಜೋಡಿಗೆ ಜೇಟ್ಲಿ ಮೊದಲಿನಿಂದಲೂ ಅತ್ಯಂತ ಆಪ್ತ.

ಇಂತಿಪ್ಪ ಜೇಟ್ಲಿ ಮಹಾನುಭಾವರು ಹಲವು ಬಾರಿ ಮಂತ್ರಿ ಮಹೋದಯರಾಗಿ ರಾರಾಜಿಸಿದ್ದರೂ ಎಂದಿಗೂ ನೇರವಾಗಿ ಚುನಾವಣಾ ಅಖಾಡಕ್ಕಿಳಿದಿರಲೇ ಇಲ್ಲ. ಈ ಚಾಣಾಕ್ಷ ಕಳೆದ ಲೋಕಸಭಾ ಚುನಾವಣೆಯಲ್ಲಿ ಅಮೃತಸರ ಲೋಕಸಭಾ ಕ್ಷೇತ್ರದಿಂದ ಪ್ರಪ್ರಥಮ ಬಾರಿಗೆ ಸ್ಪರ್ಧಿಸಿ ಮಣ್ಣುಮುಕ್ಕಿದ್ದು ವಿಪರ್ಯಾಸವೇ ಸರಿ. ಸದ್ಯ ಬಿಜೆಪಿ ಪಕ್ಷ ಇವರನ್ನು ಗುಜರಾತ್‌ನಿಂದ ರಾಜ್ಯಸಭೆಗೆ ಆರಿಸಿ ಕಳಿಸಿದೆ. ರಾಜ್ಯಸಭಾ ನಾಯಕ ಸ್ಥಾನಮಾನ ಕೂಡ ಸದ್ಯ ಇವರ ಮುಡಿಯಲ್ಲೇ ಇದೆ.

ವಾಜಪೇಯಿ ಸರಕಾರದಲ್ಲಿ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ, ಕಾನೂನು ಮತ್ತು ನ್ಯಾಯ ಸೇವೆ ಇಲಾಖೆ, ರಕ್ಷಣಾ ಇಲಾಖೆಗಳಿಗೂ ಅಲ್ಪಾವಧಿ ಮಂತ್ರಿಯಾಗಿದ್ದವರು. ಈಗ ಹಾಲಿ ಹಣಕಾಸು ಸಚಿವ, ಮಾಹಿತಿ ಮತ್ತು ಪ್ರಚಾರ ಇಲಾಖೆಯೂ ಹಾಲಿ ಇವರ ಕೈಯಲ್ಲೇ ಇದೆ. ಹೀಗೆ ಜೈಟ್ಲಿ ಪಟ ಎತ್ತರೆತ್ತರಕ್ಕೆ ಹಾರುತ್ತಿದೆ.

ಹೀಗಿರುವಾಗ ಡಿಡಿಸಿಎ ಹಗರಣ ಹೊರಬಂದಿದೆ. ಹಗರಣದ ತನಿಖೆಗೆ ಕೇಜ್ರಿ ಸರ್ಕಾರಕ್ಕೆ ಒಂದಷ್ಟು ಕನಿಷ್ಠ ಅವಕಾಶಗಳು ಸಿಕ್ಕಿದರೂ ಸಾಕು; ಈ ಹಗರಣವನ್ನು ಮತ್ತಷ್ಟು ಅಗೆದಂತೆಲ್ಲಾ ಮತ್ತಷ್ಟು ಅಸ್ಥಿಪಂಜರಗಳು ಹೊರಬರುವ ಸಾಧ್ಯತೆ ನಿಚ್ಚಳವಾಗಿದೆ. ಎತ್ತರದಲ್ಲಿ ಹಾರುತ್ತಿರುವ ಜೇಟ್ಲಿ ಎಂಬ ಗಾಳಿಪಟದ ಸೂತ್ರ ತುಂಡಾಗಿ ನೆಲ ಕಚ್ಚಲಿದೆ.

ಮೊಕದ್ದಮೆ ತಂತ್ರ ಬಳಸಿದ್ದಾರೆ.

ಇತ್ತ ಕೇಜ್ರಿವಾಲ್ ಮತ್ತಿತರರ ಮೇಲೆ ಮಾನನಷ್ಟ ಮೊಕದ್ದಮೆ ಹೂಡುತ್ತಿದ್ದಂತೆ ಮತ್ತೊಂದು ನಾಟಕೀಯ ಬೆಳವಣಿಗೆ ನಡೆಯಿತು. ಈ ಮೊದಲಿನಿಂದಲೂ ಜೇಟ್ಲಿ ಅಕ್ರಮಗಳ ವಿರುದ್ಧ ಸಮರ ಸಾರಿದ್ದ ಕೀರ್ತಿ ಆಜಾದ್ ಪತ್ರಿಕಾಗೋಷ್ಠಿ ನಡೆಸಿ, ತನ್ನ ಮೇಲೆಯೂ ಮಾನನಷ್ಟ ಮೊಕದ್ದಮೆ ಹಾಕುವಂತೆ ಬಹಿರಂಗವಾಗಿ ಸವಾಲು ಹಾಕಿದರು. ಈ ಎಲ್ಲ ಪರಿಣಾಮಗಳಿಂದಾಗಿ ದಿಕ್ಕೇ ತೋಚದಂತಾದ ಮೋದಿ ಪಟಾಲಂ ಸದ್ಯಕ್ಕೆ ಕೀರ್ತಿ ಆಜಾದ್‌ರನ್ನು ಬಿಜೆಪಿಯಿಂದ ಅಮಾನತ್ತು ಮಾಡಿ ನಿಟ್ಟುಸಿರುಬಿಟ್ಟಿದ್ದಾರೆ.

ಆದರೆ ಇದು ಬಾಣಲೆಯಿಂದ ಬೆಂಕಿಗೆ ಹಾರಿದಂತಾಗಿದೆ. ಇದೇ ಸಂದರ್ಭವನ್ನು ಕಾಯುತ್ತಿದ್ದ ಬಿಜೆಪಿಯ ಮತ್ತೊಬ್ಬ ಮುಖಂಡ ಶತ್ರುಘ್ನ ಸಿನ್ಹಾ ಬಿಜೆಪಿ ನಾಯಕತ್ವದ ವಿರುದ್ಧ ಹರಿಹಾಯ್ದಿದ್ದಾರೆ. ಬಿಜೆಪಿಯ ಮಾರ್ಗದರ್ಶಕ ಮಂಡಳಿಯಲ್ಲಿರುವ ಅಡ್ವಾಣಿ, ಜೋಷಿ ಮುಂತಾದ ಹಿರಿಯರು ಬಹಿರಂಗವಾಗಿ ಆಜಾದ್ ಪರ ಬ್ಯಾಟಿಂಗ್‌ಗೆ ಇಳಿದಿದ್ದಾರೆ. ಇದು ಬಿಜೆಪಿಯಲ್ಲಿರುವ ಭಿನ್ನಮತೀಯ ಬಣಗಳ ಕಚ್ಚಾಟವನ್ನು ಮತ್ತಷ್ಟು ಹೆಚ್ಚಿಸಿದೆ.

ಮೋದಿ ಮತ್ತು ಅವರ ಪಟಾಲಂ ಮುಖ ಉಳಿಸಿಕೊಳ್ಳಲು ಹೆಣಗಾಡುತ್ತಿರುವುದಂತೂ ನಿಚ್ಚಳ. ಇದರ ಭಾಗವಾಗಿ ಬಿಜೆಪಿ ವಕ್ತಾರರು "ಅರುಣ್ ಜೈಟ್ಲಿಯವರಿಗೆ ಕ್ಲೀನ್ ಚಿಟ್" ಎಂಬ ಸುದ್ದಿಯನ್ನು ಉತ್ಪಾದಿಸುತ್ತಿದ್ದಾರೆ. ತನಿಖಾ ವರದಿಯಲ್ಲಿ ಅರುಣ್ ಜೇಟ್ಲಿಯವರ ಹೆಸರಿನ ಪ್ರಸ್ತಾಪವೇ ಇಲ್ಲವೆಂದು ತುತ್ತೂರಿ ಊದಿದ ಬಿಜೆಪಿ ವಕ್ತಾರರ ಮಾತನ್ನು ಎಲ್ಲ ಮಾಧ್ಯಮಗಳು ದಶದಿಕ್ಕುಗಳಿಗೂ ಪ್ರಚುರಪಡಿಸುತ್ತಿವೆ. ಆದರೆ ವಾಸ್ತವದಲ್ಲಿ ಎಸ್‌ಎಫ್‌ಐಓ (ಸೀರಿಯಸ್ ಫ್ರಾಡ್ ಇನ್ವೆಸ್ಟಿಗೇಷನ್ ಆಫೀಸ್), ನ್ಯಾಯಾಲಯ ನೇಮಕ ಮಾಡಿದ ಇಬ್ಬರು ಜಡ್ಜ್‌ಗಳ ಕಮಿಟಿ, ಡಿಡಿಸಿಎ ಹಗರಣದ ಸತ್ಯಶೋಧನಾ ಸಮಿತಿ - ಹೀಗೆ ಎಲ್ಲವೂ ಡಿಡಿಸಿಎಯಲ್ಲಿ ಅರುಣ್ ಜೇಟ್ಲಿ ನೇತೃತ್ವದಲ್ಲಿ ಭಾರೀ ಅಕ್ರಮಗಳು, ಅವ್ಯವಹಾರಗಳು ನಡೆದಿರುವುದನ್ನೇ ಎತ್ತಿತೋರಿಸುತ್ತಿವೆ.

"ಅರುಣ್ ಜೈಟ್ಲಿಯವರು ಮುಚ್ಚಿಡಲು ಏನೂ ಇಲ್ಲದಿದ್ದರೆ ದೆಹಲಿ ಸರ್ಕಾರ ಕೈಗೊಂಡಿರುವ ತನಿಖೆಯನ್ನು ಎದುರಿಸಲು ಸಿದ್ಧರಾಗಲಿ, ತನಿಖೆಗೆ ಸಹಕಾರ ನೀಡಲಿ" ಎಂದು ಎಎಪಿ ವಕ್ತಾರರು ಸವಾಲು ಹಾಕುತ್ತಿದ್ದಾರೆ. ಪಕ್ಷದ ವಕ್ತಾರರಿಂದ "ಕ್ಲೀನ್ ಚಿಟ್" ಸರ್ಟಿಫಿಕೇಟ್



ಪಡೆದುಕೊಳ್ಳುವ ಬದಲು ತನಿಖಾ ಆಯೋಗದ ಮುಂದೆ ಹಾಜರಾಗಿ ಕ್ಲೀನ್‌ಚಿಟ್ ಪಡೆಯಲಿ ಎಂಬ ಸವಾಲನ್ನು ಸ್ವೀಕರಿಸುವ ಸ್ಥಿತಿಯಲ್ಲಿ ಜೇಟ್ಲಿ ಇಲ್ಲ. ಡಿಡಿಸಿಎಯ ಅಕ್ರಮಗಳು ಜೇಟ್ಲಿ ಪಾಲಿಗೆ ಬಿಸಿತುಪ್ಪವಾಗಿ ಪರಿಣಮಿಸಿರುವುದಂತೂ ಸತ್ಯ.

ಈ ಮಧ್ಯೆ ಹೆಸರಾಂತ ನ್ಯಾಯಾಧೀಶರು ಮತ್ತು ಮಾಜಿ ಸಾಲಿಸಿಟರ್ ಜನರಲ್ ಆಗಿದ್ದ ಗೋಪಾಲ್ ಸುಬ್ರಮಣ್ಯನ್ ಅವರು ದೆಹಲಿ ಸರ್ಕಾರ ನೇಮಿಸಲಿರುವ ಡಿಡಿಸಿಎ ಅಕ್ರಮಗಳ ತನಿಖಾ ಆಯೋಗದ ಮುಖ್ಯಸ್ಥರಾಗಲು ಒಪ್ಪಿದ್ದಾರೆ. ಮುಖ್ಯಮಂತ್ರಿಗೆ ಅವರು ಬರೆದಿರುವ ಪತ್ರದಲ್ಲಿ ದೆಹಲಿ ಸರ್ಕಾರಕ್ಕೆ ಇಂಥಾ ತನಿಖೆ ಕೈಗೊಳ್ಳುವ ಅಧಿಕಾರವಿದೆ ಎಂಬುದನ್ನೂ ಸ್ಪಷ್ಟಪಡಿಸಿದ್ದಾರೆ.

ಮತ್ತೊಂದು ತಮಾಷೆ ನೋಡಿ. ಈ ಹಿಂದೆ ಖುದ್ದು ಮೋದಿ ಸರ್ಕಾರ ಡಿಡಿಸಿಎ ಆರೋಪಕ್ಕೆ ಪ್ರತಿಕ್ರಿಯಿಸುತ್ತಾ 'ಈ ಬಗ್ಗೆ ತನಿಖೆ ನಡೆಸಬೇಕೆಂದು' ದೆಹಲಿ ಸರ್ಕಾರಕ್ಕೆ ಬರೆದ ಪತ್ರದಲ್ಲಿ ತಿಳಿಸಿತ್ತು. ಆದರಂತೆ ನಾವು ಈಗ ತನಿಖೆ ಕೈಗೊಂಡಿದ್ದೇವೆ. ಈಗ ತಮ್ಮ ನಿಲುವಿನಿಂದ ಹಿಂದೆ ಸರಿದು ಈಗ ದೇಶದ ಜನರ ಮುಂದೆ ಮೋದಿ ಸರ್ಕಾರ ನಗೆಪಾಟಲಿಗೀಡಾಗಬಾರದು" ಎಂದು ಕೇಜ್ರಿವಾಲ್ ಕುಟುಕಿದ್ದಾರೆ.

ಕೇಜ್ರಿವಾಲ್ ಸವಾಲನ್ನು ನೇರವಾಗಿ ಎದುರಿಸಲಾಗದ ಮೋದಿ ಸರ್ಕಾರ ಗವರ್ನರ್ ಜಂಗ್‌ರನ್ನು ಛೂಬಿಟ್ಟಿದೆ. "ದೆಹಲಿ ಒಂದು ಪೂರ್ಣ ಪ್ರಮಾಣದ ರಾಜ್ಯವಲ್ಲವಾದ್ದರಿಂದ ತನಿಖಾ ಆಯೋಗ ರಚಿಸುವ ಅಧಿಕಾರವಿಲ್ಲ" ಎಂದು ಹೇಳುವ ಮೂಲಕ ಲೆ.ಗವರ್ನರ್ ನಜೀಬ್ ಜಂಗ್ ತಮ್ಮ ಮೋದಿ ನಿಷ್ಠೆಯನ್ನು ಪ್ರದರ್ಶಿಸಿದ್ದಾರೆ. ಆದರೆ ಇದಕ್ಕೆ ತೀಕ್ಷ್ಣವಾಗಿ ಪ್ರತಿಕ್ರಿಯಿಸಿರುವ ಸುಪ್ರೀಂಕೋರ್ಟ್‌ನ ಮಾಜಿ ನ್ಯಾಯಾಧೀಶರಾಗಿರುವ ಮಾರ್ಕಂಡೇಯ ಕಟ್ಜು ಅವರು ನಜೀಬ್‌ಜಂಗ್ ಅವರ ವಾದವನ್ನು ತಳ್ಳಿಹಾಕಿ ದೆಹಲಿ ಸರ್ಕಾರಕ್ಕೆ ತನಿಖೆ ಕೈಗೊಳ್ಳುವ ಎಲ್ಲ ಅಧಿಕಾರವಿದೆ ಎಂಬುದನ್ನು ಸ್ಪಷ್ಟಪಡಿಸಿದ್ದಾರೆ.

ದೆಹಲಿ ಸರ್ಕಾರಕ್ಕೆ ತನಿಖೆ ನಡೆಸುವ ಅಧಿಕಾರ ಇದೆಯೆ ಎಂಬುದು ಈಗ ಒಂದಷ್ಟು ಚರ್ಚೆಯಲ್ಲಿರುವ ವಿಚಾರ. ಆದರೆ ಈ ಹಿಂದೆಯೇ ಸಿಎನ್‌ಜಿ ಹಗರಣದ ಬಗ್ಗೆ ದೆಹಲಿ ಸರ್ಕಾರ ರಚಿಸಿರುವ ಆಯೋಗದ ತನಿಖೆಗೆ ತಡೆಯಾಜ್ಞೆ ನೀಡಲು ದೆಹಲಿ ಹೈಕೋರ್ಟ್ ಸೆಪ್ಟೆಂಬರ್ 23ರಂದು ಹೊರಡಿಸಿರುವ ತನ್ನ ಆದೇಶದಲ್ಲಿ ಸ್ಪಷ್ಟವಾಗಿ ನಿರಾಕರಿಸಿದೆ. ಹೀಗೆ ಇದು ದೆಹಲಿ ಸರ್ಕಾರದ ವ್ಯಾಪ್ತಿಯ ವಿಚಾರ ಎಂಬುದು ಸ್ಪಷ್ಟ. ಮುಂದಿನ ದಿನಗಳಲ್ಲಿ ಜೇಟ್ಲಿ ವಿಚಾರಣೆಗೆ ಒಳಗಾಗುವುದು ಬಹುತೇಕ ಖಚಿತ.

ನಾಟಕೀಯವೆಂಬಂತೆ ಜಾರಿ ನಿರ್ದೇಶನಾಲಯ(ಇ.ಡಿ) ದಿಢೀರನೆ ಎದ್ದು, ಓಡಾಟ ಶುರುವಿಟ್ಟುಕೊಂಡಿದೆ. ಇದು ಹಣಕಾಸು ಸಚಿವಾಲಯದಡಿ ಕಾರ್ಯ ನಿರ್ವಹಿಸುತ್ತಿರುವ ಅತ್ಯಂತ ಶಕ್ತಿಶಾಲಿ ಸಂಸ್ಥೆ. ಇಂಥಾ ಇ.ಡಿ. ಯಿಂದ ಆಯ್ದ ವ್ಯಕ್ತಿಗಳು ಮತ್ತು ಕಂಪನಿಗಳ ಮೇಲೆ ದಾಳಿಗಳು ವ್ಯವಸ್ಥಿತವಾಗಿ ಆರಂಭವಾಗಿವೆ. ಇಲ್ಲಿ ಬಹಳ ಸರಳವಾದ ಪ್ರಶ್ನೆಯೆಂದರೆ ಕಳೆದ 18 ತಿಂಗಳ ಕಾಲ ಈ ಇ.ಡಿ ಯಾಕೆ ಸುದೀರ್ಘ ನಿದ್ರೆಯಲ್ಲಿತ್ತು ಎಂಬುದು.


ಇತ್ತ ಮಾಧ್ಯಮಗಳಲ್ಲಿ ಬಿಂಬಿತವಾಗಿರುವಂತೆ ಈ ಪ್ರಕರಣ ಜೇಟ್ಲಿ - ಕೇಜ್ರಿವಾಲ್ ನಡುವಿನ ಜಟಾಪಟಿ ಎಂದುಕೊಂಡರೂ, ಕೇಜ್ರಿವಾಲ್ ಈಗಾಗಲೇ ಮೊದಲ ಸುತ್ತಿನ ಗೆಲುವು ದಾಖಲಿಸಿಯಾಗಿದೆ. ಮುಂದಿನ ಸುತ್ತುಗಳು ಹೇಗೆ ಪರ್ಯಾವಸಾನಗೊಳ್ಳಲಿವೆ ಎಂಬುದನ್ನು ಈಗಲೇ ಹೇಳುವುದು ಕಷ್ಟ ಸಾಧ್ಯ. ಆದರೆ ಮೋದಿ ಸರ್ಕಾರಕ್ಕೆ ಪೀಕಲಾಟ ತಂದಿರುವುದು ಮಾತ್ರವಲ್ಲದೆ, ನಿರ್ದಿಷ್ಟವಾಗಿ ಜೇಟ್ಲಿಗೆ ಇದು ಉರುಳಾಗಿ ಸಂಭವಿಸುವ ಅಪಾಯವನ್ನು ತಳ್ಳಿಹಾಕುವಂತಿಲ್ಲ.


• ದೊಡ್ಡಿಪಾಳ್ಯ ನರಸಿಂಹಮೂರ್ತಿ


ಕರಾವಳಿ ಪರಿಷತ್ ಫಲಿತಾಂಶ

ನಿಟ್ಟುಸಿರುಬಿಟ್ಟ ಕಾಂಗ್ರೆಸ್‌ನ ಕಂಗೆಟ್ಟ ಕಿಂಗ್‌ಗಳು!!

ಕುತೂಹಲದ ಕಣವಾಗಿದ್ದ ಕರಾವಳಿಯ ಪರಿಷತ್ ಫೈಟಿಂಗ್ ಫಲಿತಾಂಶದ ಬಗ್ಗೆ 'ಪತ್ರಿಕೆ' ಬರೆದ ಸಮೀಕ್ಷೆ ಕರಾರುವಾಕ್ಕಾಗಿ ಖರೆಯಾಗಿದೆ! ದಕ್ಷಿಣ ಕನ್ನಡ-ಉಡುಪಿ ಮತ್ತು ಉತ್ತರ ಕನ್ನಡ ಕ್ಷೇತ್ರದಲ್ಲಿ ಬಂಡಾಯದ ಬೊಬ್ಬೆಯ ನಡುವೆಯೂ ಕಾಂಗ್ರೆಸ್ ದಡ ಸೇರಿದೆ; ಬಿಜೆಪಿ ಒಂದು ಸ್ಥಾನವನ್ನು ಒದ್ದಾಡಿ ಉಳಿಸಿಕೊಂಡಿದೆ. ಅಲ್ಲಿಗೆ ಕರಾವಳಿ ಕಾಂಗ್ರೆಸ್‌ನ ಕಂಗಾಲಾಗಿದ್ದ ಕಪ್ತಾನ್‌ಗಳು ಮೂಗುಳಿಸಿಕೊಂಡ ನೆಮ್ಮದಿಯಲ್ಲಿ ನಿಟ್ಟುಸಿರು ಬಿಟ್ಟಿದ್ದಾರೆ, ಪಾಪ!! ಉತ್ತರ ಕರಾವಳಿಯಲ್ಲಿ ಕಾಂಗ್ರೆಸ್‌ನ ಅಧಿಕೃತ ಅಭ್ಯರ್ಥಿಯನ್ನು ಗೆಲ್ಲಿಸಿಕೊಳ್ಳುವುದು ಡಾನ್ ದೇಶಪಾಂಡೇಜಿಗೆ ಎಷ್ಟು ದೊಡ್ಡ ಪ್ರತಿಷ್ಠೆಯ ಸವಾಲಾಗಿತ್ತೋ ಅದಕ್ಕಿಂತಲೂ ದೊಡ್ಡ ರಿಸ್ಕ್


ಆಸ್ಕರ್ ಫರ್ನಾಂಡಿಸ್


ಪ್ರತಾಪ್‌ಚಂದ್ರ ಶೆಟ್ಟಿ


ಎಸ್.ಎಲ್. ಘೋಟನೇಕರ್

ದಕ್ಷಿಣ ಕರಾವಳಿಯಲ್ಲಿ ಎಐಸಿಸಿ ಅಧಿನಾಯಕರ ಆಪ್ತ ಬಂಟ ಆಸ್ಕರ್ ಫರ್ನಾಂಡಿಸ್‌ಗೆ ಕಾಡತೊಡಗಿತ್ತು!!


ದ್ವಿಸದಸ್ಯ ಕ್ಷೇತ್ರವಾದ ದ.ಕ-ಉಡುಪಿಯಲ್ಲಿ ಬಿಜೆಪಿ ತನ್ನದೊಂದು ಸೀಟು ಉಳಿಸಿಕೊಳ್ಳುತ್ತದೆಂದು ಎಲ್ಲರಿಗೂ ಗೊತ್ತಿತ್ತು. ಆದರೆ ಆ ಪಕ್ಷದ ಅಭ್ಯರ್ಥಿ ಕೋಟ ಶ್ರೀನಿವಾಸ ಪೂಜಾರಿಯ ಮತಗಳಿಕೆಯಲ್ಲಿ ಸಂಘ ಪರಿವಾರದ 'ಬದ್ಧತೆ'ಯ ಕೋಟಾದಲ್ಲೇ ಖೋತಾ ಆಗುವ ಕುತೂಹಲ ಕೆರಳಿತ್ತು. ಇದಕ್ಕೆ ಕಾರಣ-ಬಂಡಾಯ ಕಾಂಗ್ರೆಸ್ ಕ್ಯಾಂಡಿಡೇಟ್ ಜಯಪ್ರಕಾಶ್ ಹೆಗ್ಡೆಯ ಚರಿಷ್ಮಾ. ಬಿಜೆಪಿ ಮತದಾರರಲ್ಲಿಯ ಬಂಟರು ಸ್ವಜಾತಿ ಜೆಪಿಗೆ ಬೆಂಬಲಿಸುತ್ತಾರೆಂಬ ಅನುಮಾನವಿತ್ತು. ಜಿಲ್ಲಾ ಬಿಜೆಪಿ ಅಧ್ಯಕ್ಷ ತಿಂಗಳೆ ವಿಕ್ರಮಾರ್ಜುನ ಹೆಗ್ಡೆಯಂಥ ಬಂಟರೇ ಜೆಪಿ ಪರ ಒಳತಂತ್ರಗಾರಿಕೆ ನಡೆಸಿದ್ದರು.


ಈಗ ಬಂದಿರುವ ಫಲಿತಾಂಶ ಇದನ್ನು ಖಾತ್ರಿಪಡಿಸಿದೆ! ಬಿಜೆಪಿ 3600 ರಷ್ಟು ಮತದಾರರ ಬೆಂಬಲ ಪಡೆದಿತ್ತು. ಆದರೆ ಕೋಟ ಪೂಜಾರಿ ಪಡೆದಿರುವುದು ಅದಕ್ಕಿಂತಲೂ 533ರಷ್ಟು ಕಡಿಮೆ ಮತ. ಇದು ಗೊತ್ತಾಗಿಯೇ ಇರಬೇಕು; ಬಿಜೆಪಿಗರು ಈ ಬಾರಿ ಹಣದ ಹೊಳೆ ಹರಿಸಿದ್ದರು. ಚೆಡ್ಡಿಗಳ ಭದ್ರ ಕೆಂಪುಕೋಟೆ ಎಂಬ ಪ್ರತೀತೀಯ ದಕ್ಷಿಣ ಕನ್ನಡ- ಉಡುಪಿ ಏರಿಯಾದಲ್ಲೇ ಬಿಜೆಪಿಗೆ ಈ ದುರ್ಗತಿ ಬಂದಿದ್ದು ಕೇಸರಿ ಬದ್ಧತೆ ಹಣದೆದುರು ಕರಗಿರುವುದಕ್ಕೆ ನಿದರ್ಶನದಂತಿದೆ! ಬಿಜೆಪಿ 2977 ಮತ ಪಡೆವಷ್ಟರಲ್ಲೇ ಸುಸ್ತು ಹೊಡೆದುಹೋಗಿದೆ.


ಬಂಡುಗಾರ ಜೆಪಿಯ ಸಮರ ಕಲಾತಂತ್ರಗಾರಿಕೆ ಗೊತ್ತಿದ್ದ ಚೆಡ್ಡಿಗಳು ಆತ ಪ್ರಬಲವಾದಂತೆ ತಮ್ಮ ಹುರಿಯಾಳು ಸೋಲಿನ ದವಡೆಗೆ ಜಾರುತ್ತಾನೆಂಬ ಲೆಕ್ಕಾಚಾರ ತೆಗೆದಿದ್ದರು. ಕಲ್ಲಡ್ಕ ಹೈಕಮಾಂಡ್ ಮಾನ ಉಳಿಸಿಕೊಳ್ಳಲು ಕಾಸು ಹರಿಸುವ ಆದೇಶ ಹೊರಡಿಸಿತ್ತು. ಮೊಟ್ಟಮೊದಲ ಬಾರಿ ಬಿಜೆಪಿ ಹಿಂದೂತ್ವ ಬಿಟ್ಟು ಹಣತ್ವ ಪ್ರದರ್ಶಿಸಬೇಕಾಗಿ ಬಂದಿರುವುದು ಈ ಪರಿಷತ್ ಫೈಟಿಂಗ್‌ನ ಹೈಲೈಟ್! ತಮ್ಮ ಹ್ಯಾಪ್ ಕ್ಯಾಂಡಿಡೇಟ್‌ಗಿಂತಲೂ ಮತ್ತೊಬ್ಬ ಬಂಡಾಯ ಕಾಂಗ್ರೆಸ್‌ಗ ಹರಿಕೃಷ್ಣ ಬಂಟ್ವಾಳ ಆಕರ್ಷಕವಾಗಿ ಬಿಲ್ಲವರಿಗೆ ಕಾಣುವ ಆತಂಕವೂ ಚೆಡ್ಡಿ ದೊರೆ ಕಲ್ಲಡ್ಕ ಭಟ್ಟನಿಗೆ ಬಾಧಿಸತೊಡಗಿತ್ತು. ಆದರೆ ಬಿಜೆಪಿಯೊಳಗಿನ ಬಿಲ್ಲವರು ಬಂಟರಂತೆ ಕ್ರಾಸಿಂಗ್ ಮಾಡಲಿಲ್ಲ, ಸರ್ಕಸ್ ಮಾಡಿದರೆ ಎರಡೂ ಬಿಲ್ಲವ ಅಭ್ಯರ್ಥಿಗಳು ಸೋತು ಎದುರಾಳಿ ಸಮುದಾಯದ ಇಬ್ಬರು ಬಂಟರು ಗೆಲ್ಲುತ್ತಾರೆಂದು ಬಿಲ್ಲವರು ಯೋಚಿಸಿ ಕೋಟ ಪೂಜಾರಿಯನ್ನು ಕಾಪಾಡಿಕೊಂಡರು. ಇದು ಚೆಡ್ಡಿ ರಿಂಗ್ ಮಾಸ್ಟರ್ ಕಲ್ಲಡ್ಕ ಗ್ಯಾಂಗನ್ನು ಮುಖಭಂಗದಿಂದ ಬಚಾಯಿಸಿದೆ.

ಜೆಪಿ ಪಡೆದಿರುವ 872 ಮತದಲ್ಲಿ ಹೆಚ್ಚಿನವು ಕಾಂಗ್ರೆಸ್ ಮತ್ತು ಬಿಜೆಪಿಯಲ್ಲಿನ ಬಂಟರವು; ಹಾಗೆಯೇ ಬಂಟ್ವಾಳ, ಪುತ್ತೂರು, ಬೆಳ್ತಂಗಡಿ ಭಾಗದ ಬಿಲ್ಲವರಲ್ಲಿ ಕೆಲವರು ಹರಿಕೃಷ್ಣ ಬಂಟ್ವಾಳ್‌ಗೆ ಮತ ಹಾಕಿದ್ದಾರೆ. ಆದರೂ ಆತ 127ರ ಗಡಿ ದಾಟಲು ಸಾಧ್ಯವಾಗಲಿಲ್ಲ. ಒಂದು ಅಚ್ಚರಿಯ ಸಂಗತಿಯೆಂದರೆ ಕಾಂಗ್ರೆಸ್‌ನ ನಾಲಾಯಕ್ ಅಭ್ಯರ್ಥಿ ಪ್ರತಾಪ್‌ಚಂದ್ರ ಶೆಟ್ಟಿ 2237 ಮತ ಪಡೆದು ಮೊದಲ ಪ್ರಾಶಸ್ತ್ಯದಲ್ಲೇ ಗೆದ್ದಿದ್ದಾರೆ. ಇದಕ್ಕೆ ಆಸ್ಕರ್ ಫರ್ನಾಂಡಿಸ್ ಅಷ್ಟು ಕಾಂಗ್ರೆಸ್ ಮಂತ್ರಿ-ಶಾಸಕರನ್ನು ಟೈಟ್ ಫೀಲ್ಡಿಂಗ್‌ಗೆ ಇಳಿಸಿದ್ದೇ ಕಾರಣ. ಪ್ರತಾಪ್ ಸೋತರೆ ಹೈಕಮಾಂಡ್ ತನಗೆ ಕೊಟ್ಟಿರುವ ಖಡ್ಗದಿಂದ ನಿಮ್ಮನ್ನು ಕತ್ತರಿಸಿ ಅಡ್ಡಡ್ಡ ಮಲಗಿಸುತ್ತೇನೆಂದು ಆಸ್ಕರಣ್ಣ ಹಾಕಿದ್ದ ಪಿಸುಮಾತಿನ ಬೆದರಿಕೆ ವರ್ಕ್‌ಔಟ್ ಆಗಿ ವೇಸ್ಟ್ ಬಾಡಿ ಪ್ರತಾಪ್‌ಗೆ ಮತ್ತಾರು ವರ್ಷದ ಪರಿಷತ್ ಭಾಗ್ಯ ಖುಲಾಯಿಸಿದೆ.

ಬಹುಶಃ ಆಸ್ಕರ್ ಇಷ್ಟು ಇಕ್ಕಟ್ಟಿಗೆ ಆತನ ರಾಜಕೀಯ ಜೀವಮಾನದಲ್ಲಿ ಹಿಂದೆಂದೂ ಸಿಲುಕಿರಲಿಕ್ಕಿಲ್ಲ. ನೇರಾನೇರ ಆಸ್ಕರ್‌ರನ್ನೇ ಬೈದು-ಮೂದಲಿಸಿ ಅಖಾಡಕ್ಕೆ ಜೆಪಿ ಮತ್ತು ಹರಿ ಧುಮುಕಿದ್ದರು. ಟಿಕೆಟ್ ಬೇಡವೆಂದಿದ್ದ ಪ್ರತಾಪ್‌ರನ್ನು ಆಸ್ಕರ್ ಅಶ್ವಮೇಧದ ಕುದುರೆ ಆಗಿಸಿದ್ದು ತನ್ನ ದೊರೆತನದ ಸಂರಕ್ಷಣೆಗಾಗಿತ್ತು. ಹಾಗಾಗಿ ಕೆರಳಿದ ಆಸ್ಕರ್ ಬಂಡುಗಾರ ಜೆಪಿಯನ್ನು ಪಾರ್ಟಿಯಿಂದ ಉಚ್ಚಾಟಿಸಿದರು. ಹಾಗೆ ಜೆಪಿಯನ್ನು ಹೊರಹಾಕಿದ ಮೇಲಂತೂ ಪ್ರತಾಪ್‌ರನ್ನು ಗೆಲ್ಲಿಸಿಕೊಳ್ಳಲೇಬೇಕಾದ ಸಂದಿಗ್ಧಕ್ಕೆ ಆತ ಬಿದ್ದಿದ್ದರು. ಹಾಗಾಗಿ ತನ್ನೆಲ್ಲಾ ಹೈಕಮಾಂಡ್-ಲೋಕಮಾಂಡ್-ಶಕ್ತಿ ಬಳಸಿ ಹಣದ ಹೊಳೆ ಹರಿಸಿ ದಿಗ್ವಿಜಯ ಸಾಧಿಸಿದ್ದಾರೆ. ಅವಿಭಜಿತ ದಕ್ಷಿಣ ಕನ್ನಡ ಕಾಂಗ್ರೆಸ್ ಮಂತ್ರಿ ಮತ್ತು ಶಾಸಕರಿಗೂ ತಂತಮ್ಮ ಅಸ್ತಿತ್ವದ ದೃಷ್ಟಿಯಿಂದ ಆಕ್ರಮಣಕಾರಿ ಜೆಪಿ ಗೆಲ್ಲುವುದು ಬೇಡವಾಗಿತ್ತು.







ಇದೆಲ್ಲದರ ಪರಿಣಾಮವಾಗಿ ಕಾಂಗ್ರೆಸ್‌ನ ಪ್ರತಾಪ್ ಗೆದ್ದಿದ್ದಾರೆ. ಇನ್ನಾದರೂ ಪ್ರತಾಪ್ ಹೊಣೆಗಾರಿಕೆ ಕಲಿಯಬೇಕು. ಕಂತ್ರಿ ರಾಜಕಾರಣ ಬಿಟ್ಟು ಜನಹಿತದ ರಾಜಕಾರಣ ಮಾಡಬೇಕಿದೆ. ಬರೋಬ್ಬರಿ ಹನ್ನೆರಡು ವರ್ಷ ಎಮ್ಮೆಲ್ಸಿಯಾಗಿ ಮಾಡಿದ ಪಾಪಕ್ಕೆ ಮುಂಬರುವ ಆರು ವರ್ಷದಲ್ಲಿ ಆತ ಪ್ರಾಯಶ್ಚಿತ್ತದ ರೀತಿಯಲ್ಲಿ ಕರ್ತವ್ಯ ನಿಯತ್ತಿನಿಂದ ನಿಭಾಯಿಸಬೇಕಾಗಿದೆ. ಹಾಗೆಯೇ ಕೋಟ ಶ್ರೀನಿವಾಸ್ ಪೂಜಾರಿ ಎಂಬ ಕಲ್ಲಡ್ಕ ಹೈಕಮಾಂಡ್ ಗುಲಾಮನೂ ಕೀಳರಿಮೆ ಬಿಟ್ಟು ಹಿಂದುಳಿದ ಬಿಲ್ಲವರ ಧ್ವನಿಯಾಗಲು ಪ್ರಯತ್ನಿಸಬೇಕಿದೆ!!

* * * *


ಉತ್ತರ ಕನ್ನಡದ ವಿಧಾನ ಪರಿಷತ್ ಚುನಾವಣಾ 'ಹಣಾ'ಹಣಿಯಲ್ಲಿ ಕಾಂಗ್ರೆಸ್‌ನ ಕೆಲಸಕ್ಕೆ ಬಾರದ ಶ್ರೀಕಾಂತ್ ಘೋಟನೇಕರ್ ಗೆಲ್ಲುತ್ತಾನೆಂದು ಎಲ್ಲರೂ ಗಣಿತ ಹಾಕಿದ್ದರು. ಗೆಲ್ಲುವುದು ಘೋಟನೇಕರ್‌ನಿಗಿಂತ ಹೆಚ್ಚಾಗಿ ಆತನ ಬಾಸ್ ಮಂತ್ರಿ, ಆರ್.ವಿ. ದೇಶಪಾಂಡೆಗೆ ಮರ್ಯಾದೆಯ ಪ್ರಶ್ನೆಯಾಗಿತ್ತು. ಘೋಟನೇಕರ್ ಕಳೆದ ಆರು ವರ್ಷ ಎಮ್ಮೆಲ್ಸಿಗಿರಿ ವ್ಯರ್ಥವಾಗಿ ಕಳೆದ ನಾಲಾಯಕ್ ಎಂಬ ಕಾರಣಕ್ಕೆ ಇಡೀ ಜಿಲ್ಲಾ ಕಾಂಗ್ರೆಸ್ ಆತನ ವಿರುದ್ಧ ತಿರುಗಿಬಿದ್ದಿತ್ತು. ದೇಶಪಾಂಡೆಗೂ ಎರಡನೇ ಚಾನ್ಸ್ ಆತನಿಗೆ ಕೊಡುವ ಮನಸ್ಸಿರಲಿಲ್ಲ. ಜನತಾದಳದಲ್ಲಿ ಡಾನ್ ಆಗಿದ್ದ ಕಾಲದಿಂದಲೂ ದೇಶಪಾಂಡೆ ಎರಡನೇ ಅವಕಾಶ ಒಮ್ಮೆ ಎಮ್ಮೆಲ್ಸಿ ಆದವರಿಗೆ ಕೊಟ್ಟಿದ್ದೇ ಇಲ್ಲ. ಆದರೆ ಈ ಬಾರಿ ಆತ ನರಮ್ ಆಗಿದ್ದರು. ಸ್ವಕ್ಷೇತ್ರ ಹಳಿಯಾಳದಲ್ಲಿರುವ ಬಹುಸಂಖ್ಯಾತ ಮರಾಠರ ಮತ ತೋರಿಸಿ ಘೋಟನೇಕರ್ ಗುರುವಿಗೆ ತಿರುಮಂತ್ರ ಹಾಕಿದ್ದರು. ಬ್ಲಾಕ್‌ಮೇಲ್ ಮಾಡಿಯೇ ಟಿಕೆಟ್ ದೇಶಪಾಂಡೆ ಕೊಡಿಸುವಂತೆ ಮಾಡಿದ್ದರು.

ದೇಶಪಾಂಡೆಯನ್ನು ಕಂಡರೆ ಜಿಲ್ಲೆಯ ಯಾವ ಕಾಂಗ್ರೆಸ್ ಶಾಸಕನಿಗೂ ಆಗದು. ಸ್ವತಃ ಘೋಟನೇಕರ್‌ಗೂ ದೇಶಪಾಂಡೆ ಬಗ್ಗೆ ಸಮಾಧಾನವಿಲ್ಲ. ಎಲ್ಲ ಶಾಸಕರು ಸೇರಿ ಕಳೆದ ಲೋಕಸಭೆ ಎಲೆಕ್ಷನ್‌ನಲ್ಲಿ ದೇಶಪಾಂಡೆ ಮಗ ಪ್ರಶಾಂತ್ ದೇಶಪಾಂಡೆಗೆ ಹೀನಾಯಸೋಲು ಉಣಿಸಿದ್ದರು. ಈ ನೋವಿಂದ ಇನ್ನೂ ಚೇತರಿಸಿಕೊಳ್ಳದ ಮುದಿ ಹುಲಿ ದೇಶಪಾಂಡೆ ಹತಾಶರಾಗಿ ಹೋಗಿದ್ದಾರೆ. ವೈರಿ ಶಾಸಕರ ಮೇಲೆ ಜಿಲ್ಲಾಧಿಕಾರಿ, ಎಸ್ಪಿ, ಮತ್ತಿತರ ಜಿಲ್ಲಾಡಳಿತದ ಅಧಿಕಾರಿಗಳ ಛೂಬಿಟ್ಟು ಸೇಡು ತೀರಿಸಿಕೊಳ್ಳುತ್ತಿದ್ದಾರೆ. ಇಂಥ ಇಕ್ಕಟ್ಟಿನ ಸಮಯದಲ್ಲಿ ಘೋಟನೇಕರ್ ಬೆದರಿಸಿ ಟಿಕೆಟ್ ಪಡೆಯಲು ಸಫಲರಾಗಿದ್ದರು.

ಹಳಿಯಾಳದಲ್ಲಿ ಅಸ್ತಿತ್ವ ಉಳಿಸಿಕೊಳ್ಳಲು ಘೋಟನೇಕರ್‌ಗೆ ಮತ್ತೆ ಛಾನ್ಸ್ ಕೊಡಿಸಬೇಕಾಗಿ ಬಂದ ದೇಶಪಾಂಡೆಗೆ ಜಿಲ್ಲೆಯ ಸ್ವ-ಪಕ್ಷದ ಶಾಸಕರೇ ಮಗ್ಗಲು ಮುಳ್ಳಾಗಿದ್ದರು. ಬಹುಸಂಖ್ಯಾತ ದೀವರು (ಈಡಿಗರು) ದೇಶಪಾಂಡೆ ವಿರುದ್ಧ ತಿರುಗಿಬಿದ್ದಿದ್ದರು. ಅರಣ್ಯ ಅತಿಕ್ರಮಣದಾರರ ಲೀಡರ್ ರವೀಂದ್ರನಾಯ್ಕ ಬಂಡಾಯ ಸಾರಿ ಅಖಾಡಕ್ಕೆ ಇಳಿದಿದ್ದರು. ಇದು ದೇಶಪಾಂಡೆಯನ್ನು ದಿಕ್ಕೆಡಿಸಿ ಬಿಟ್ಟಿತ್ತು. ಎಲ್ಲಿ ಶಾಸಕರೇ ಹಿಂದೆ ಲೋಕಸಭಾ ಎಲೆಕ್ಷನ್‌ನಲ್ಲಿ ಮಾಡಿದಂತೆ ಮೋಸ ಮಾಡುತ್ತಾರೋ ಎಂಬ ಭಯ ಬಾಧಿಸತೊಡಗಿತ್ತು. ಘೋಟನೇಕರ್ ಸೋತರೆ ಬೆಂಗಳೂರು-ದಿಲ್ಲಿಯ ಕಾಂಗ್ರೆಸ್ ಹೈಕಮಾಂಡ್‌ನಲ್ಲಿ ಬೆಳೆಸಿಕೊಂಡಿದ್ದ ಪ್ರತಿಷ್ಠೆ ಮಣ್ಣು ಪಾಲಾಗುತ್ತದೆಂಬ ನಡುಕ ಹತ್ತಿತ್ತು.

ಈ ಬಾರಿ ದೇಶಪಾಂಡೆ ಕೆರಳಿದ ಹುಲಿಯಾಗಿದ್ದರು. ಘೋಟನೇಕರ್‌ನ ಗೆಲ್ಲಿಸಿಕೊಳ್ಳಲೇಬೇಕಾದ ಅನಿವಾರ್ಯತೆಗೆ ಸಿಲುಕಿದ್ದರು. ಹಾಗಾಗಿ ಕಾಂಗ್ರೆಸ್‌ನ ನಾಲ್ಕು ಶಾಸಕರ ಪೈಕಿ ಒಬ್ಬೊಬ್ಬರನ್ನಾಗಿ ಕರೆದು ಧಮಕಿ ಹಾಕಿದರು. ಕಾಂಗ್ರೆಸ್ ಕ್ಯಾಂಡಿಡೇಟ್ ಸೋತರೆ ಹೈಕಮಾಂಡ್ ಮಟ್ಟದಲ್ಲಿ ತನಗಿರುವ ಶಕ್ತಿ ಬಳಸಿ ಸಂಹರಿಸುವ ಬೆದರಿಕೆ ಹಾಕಿದರು. ದೇಶಪಾಂಡೆಯ ರೌದ್ರಾವತಾರ ಕಂಡ ಎಮ್ಮೆಲ್ಲೆಗಳು ಕಕ್ಕಾಬಿಕ್ಕಿಯಾದರು. ಬಂಡಾಯಗಾರ ರವೀಂದ್ರ ನಾಯ್ಕನಿಗೆ ತಣ್ಣಗೆ ಕೈಕೊಟ್ಟು ಘೋಟನೇಕರ್ ಪರ ನಿಷ್ಠೆಯಿಂದ ಪ್ರಚಾರ ಶುರು ಹಚ್ಚಿಕೊಂಡರು. ದೇಶಪಾಂಡೆ ಈ ನಾಲ್ವರು ಶಾಸಕರ ಮೇಲೆ ನಿಗಾ ಇಡಲು ಎಲೆಕ್ಷನ್ ಮುಗಿವವರೆಗೆ ಜಿಲ್ಲೆಯಲ್ಲೇ ತಂಬು ಹಾಕಿ ಉಳಿದುಬಿಟ್ಟರು.

ಬರೋಬ್ಬರಿ ಕಾಲು ಶತಮಾನ ತರಹೇವಾರಿ ಹೋರಾಟ ಮಾಡಿ ಜಿಲ್ಲೆಯಲ್ಲಿ ಗುರುತಿಸಿಕೊಂಡಿದ್ದೇ ವಿಧಾನ ಪರಿಷತ್ ಆಸೆಯಿಂದ ಎಂಬಂತೆ ಆರ್ಭಟಿಸುತ್ತಲೇ ಯುದ್ಧಾಂಗಣ ಪ್ರವೇಶಿಸಿದ್ದ ರವೀಂದ್ರ ನಾಯ್ಕ ನಂಬಿದ ಕಾಂಗ್ರೆಸ್ ಶಾಸಕರೇ


ದೇಶಪಾಂಡೆ

ದೂರಾದಂತೆ ದಿಗಿಲುಬಿದ್ದು ಹೋದರು. ದೇಶಪಾಂಡೆ ಕೈಗಾರಿಕಾ ಮಂತ್ರಿ ಬಲ ಬಳಸಿ ಕೈಗಾರಿಕೋದ್ಯಮಿಗಳಿಂದ ಸಂಗ್ರಹಿಸಿ ತಂದಿದ್ದ ಐದು ಕೋಟಿ ಜಿಲ್ಲೆಯ ಉದ್ದಗಲಕ್ಕೆ ಹರಿದಾಡುವ ಸದ್ದು ಕೇಳಿದ್ದೇ ತಡ ರವಿಗೆ ತಾನು ರಾಜಕೀಯ ಆತ್ಮಹತ್ಯೆ ಮಾಡಿಕೊಂಡ ಕನಸು ಬೀಳತೊಡಗಿತು. 'ಪತ್ರಿಕೆ' ಬರೆದಂತೆ ಈತ 200 ರ ಗಡಿ ದಾಟಿಲ್ಲ.


ಆತನಿಗೆ ಬಿದ್ದಿರುವ 199 ಮತಗಳಲ್ಲಿ ಹೆಚ್ಚಿನವು ಸ್ವಜಾತಿ ದೀವರವು. ಹಾಗಿದ್ದರೆ ಅರಣ್ಯ ಅತಿಕ್ರಮಣದಾರರೂ ರವಿಯ ಕೈಬಿಟ್ಟರಾ? ನಕಲಿ ಹೋರಾಟ ಮತ್ತು ಮತಾಧಾರಿತ ರಾಜಕೀಯದ ನಡುವಿನ ತೆಳ್ಳಗಿನ ಗೆರೆ ನಾಲ್ಕೈದು ಡಿಗ್ರಿ ಮಾಡಿರುವ ರವಿಗೆ ಗೋಚರಿಸದಿದ್ದದ್ದು ವಿಚಿತ್ರ. ಬೂಟಾಟಿಕೆಯ ಹೋರಾಟಕ್ಕೆ ರವಿ ಬೆಲೆ ತೆತ್ತಿದ್ದಾರೆ. ಸ್ಥಳೀಯ ಸಂಸ್ಥೆಗಳಲ್ಲಿರುವ ಪಕ್ಷಗಳ ಬಲಾಬಲದ ಕೋಷ್ಟಕ ನೋಡಿದರೆ ಕಾಂಗ್ರೆಸ್ ತನ್ನ ಕೋಟಾದಲ್ಲಿರುವುದಕ್ಕಿಂತ ಹೆಚ್ಚು ಓಟು ಖರೀದಿಸಿದೆ ಎಂಬುದು ಪಕ್ಕಾ ಆಗುತ್ತದೆ. ಬಿಜೆಪಿ ಅಭ್ಯರ್ಥಿ ಪಾಪದ ಮೀನುಗಾರ ಗಣಪತಿ ಉಳ್ವೇಕರ್‌ಗೆ ಆ ಪಕ್ಷದ ಮೇಲುವರ್ಗದವರೇ ಮೋಸ ಮಾಡಿದ್ದಾರೆ. ಬಿಜೆಪಿ ಅಭ್ಯರ್ಥಿ ಪಕ್ಷದ ಮತದಾರರಿಗಿಂತ ಕಡಿಮೆ ಮತ (1005) ಪಡೆದಿದ್ದಾರೆ. ಬಿಜೆಪಿ ದೊರೆ ಕಾಗೇರಿ ಮಾತುಕೇಳಿ ಆಸ್ತಿ ಮಾರಿ ಎಲೆಕ್ಷನ್‌ಗೆ ನಿಂತಿದ್ದ ಉಳ್ವೇಕರ್ ಈಗ ಚೆಡ್ಡಿ ಪಕ್ಷದ ಗರ್ಭಗುಡಿ ಸಂಸ್ಕೃತಿಗೆ ಬಲಿಯಾದಂತೆ ವಿಲವಿಲ ಒದ್ದಾಡುತ್ತಿದ್ದಾರೆ.

ಕಳೆದ ಬಾರಿ ತಮ್ಮನನ್ನು ಚುನಾವಣೆ ನಿಲ್ಲಿಸಿ ನೀರಿನಂತೆ ಹಣ ವ್ಯಯಿಸಿದ್ದ ಬೆಂಗಳೂರು ನಿವಾಸಿ-ಅನಿವಾಸಿ ಯಲ್ಲಾಪುರ ರವಿಕುಮಾರ್ ಎಂಬ ಕಳ್ಳ ಉದ್ಯಮಿ ಈ ಬಾರಿ ಅದ್ಯಾಕೋ ಗಂಟು ಬಿಚ್ಚಲೇ ಇಲ್ಲ. ಮಲೆಯಾಳಿ ಬಿಲ್ಲವ ತಾನೆಂದು ಸ್ಥಳೀಯ ದೀವರು ಗುರುತಿಸಿರುವುದರಿಂದ ಮತ ಸಿಗಲಾರದೆಂಬುದು ಖಾತ್ರಿಯಾಗುತ್ತಿದ್ದಂತೆಯೇ ಈತ ನಾಟ್‌ರಿಚೇಬಲ್ ಆಗಿಹೋದ. ಆದರೂ ಕುಮ್ಮಿಯನ್ನು ಕರೆಸಿ ಕುಮಟೆಯ ರೆಸಾರ್ಟ್‌ನಲ್ಲಿ ಹೆಂಡೋತ್ಸವ ಮಾಡಿ ಎರಡೂ ಕಾಲು ಲಕ್ಷ ಬಿಲ್ ತೆರಬೇಕಾಗಿ ಬಂತು. ಈಗಾತನಿಗೆ ಬರೀ 22 ಮತ ಬಿದ್ದಿದೆ.

ಒಂದಂತೂ ಖರೆ. ದೇಶಪಾಂಡೆಯ ಹೆಡ್‌ಮಾಸ್ತರಿಕೆ ಈ ಬಾರಿ ಕೆಲಸ ಮಾಡಿದೆ. ಎಲ್ಲ ಶಾಸಕರೂ ಘೋಟನೇಕರ್‌ನ ದಡ ಸೇರಿಸಲು ಬೆವರಿಳಿಸಿದ್ದಾರೆ. ಇದು ದೇಶಪಾಂಡೆಯನ್ನು ಮುಖಭಂಗದಿಂದ ಪಾರು ಮಾಡಿದೆ. ಸಂದರ್ಭದ ಪಿತೂರಿ, ದೇಶಪಾಂಡೆಯ ಪ್ರತಿಷ್ಠೆಯ ಜಿದ್ದಾಜಿದ್ದಿಯಿಂದಾಗಿ ಗೆದ್ದಿರುವ ಘೋಟನೇಕರ್ ತನ್ನ ಯೋಗ್ಯತೆ ಅರ್ಥಮಾಡಿಕೊಳ್ಳಬೇಕಿದೆ. ಗೆಲ್ಲಿಸಿದವರ ಋಣ ತೀರಿಸಲು ಪಂಚಾಯತ್ ಮಟ್ಟದಲ್ಲಿ ಸಮಷ್ಟಿಯ ಕೆಲಸ ಮಾಡಬೇಕಾಗಿದೆ. ಸ್ವಂತ ಟ್ರಾನ್ಸ್‌ಪೋರ್ಟ್ ಉದ್ಯಮ, ಹೋಟೆಲು ಉದ್ಯಮ, ಮಗನ ಖೋಟಾ ಕಂಟ್ರಾಕ್ಟರಿಕೆ ಉದ್ಧಾರಕ್ಕೆ ಎಮ್ಮೆಲ್ಸಿ ಆಗಿದ್ದೇನೆಂಬ ಕೃತಘ್ನತೆ ಈ ಬಾರಿಯಾದರೂ ಘೋಟನೇಕರ್ ಬಿಡಬೇಕಾಗಿದೆ. ಹಳಿಯಾಳಕ್ಕೆ ಸೀಮಿತವಾಗುವ ಸಣ್ಣತನ ಮಾಡದೆ ಇಡೀ ಜಿಲ್ಲೆಯ ಎಮ್ಮೆಲ್ಸಿ ತಾನೆಂಬ ಹೊಣೆಗಾರಿಕೆ ಎಡವಟ್ಟು ಪುಢಾರಿ ಘೋಟನೇಕರ್‌ಗೆ ಅರ್ಥವಾದೀತಾ? ಹೊಲಸು ನಾಲಿಗೆಯ ಘೋಟನೇಕರ್ ಹುಚ್ಚಾಟ, ಪರ್ಸೆಂಟೇಜ್ ಹಪಾಹಪಿ ಬಿಡದಿದ್ದರೆ ಜನರೇ ಪಾಠ ಕಲಿಸುವ ಕಾಲ ಬಂದೇಬರುತ್ತದೆ.

● ನಹುಷ


ಯಶ್ ಅಪರಾತಪರಾ!




ತನ್ನ ಸಿನಿಮಾಗಳು ಹಿಟ್ ಆಗುತ್ತಿರುವುದರಿಂದ 'ರಾಕಿಂಗ್ ಸ್ಟಾರ್' ಯಶ್ ತಲೆ ತಿರುಗುತ್ತಿದೆ. ಆ ಕಾರಣಕ್ಕೆ ಆತ ಹಲವು ಯಡವಟ್ಟುಗಳನ್ನು ಮಾಡಿಕೊಳ್ಳುತ್ತಿದ್ದಾನೆ. ಅಂತಹ ಒಂದು ಎಡವಟ್ಟಿನಿಂದಾಗಿ ಮೊನ್ನೆ ಯಶ್ ಅಭಿನಯದ 'ಮಾಸ್ಟರ್‌ಪೀಸ್' ಚಿತ್ರವನ್ನು ಪ್ರದರ್ಶಿಸಬಾರದು ಎಂದು ಮಂಡ್ಯ ಮತ್ತು ಮೈಸೂರಿನ ರೈತಸಂಘದವರು ಪ್ರತಿಭಟನೆ ನಡೆಸಿದ್ದಾರೆ. ಅದು ಮುಂದುವರೆದು ಶಾಸಕ ಮತ್ತು ರೈತಸಂಘದ ನಾಯಕ ಪುಟ್ಟಣ್ಣಯ್ಯ ಹಾಗೂ ಯಶ್ ಅಭಿಮಾನಿಗಳ ನಡುವೆ ಮಾರಾಮಾರಿಗೂ ಕಾರಣವಾಯಿತು. ಕಡೆಗೆ ಅಂಬರೀಷ್‌ರ ಮಧ್ಯಸ್ಥಿಕೆಯಲ್ಲಿ 'ರಾಜಿ' ಪ್ರಹಸನ ನಡೆದು ಯಶ್ ಉಸಿರಾಡುವಂತಾಗಿದೆ! ಯಶ್‌ನ ಹಲವು ಅಪರಾತಪರಾಗಳು ಇಲ್ಲಿವೆ.

'ಮಾಸ್ಟರ್‌ಪೀಸ್'. ಇದು ಯಶ್ ಅಭಿನಯದ ...ಟೆಸ್ಟ್ ಸಿನಿಮಾ. ಯಾವುದಾದರೂ ಅದ್ಭುತ ಅಥವಾ ...ತ್ಯುತ್ತಮ ವಸ್ತುವಿಗೆ ನಾವು ಮಾಸ್ಟರ್‌ಪೀಸ್ ಅಂತೀವಿ. ...ದರೆ ನಿರ್ದೇಶಕ ಮಂಜು ಮಾಂಡವ್ಯ ತನ್ನ ಗೆಳೆಯ ...ಶ್‌ಗೆ 'ಮಾಸ್ಟರ್‌ಪೀಸ್' ಎಂದು ಹೆಸರಿಟ್ಟಿದ್ದಾರೆ!

ಅದೇನೇ ಇರಲಿ, ಮಂಡ್ಯದ ಮಿತ್ರರಾದ ಮಂಜು ...ಂಡವ್ಯ ಮತ್ತು ವಿಜಯ್ ಕಿರಗಂದೂರು ಸೇರಿಕೊಂಡು ...ಾಸ್ಟರ್‌ಪೀಸ್' ಸಿನಿಮಾ ಮಾಡಿದ್ದಾರೆ. ವಿಜಯ್ ಅವರಿಗೆ ...ದು ಎರಡನೇ ಸಿನಿಮಾ. 'ನಿನ್ನಿಂದಲೇ' ಅವರ ಮೊದಲ ...ತ್ರ. ಮಂಜು ಅವರಿಗೆ ಇದು ಚೊಚ್ಚಲ ...ರ್ದೇಶನದ ಚಿತ್ರ. ಮಂಜು ಈ ಹಿಂದೆ ...ರತ', 'ಎದ್ದೇಳು ಮಂಜುನಾಥ', ...ಜಾಹುಲಿ' ಮುಂತಾದ ಸಿನಿಮಾಗಳಿಗೆ ...ಭಾಷಣೆ ಬರೆದು ಖ್ಯಾತಿ ಪಡೆದಿರುವವರು. ...ವರ ಸಂಭಾಷಣಾ ಶೈಲಿಯನ್ನು ...ಗಮನಿಸಿದವರಿಗೆ ಅವರೆಂಥಾ 'ಮಾಸ್ಟರ್ ...ಪೀಸ್' ಎಂಬುದು ಗೊತ್ತಾಗುತ್ತದೆ. ನಿಜಕ್ಕೂ ...ದ್ಭುತವಾದ ಸಂಭಾಷಣೆಗಾರ ಮಂಜು ...ಮಾಂಡವ್ಯ! ಈಗ ಈ ಮಂಜು ಯಶ್‌ಗಾಗಿ ...ಮಾಸ್ಟರ್‌ಪೀಸ್' ನಿರ್ದೇಶಿಸಿದ್ದಾರೆ. ಸಿನಿಮಾ ...ಹೋದ ವಾರ ರಿಲೀಸ್ ಆಗಿದೆ. ಅದೇ ...ಹೊತ್ತಿಗೆ ರೈತಸಂಘದವರು ಯಶ್ ಮತ್ತು ...ಆತನ ಈ ಸಿನಿಮಾ ವಿರುದ್ಧ ತಿರುಗಿ ...ಬಿದ್ದಿದ್ದಾರೆ. ಅಲ್ಲಾ, ಯಶ್‌ಗೂ, ಆತನ ...ಮಾಸ್ಟರ್‌ಪೀಸ್' ಸಿನಿಮಾಗೂ, ರೈತ ...ಸಂಘಕ್ಕೂ ಎತ್ತಿಂದೆತ್ತಣ ಸಂಬಂಧ ಎಂದು ಅಚ್ಚರಿ ...ಪಡುತ್ತಿದ್ದೀರಾ? ನೋಡಿ ಇಲ್ಲಿದೆ ಕತೆ.





ಅದು ಮಂಡ್ಯ ಸ್ಟಾರ್‌ವಾರ್!

ಮಂಡ್ಯದಲ್ಲಿ ಲೋಕೇಶ್ ಅಂತೊಬ್ಬ ಆಜಾನುಬಾಹು ...ಇದ್ದಾರೆ. ಅವರನ್ನು ನೋಡಿದರೆ ಥೇಟ್ ಕೋಲ್ಕತಾ ...ಕಾಲದ ಡಬ್ಲ್ಯುಡಬ್ಲ್ಯುಎಫ್ ಕಾಲಿ ತರಾ ಕಾಣಿಸುತ್ತಾರೆ. ...ಅಂಥಾ ಲೋಕಿಯವರನ್ನು 'ಹೀರೋ' ಮಾಡಿ ಒಂದು ...ಸಿನಿಮಾ ತಯಾರಿಸಲಾಗುತ್ತಿದೆ. ಅದರ ಹೆಸರು 'ಮಂಡ್ಯ ...ಸ್ಟಾರ್'. ಈ ಚಿತ್ರದಲ್ಲಿ ರೈತಸಂಘಕ್ಕೆ ಪ್ರಮುಖ ಪಾತ್ರವಿದೆ.

...ವಾರಗಳ ಹಿಂದೆ 'ಮಂಡ್ಯ ಸ್ಟಾರ್' ಸಿನಿಮಾದ ...ಶೂಟಿಂಗ್ ಶುರುವಾದಾಗ, ಮುಹೂರ್ತಕ್ಕೆಂದು ಚಿತ್ರದ ...ತಂಡ ಅಂಬರೀಷ್, ದರ್ಶನ್, ಯಶ್ ಸೇರಿದಂತೆ ಹಲವಾರು ...ಸೆಲೆಬ್ರಿಟಿಗಳನ್ನು ಆಹ್ವಾನಿಸಿತ್ತು. ಮುಂಚೆಯೇ ...ಒಪ್ಪಿಕೊಂಡಿದ್ದಂತೆ ಅಂಬರೀಷ್ ಮತ್ತು ದರ್ಶನ್ ಮಂಡ್ಯಕ್ಕೆ ...ಆಗಮಿಸಿ 'ಮಂಡ್ಯ ಸ್ಟಾರ್' ಚಿತ್ರದ ತಂಡಕ್ಕೆ ಶುಭ ...ಕೋರಿದ್ದರು. ಆದರೆ ಯಶ್ ಮಾತ್ರ ಹಾಜರಾಗದೆ ...ತಪ್ಪಿಸಿಕೊಟ್ಟಿದ್ದರು. ತಮ್ಮ ಎದುರಾಳಿ ದರ್ಶನ್ ಅಲ್ಲಿ ಇರುತ್ತಾರೆ ಎಂದು ಹೋಗಲಿಲ್ಲವೋ ಅಥವಾ ಉಡಾಫೆಯಿಂದ ಹೋಗಲಿಲ್ಲವೋ ತಿಳಿಯದು. ಆದರೆ ಯಾವಾಗ ಯಶ್ ಮುಹೂರ್ತಕ್ಕೆ ಬರಲಿಲ್ಲವೋ ಚಿತ್ರದ ತಂಡದವರಿಗೆ ಸಿಟ್ಟು ಬಂತು. ಯಾಕೆ ಬರಲಿಲ್ಲ ಎಂದು ವಿಚಾರಿಸಲು ಯಶ್‌ಗೆ ಸಿನಿಮಾದ ನಿರ್ಮಾಪಕ ಫೋನ್ ಮಾಡಿದರೆ, ಯಶ್ ಫೋನ್‌ಅನ್ನು ತನ್ನ ಸಹಾಯಕನಿಗೆ ಕೊಟ್ಟು "ಅವರಿಲ್ಲ, ಮೊಬೈಲ್ ಮನೆಯಲ್ಲೇ ಬಿಟ್ಟು ಎಲ್ಲೋ ಹೋಗಿದ್ದಾರೆ" ಅಂತ ಸುಳ್ಳು ಹೇಳಿಸಿದ! ಯಶ್ ಹೀಗೆ ಹೇಳು ಎಂದು ತನ್ನ ಸಹಾಯಕನಿಗೆ ಅಂದದ್ದು ಅತ್ತಲಿಂದ ಇತ್ತಲಿಗೆ ಸ್ಪಷ್ಟವಾಗಿಯೇ ಕೇಳಿಸಿತ್ತು!

"ನಾವು ಮಂಡ್ಯದ ಜನ ಇವನನ್ನು 'ಅಣ್ತಮ್ಮ' ಅಂತ ಪ್ರೀತಿಯಿಂದ ಬೆಂಬಲಿಸಿದರೆ, ಇವನು ನಮಗೇ ದೋಖಾ ಮಾಡ್ತಾವ್ನಲ್ಲಾ.." ಎಂದುಕೊಂಡು ಯಶ್‌ಗೆ ಶ್ಯಾನೆ ಬೈದುಕೊಂಡರು. ಬಲ್ಲ ಮೂಲಗಳ ಪ್ರಕಾರ, "ಪುಟ್ಟಣ್ಣಯ್ಯನ ರೈತ ಸಂಘದ ಪಿಕ್ಚರ್ ಅಂದಕೂಡಲೇ ನಾನು ಓಡಿಹೋಗಬೇಕಾ? ನಾನೇನು ಬಿಟ್ಟೀಲಿ ಬಿದ್ದಿದ್ದೀನಾ?" ಅಂತೆಲ್ಲಾ ತರಲೆ ಮಾತಾಡಿದನಂತೆ ಯಶ್. ಇದೆಲ್ಲಾ ಮಂಡ್ಯದ ಬಳಗಕ್ಕೆ ಗೊತ್ತಾಗಿದೆ. ಯಶಸ್ಸಿನ ಅಮಲಿನಲ್ಲಿ ತೇಲುತ್ತಿರುವ, ಯಶ್‌ಗೆ ತಕ್ಕ ಪಾಠ ಕಲಿಸಬೇಕೆಂದು ನಿರ್ಧರಿಸಿದ್ದಾರೆ. ಅದರ ಒಂದು ಭಾಗವಾಗಿ ಮೊನ್ನೆ 'ಮಾಸ್ಟರ್‌ಪೀಸ್' ರಿಲೀಸ್ ಆದ ದಿನ ಮಂಡ್ಯ ಮತ್ತು ಮೈಸೂರು ಕಡೆ ಈ ಚಿತ್ರದ ಪ್ರದರ್ಶನಕ್ಕೆ ಅಡ್ಡಿಪಡಿಸಲಾಗಿದೆ!

ಮಾಧ್ಯಮಗಳಿಗೂ ಟಾಂಗು!


ಯಶ್ ಇತ್ತೀಚೆಗೆ ಮಾಧ್ಯಮಗಳಿಂದಲೂ ದೂರವಿದ್ದಾರೆ. ಬೆರಳೆಣಿಕೆ ಯಷ್ಟು ಪತ್ರಿಕೆಗಳು ಮಾತ್ರ ಯಾವ ನಟ-ನಟಿಯರ ಜೊತೆಯೂ ಕಾಂಟ್ರೊವರ್ಸಿ ಮಾಡಿಕೊಳ್ಳದೆ ಸುಮ್ಮನಿರುತ್ತವೆ. ಹೆಚ್ಚಿನ ಪತ್ರಿಕೆಗಳು ಮತ್ತು ಚಾನೆಲ್‌ಗಳು ಒಂದಲ್ಲ ಒಂದು ರೀತಿಯಲ್ಲಿ ದಿಕ್ಕುತಪ್ಪಿದ ನಟರನ್ನು ಬೆಂಡೆತ್ತುವ ಕೆಲಸ ಮಾಡುತ್ತಿರುತ್ತವೆ. ಅದು ಸರಿಯೂ ಹೌದು. ಆದರೆ ಯಶ್ ತರಹದ ನಟರಿಗೆ ಅದರ ಬಗ್ಗೆ ಕೋಪ.

'ಮಾಸ್ಟರ್‌ಪೀಸ್' ಚಿತ್ರದ ಶೂಟಿಂಗ್ ಆರಂಭವಾದ ದಿನದಿಂದ ಅದು ಬಿಡುಗಡೆ ಆಗುವತನಕ ಆ ಸಿನಿಮಾದ ನಿರ್ಮಾಪಕರು ಪತ್ರಿಕೆಗಳಿಗೆ ಒಂದೇ ಒಂದು ಜಾಹಿರಾತನ್ನೂ ಬಿಡುಗಡೆ ಮಾಡಲು ಯಶ್ ಬಿಟ್ಟಿರಲಿಲ್ಲ, ಅಷ್ಟೇ ಯಾಕೆ, 'ಮಾಸ್ಟರ್‌ಪೀಸ್' ಸಿನಿಮಾದಲ್ಲಿ ಮಾಧ್ಯಮಗಳನ್ನು ಹೀಯಾಳಿಸುವ ದೃಶ್ಯಗಳೂ ಇವೆ!

ಆ ಸಿನಿಮಾದಲ್ಲಿ ವಾರಪತ್ರಿಕೆಯೊಂದು ಸಿನಿಮಾದ ನಾಯಕನ ಪುಂಡಾಟಿಕೆ ಕುರಿತು ಒಂದು ವರದಿ ಮಾಡಿರುತ್ತದೆ. ಒಳಪುಟದಲ್ಲಿ ಪ್ರಕಟವಾಗಿರುವ ಆ ವರದಿಯನ್ನು ಓದಿ ಯಶ್ (ಯುವ) ಸಿಟ್ಟಾಗುತ್ತಾನೆ. ಅತ್ತೆ ಮನೆಗೆ ನುಗ್ಗಿದಂತೆ ಆ ಪತ್ರಿಕಾ ಕಚೇರಿಗೆ ನುಗ್ಗುವ ಯಶ್ ಸಂಪಾದಕರ ಅಂಗೈಯನ್ನು ಟೇಬಲ್ ಮೇಲಿಟ್ಟು ಪೆನ್ನು ಚುಚ್ಚುತ್ತಾನೆ! "ನಿನ್ನ ತುಕಾಲಿ ಪತ್ರಿಕೆಯಲ್ಲಿ ನನ್ ಬಗ್ಗೆ ಬರಿತೀಯಾ? ಅದೂ ಒಳಗಡೆ ಪುಟದಲ್ಲಿ ಯಾರೋ ಕಾಂಜೀಪಿಂಜಿ ಕಳ್ಳರ ಪಕ್ಕದಲ್ಲಿ ಚಿಕ್ಕ ಫೋಟೋ ಹಾಕಿ ಬರೀತಿಯಾ..? ತಾಕತ್ತಿದ್ರೆ ಫ್ರಂಟ್ ಪೇಜ್‌ನಲ್ಲಿ ದೊಡ್ಡ ಫೋಟೋ ಹಾಕಿ ಪ್ರಿಂಟ್ ಮಾಡು" ಎಂದು ಡೈಲಾಗ್ ಹೊಡೆದು ಸಂಪಾದಕನ ಚೇಂಬರ್‌ನಿಂದ ಸ್ಲೋ ಮೋಷನ್‌ನಲ್ಲಿ ನಡೆದು ಹೊರಗೆ ಹೋಗುತ್ತಾನೆ! ಬ್ಯಾಕ್ ಗ್ರೌಂಡ್‌ನಲ್ಲಿ ಹರಿಕೃಷ್ಣರ ಕರ್ಕಶವಾದ ಮ್ಯೂಸಿಕ್ ಬೇರೆ!


ಪತ್ರಿಕೆಗಳ ಸರದಿ ಆಯಿತು. ಇನ್ನು ಟಿವಿ ಚಾನೆಲ್‌ಗಳನ್ನೂ ತರಾಟೆಗೆ ತೆಗೆದುಕೊಳ್ಳುವುದು ಬೇಡವೆ? ಅದಕ್ಕಾಗಿ ಇನ್ನೊಂದು ದೃಶ್ಯವೂ ಇದೆ.

ಟಿವಿ ವಾಹಿನಿಯೊಂದರ ಆಂಕರ್ ಯಶ್‌ನ ಮನೆಗೆ ಬಂದು ಆತನ ಅಮ್ಮ ಸುಹಾಸಿನಿಯ ಸಂದರ್ಶನ ನಡೆಸಿರುತ್ತಾಳೆ. ಆಕೆ "ನನ್ನ ಮಗ ಭಗತ್ ಸಿಂಗ್, ವೀರ ಸಾವರ್ಕರ್ ಆಗ್ತಾನೆ ಅಂತ ನಾನು ಕನಸು ಕಂಡಿದ್ದೆ. ಆದರಾತ ರೌಡಿ ಆಗಿಬಿಟ್ಟ..." ಎಂದು ಕಣ್ಣೀರಿಡುತ್ತಾಳೆ. ಆಗ ಮಗರಾಯನ (ಯಶ್) ಆಗಮನವಾಗಿ "ರೀ ನಿಮ್ಗೇನ್ ಬುದ್ಧಿ ಇಲ್ವಾ? ನಮ್ಮಮ್ಮನತ್ರ ಏನ್ ಕೆಲಸ? ನನ್ನತ್ರ ಬನ್ರೀ" ಎಂದು ಮೂದಲಿಸುತ್ತಾನೆ. ಆಗ ಆ ಆಂಕರ್ "ಈಡಿಯಟ್" ಎಂದು ಕ್ಯಾಮರಾಮನ್ ಕರೆದುಕೊಂಡು ಜಾಗ ಖಾಲಿ ಮಾಡುತ್ತಾಳೆ! ಆಗ ಯಶ್ "ನೀನಿಲ್ಲದಿದ್ರೆ ಇನ್ನೊಬ್ಬರು ಬರ್ತಾರೆ ಹೋಗು. ನಮ್ಮ ದೇಶದಲ್ಲಿ ಟೀವಿಗಳಿಗೇನು ಬರಾನ..." ಎಂದು ಹೀಗಳೆಯುತ್ತಾನೆ!




ಮಾಧ್ಯಮಗಳನ್ನು ಯಾರೂ ಟೀಕಿಸಬಾರದು, ಇಂತಹ ದೃಶ್ಯಗಳು ಸಿನಿಮಾಗಳಲ್ಲಿ ಇರಬಾರದು ಎಂಬುದು ನಮ್ಮ ವಾದವಲ್ಲ, ಸಿನಿಮಾದಲ್ಲಿ ಅಂತಹ ಸನ್ನಿವೇಶ ಅಗತ್ಯವಾಗಿದ್ದರೆ ಅದು ಖಂಡಿತಾ ಇರಬೇಕು. ಆದರೆ 'ಮಾಸ್ಟರ್‌ಪೀಸ್' ಸಿನಿಮಾದಲ್ಲಿ ಯಶ್ ಬಲವಂತವಾಗಿ ಇಂತಹ ದೃಶ್ಯಗಳನ್ನು ಸೇರಿಸಿದ್ದಾರೆ ಮತ್ತು ಅಂತಹ ಡೈಲಾಗ್ ಬರೆಸಿದ್ದಾರೆ ಎನ್ನಲಾಗುತ್ತಿದೆ. ಅದರ ಹಿಂದಿರುವ ತರ್ಕ ತಾನೀಗ ಹಿಟ್ ಸಿನಿಮಾಗಳನ್ನು ಕೊಡುವ ಸ್ಟಾರ್ ನಟನಾಗಿರುವುದರಿಂದ ತನಗೆ ಮಾಧ್ಯಮಗಳ ಬೆಂಬಲ ಅಥವಾ ಪ್ರಚಾರದ ಅಗತ್ಯತೆ ಇಲ್ಲ ಎಂಬ ಧಿಮಾಕು.

ಮಾಧ್ಯಮಗಳ ವಿರುದ್ಧದ ಯಶ್ ಸಿಟ್ಟಿಗೆ ಕಾರಣ ಆತನ ತಾಯಿ. ಈ ಹಿಂದೆ ಯಶ್‌ನ ತಾಯಿ ಮೈಸೂರಿನ ಪಡುವಾರಹಳ್ಳಿಯಲ್ಲಿ ಚೀಟಿ ನಡೆಸಿ ಸಾವಿರಾರು ಜನರಿಗೆ ಮೋಸ ಮಾಡಿದ್ದರ ಬಗ್ಗೆ ಮಾಧ್ಯಮಗಳು ವರದಿ ಮಾಡಿದ್ದವು. ಹಾಗೆಯೇ ಬೆಂಗಳೂರಿನ ಬಾಡಿಗೆ ಮನೆಯ ಓನರ್‌ನನ್ನು ಯಶ್ ತಾಯಿ ಸತಾಯಿಸಿದ್ದೂ ಮಾಧ್ಯಮಗಳಲ್ಲಿ ಬಿತ್ತರಣೆಗೊಂಡಿತ್ತು.



ಇನ್ನೊಂದು ವಿಚಿತ್ರ ಸುದ್ದಿಯೂ ಹಬ್ಬಿತ್ತು. ಅದೇನೆಂದರೆ 'ಮಿಸ್ಟರ್ ಅಂಡ್ ಮಿಸೆಸ್ ರಾಮಾಚಾರಿ' ಚಿತ್ರದ ನಿರ್ಮಾಪಕರೂ ಮತ್ತು ವಿತರಕರೂ ಆದ ಜಯಣ್ಣ-ಭೋಗೇಂದ್ರ ಜೋಡಿಯೇ ರೌಡಿಗಳನ್ನು ಬಿಟ್ಟು ಯಶ್‌ನನ್ನು ಹೆದರಿಸಿದ್ದರು ಎಂಬುದು!

ಆದರೆ ವಾಸ್ತವವಾಗಿ ಯಶ್‌ನನ್ನು ಈ ಪಾಟಿ 'ರಾಕಿಂಗ್ ಸ್ಟಾರ್' ಮಾಡಿದವರೇ ಜಯಣ್ಣ, ಅವರೆ ಯಾಕೆ ಹೀಗೆ ಮಾಡಿಸುತ್ತಾರೆ ಎಂದು ಜನ ಹುಬ್ಬೇರಿಸಿದ್ದರು. "ಒಳಗೊಳಗಿನ ಸುದ್ದಿ ಏನೆಂದರೆ ಸಂಭಾವನೆಯ ವಿಚಾರದಲ್ಲಿ ಯಶ್ ಮತ್ತು ಜಯಣ್ಣನ ನಡುವೆ ಗಲಾಟೆಯಾಗಿದೆಯಂತೆ. ಜಯಣ್ಣನ ಮುಂದಿನ ಚಿತ್ರಕ್ಕೆ ಕಾಲ್‌ಶೀಟ್ ಕೊಡಲ್ಲ ಅಂತ ಯಶ್ ಅಂದನಂತೆ. ಅದೂಅಲ್ಲದೆ, ನನ್ನ ಕಾಲ್‌ಶೀಟ್ ಬೇಕಾದರೆ ನಾಲ್ಕು ಕೋಟಿ ಕೊಡು ಎಂದು ಯಶ್ ಡಿಮಾಂಡ್ ಮಾಡಿದನಂತೆ" ಎಂದು ಹಲವರು ಅಂತೆಕಂತೆಗಳನ್ನು ಹಬ್ಬಿಸಿದ್ದರು. ಆದರೆ ಇಂತಹ ಸುದ್ದಿ ನಿಜವಾ ಸುಳ್ಳಾ ಎಂಬುದು ಮಾತ್ರ ಬಹಿರಂಗವಾಗಲೇ ಇಲ್ಲ.



ಜೊತೆಗೆ ಯಶ್ ಮತ್ತು ನಟಿ ರಾಧಿಕಾ ಪಂಡಿತ್ ನಡುವಿನ 'ಲವ್ವಿ ಡವ್ವಿ' ಬಗ್ಗೆಯೂ ಮಾಧ್ಯಮಗಳು ಬರೆಯುತ್ತಲೇ ಇವೆ. ಆ ಕಾರಣಕ್ಕೆ 'ಮಿಸ್ಟರ್ ಅಂಡ್ ಮಿಸೆಸ್ ರಾಮಾಚಾರಿ' ಚಿತ್ರದ ಒಂದು ದೃಶ್ಯದಲ್ಲಿ "ನಮ್ಮಿಬ್ಬರ ಮಧ್ಯೆ ಲವ್ವಿದೆಯೋ ಇಲ್ವೋ ನೀವದನ್ನು ಕೇಳಲೂಬಾರದು, ನಾವದನ್ನು ಹೇಳಲೂಬಾರದು" ಎಂಬ ಡೈಲಾಗ್ ಅನ್ನು ಯಶ್ ಹೊಡೆದದ್ದು, ಅದು ಮಾಧ್ಯಮದವರಿಗೆ ಯಶ್ ಕೊಟ್ಟ ಸಣ್ಣ ಬೆದರಿಕೆ!

ದರ್ಶನ್ ಮೇಲೆ ಗುಮಾನಿ!

ಯಶ್ ನಟನೆಯ 'ಮಿಸ್ಟರ್ ಅಂಡ್ ಮಿಸೆಸ್ ರಾಮಾಚಾರಿ' ಸಖತ್ತಾಗಿ ಓಡುತ್ತಿದ್ದ ದಿನಗಳಲ್ಲೇ ಒಂದು ದಿನ ಯಶ್ ತ್ಯಾಗರಾಜನಗರದ ಕಡೆ ಕಾರ್‌ನಲ್ಲಿ ಪ್ರಯಾಣಿಸುತ್ತಿದ್ದಾಗ ಯಾರೋ ಅನಾಮಿಕರು ಆತನ ಕಾರ್ ಮೇಲೆ ದಾಳಿ ಮಾಡಿದ್ದರು. ಆ ದಾಳಿಯಿಂದ ವಿಪರೀತ ಗಲಿಬಿಲಿಗೊಂಡಿದ್ದ ಯಶ್ ತನ್ನ ಎದುರಾಳಿ ದರ್ಶನ್ ಅವರ ಅಭಿಮಾನಿಗಳೇ ಇದನ್ನು ಮಾಡಿದ್ದಾರೆ ಎಂಬ ಸುದ್ದಿ ಹರಡಿಸಿದ್ದ. ಅದೇ ಹೊತ್ತಿನಲ್ಲಿ ಗಾಂಧಿನಗರದಲ್ಲಿ

ವಿಚಿತ್ರವೆಂದರೆ ಇಂತಹ ಸುದ್ದಿ ಹಬ್ಬಿದ್ದ ದಿನಗಳಲ್ಲೇ ರಾಜಾಹುಲಿ ತನ್ನ ಕ್ಯಾಂಪ್ ಬದಲಿಸಿ ಕೊಬ್ರಿ ಮಂಜಣ್ಣನ ಗುಹೆ ಸೇರಿತು! ಸದ್ಯದಲ್ಲೇ ಮಹೇಶ್ ರಾವ್ ನಿರ್ದೇಶನದಲ್ಲಿ ಯಶ್ ಮತ್ತು ರಾಧಿಕಾ ಪಂಡಿತ್ ಜೋಡಿಯ ಚಿತ್ರ ನಿರ್ಮಿಸುತ್ತಿದ್ದಾರೆ ಮಂಜಣ್ಣ. ಈ ಚಿತ್ರಕ್ಕೂ ಮುಂಚೆ 'ಮಾಸ್ಟರ್‌ಪೀಸ್' ಶೂಟಿಂಗ್ ಶುರುವಾಗಿದ್ದರಿಂದ ಇತ್ತಕಡೆ ಗಮನ ಹರಿಸಿದ್ದಾನೆ ಯಶ್. ಮುಂದಿನ ಚಿತ್ರಕ್ಕೆ 'ಮಂಜ' ಎಂಬ ಹೆಸರಿಟ್ಟಿದ್ದಾರಂತೆ ಕೊಬ್ರಿ ಮಂಜಣ್ಣ! ಹೀಗಿದೆ ನೋಡಿ, ಯಶ್ ಅಮಲಿನ ಸ್ಟೋರಿ!!

ಯಶ್, ನಿನ್ನಲ್ಲಿ ಪ್ರತಿಭೆ ಇದೆ, ಸೌಂದರ್ಯ ಇದೆ, ಸಖತ್ತಾದ ಮೈಕಟ್ಟೂ ಇದೆ. ನೀನು ಇನ್ನು ಬಹಳಷ್ಟು ದಿನ ಉದ್ಯಮದಲ್ಲಿರಬೇಕಾದವನು. ಯಶಸ್ಸನ್ನು ತಲೆಗೇರಿಸಿಕೊಂಡು ಯಡವಟ್ಟು ಮಾಡಿಕೊಳ್ಳುವುದನ್ನು ಈಗಲಾದರೂ ನಿಲ್ಲಿಸು ಮಾರಾಯಾ....


● ಮಂಜು ಭಾರ್ಗವಿ



ಮೇಲ್ಮನೆ:

ಬಿಜೆಪಿಗೆ ಮುಖಭಂಗ ಜೆಡಿಎಸ್‌ಗೆ ಗರ್ವಭಂಗ


ಗೆಲುವಿನ ನಗೆಬೀರಿದ ಸಿದ್ದು



ದೇವೇಗೌಡ

ಪರಿಷತ್ ಫಲಿತಾಂಶ ಹೊರಬಿದ್ದಿದೆ. ಯಾರ್‍ಯಾರ ಲೆಕ್ಕಾಚಾರ ಎಲ್ಲೆಲ್ಲಿ ಕೈಕೊಟ್ಟಿತೋ ಗೊತ್ತಿಲ್ಲ, ಆದರೆ ಮುಖ್ಯಮಂತ್ರಿ ಸಿದ್ದು ಮಾತ್ರ ಈ ಬಾರಿ ಯಾಮಾರಲಿಲ್ಲ, ಜೆಡಿಎಸ್ ಮತ್ತು ಬಿಜೆಪಿಗಳ ಒಳಒಪ್ಪಂದಕ್ಕೆ ಒಳಗಿಂದೊಳಗೇ ಕತ್ತರಿ ಹಾಕಿ ಪರಸ್ಪರ ಕೂಡಾವಳಿಯ ಸೆರಗಂಟಿಗೆ ಸದ್ದಿಲ್ಲದೆ ಹುಳಿ ಹಿಂಡಿದ್ದರ ಫಲವೇ ಮೇಲ್ಮನೆಯಲ್ಲಿನ್ನು ಕಾಂಗ್ರೆಸ್ ಬಾವುಟ ಹಾರುವಂತಾಗಿದ್ದು!

ಎತ್ತಿಂದೆತ್ತ ಲೆಕ್ಕ ಹಾಕಿದರೂ ಬೆಂಗಳೂರು ನಗರದಿಂದ ಕಾಂಗ್ರೆಸ್ ಅಭ್ಯರ್ಥಿ ಗೆಲ್ಲುವುದು ಸಾಧ್ಯವೇ ಇರಲಿಲ್ಲ, ಬೆಂಗಳೂರು ಗ್ರಾಮಾಂತರದಲ್ಲೇನಾದರೂ ಜೆಡಿಎಸ್ ಮತ್ತು ಬಿಜೆಪಿ ಕೈಜೋಡಿಸಿದ್ದರೆ ಡಿಕೆಶಿ ಆಪ್ತ ರವಿ ನೀರು ಕುಡಿಯಲೇಬೇಕಿತ್ತು, ಮೈಸೂರಿನ ಎರಡು ಸ್ಥಾನಗಳ ಪೈಕಿ ಒಂದನ್ನು ಗೆಲ್ಲುವುದು ಬಿಜೆಪಿಗೇನೂ ಕಷ್ಟವಿರಲಿಲ್ಲ, ಯಾವ ಗಾಳಿಯೇ ಎದ್ದರೂ ಹಾಸನದ ಜೆಡಿಎಸ್ ಜಟ್ಟಿ ಪಟೇಲ್ ಶಿವರಾಮ್‌ರನ್ನು ಸೋಲಿಸುವುದು ಸಾಧ್ಯವೇ ಇರಲಿಲ್ಲ, ದಕ್ಷಿಣ ಕನ್ನಡ ಮತ್ತು ಉತ್ತರ ಕನ್ನಡದಲ್ಲಿ ಅದೇನೇ ಹೆಣಗಾಡಿದರೂ ಬಿಜೆಪಿಯನ್ನು ಮಣಿಸುವುದು ಸಾಧ್ಯವೇ ಇರಲಿಲ್ಲ,

'ನೋಡ್ತಾ ಇರಿ, ಕಮ್ಮಿಯೆಂದರೂ ನಾವು ಇಪ್ಪತ್ತು ಸ್ಥಾನಗಳನ್ನಾದರೂ ಗೆದ್ದೇ ಗೆಲ್ತೀವಿ....' ಎಂದು ಸಿದ್ದರಾಮಯ್ಯ ಚುನಾವಣೆಯ ಹೊಸ್ತಿಲಲ್ಲಿ ಕೊಟ್ಟ ಹೇಳಿಕೆಯನ್ನು ಕೇಳಿ ಬಿಜೆಪಿ ನಾಯಕರು 'ಮುಖ್ಯಮಂತ್ರಿಗಳು ಅದ್ಯಾವ ಭ್ರಮೆಯಲ್ಲಿ ತೇಲುತ್ತಿದ್ದಾರೋ' ಎಂದು ಕಿಚಾಯಿಸಿದ್ದೂ ಸುಮ್ಮನೇನಲ್ಲ, ಪದೇಪದೇ ಮೂರ್ಖ ಮುಖ್ಯಮಂತ್ರಿ ಎಂದು ಸಿದ್ದುವನ್ನು ಮೂದಲಿಸಿಕೊಂಡೇ ಬಂದ ಎಡಬಿಡಂಗಿ ಈಶ್ವರಪ್ಪ ಸೇರಿದಂತೆ ಬಿಜೆಪಿ ನಾಯಕರಾದ ಯಡ್ಡಿ, ಜೋಷಿ, ಸದಾನಂದ ಗೌಡಾದಿಗಳೆಲ್ಲ ಹಾಕಿದ್ದ ಲೆಕ್ಕಾಚಾರವೇ ಬೇರೆಯಿತ್ತು,

ಅವರ ಪ್ರಕಾರ ಬಿಜೆಪಿಗೆ ಏನಿಲ್ಲವೆಂದರೂ ಹತ್ತು ಸೀಟುಗಳು ಕಟ್ಟಿಟ್ಟ ಬುತ್ತಿ, ಅಪ್ಪರಮೇಲೆ ಇನ್ನೊಂದೆರಡಕ್ಕೆ ಅತೀಹೆಚ್ಚು ಶ್ರಮ ಹಾಕಿಬಿಟ್ಟರೆ ಹನ್ನೆರಡು ಸ್ಥಾನಗಳನ್ನು ಸಲೀಸಾಗಿ ಗಿಟ್ಟಿಸಬಹುದು. ಮಿಕ್ಕಂತೆ ಎರಡು ಅಥವಾ ಮೂರು ಸ್ಥಾನಗಳಲ್ಲಿ ಒಳಗೊಳಗೇ ಜೆಡಿಎಸ್‌ಗೆ ನೆರವಾದರೆ ಐದರಿಂದ ಆರು ಸ್ಥಾನಗಳಲ್ಲಿ ಜೆಡಿಎಸ್ ಗೆಲ್ಲುವುದೂ ಕಷ್ಟವೇನಲ್ಲ, ಅಲ್ಲಿಗೆ ಕಾಂಗ್ರೆಸ್ ಏನಿದ್ದರೂ ಆರು ಹೆಚ್ಚೆಂದರೆ ಎಂಟಕ್ಕೆ ಸುಸ್ತು ಹೊಡೆಯುತ್ತದೆ. ಕಾಂಗ್ರೆಸ್ ಪಾಲಿಗದು ದೊಡ್ಡ ಮುಖಭಂಗವೆ. ಬೆಂಗಳೂರು ಮಹಾನಗರ


ಆರ್. ಅಶೋಕ್


ಅನಂತ್

ಪಾಲಿಕೆಯಲ್ಲಿ ಬಿಜೆಪಿ ಗಳಿಸಿದ ಮುನ್ನಡೆ ಮತ್ತು ಈಗ ಮೇಲ್ಮನೆಯಲ್ಲಿ ಗಳಿಸಿದ ಪ್ರಾಬಲ್ಯವನ್ನೇ ಲೆಕ್ಕ ಹಾಕಿದರೂ ಆಡಳಿತಾರೂಢ ಕಾಂಗ್ರೆಸ್ಸಿಗದು ದೊಡ್ಡ ಹಿನ್ನಡೆಯೇ. ಇದನ್ನು ಮುಂದಿಟ್ಟುಕೊಂಡೇ ಕಾಂಗ್ರೆಸ್ ಅತೃಪ್ತರ ಗುಂಪು ಮುಖ್ಯಮಂತ್ರಿ ಬದಲಾವಣೆಗೆ ಒತ್ತಾಯಿಸಿತೆಂದರೆ ಬಿಜೆಪಿಯ ರೊಟ್ಟಿ ಜಾರಿ ತುಪ್ಪಕ್ಕೆ ಬಿದ್ದಂತೆಯೇ. ಮುಂಬರುವ ವಿಧಾನಸಭಾ


ಆದರೆ ಇದರ ವಾಸನೆಯಂತೂ ಸಿದ್ದು ಮುಗಿಗೆ ಬಡಿಯಲು ಹೆಚ್ಚು ಸಮಯ ಹಿಡಿಯಲಿಲ್ಲ, ಇಂಥಾದೊಂದು ಸದ್ದಿಲ್ಲದ ಕೂಡಾವಳಿಯ ಅಪಾಯವನ್ನು ಮೊದಲೇ ಗ್ರಹಿಸಿದ್ದ ಸಿದ್ದರಾಮಯ್ಯ ಈ ಬಾರಿಯೂ ಬೆಂಗಳೂರು ಮಹಾನಗರ ಪಾಲಿಕೆಯ ಸೂತ್ರವನ್ನೇ ಅಸ್ತ್ರವಾಗಿಸಿಕೊಂಡರು. ನೀವು ಬಿಜೆಪಿಗೆ ನೆರವಾಗುವುದಕ್ಕಿಂತ ನಮ್ಮ ಜೊತೆ ಕೈಜೋಡಿಸಿದರೇನೇ ನಿಮಗೆ ಲಾಭ ಎಂದು ಚಲುವರಾಯಸ್ವಾಮಿ, ಬಾಲಕೃಷ್ಣ, ಜಮೀರ್, ಪುಟ್ಟಣ್ಣರ ತಂಡದ ಜೊತೆ ನೆಂಟಸ್ತಿಕೆ ಕುದುರಿಸಿಕೊಂಡರು. ಮೊದಲೇ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಸಂಬಂಧ ಕುದುರಿದ್ದರಿಂದಾಗಿ ಜೆಡಿಎಸ್ ಶಾಸಕರಾದ ಅಖಂಡ ಶ್ರೀನಿವಾಸಮೂರ್ತಿ, ಗೋಪಾಲಯ್ಯ ಥರದ ಮಹತ್ವಾಕಾಂಕ್ಷಿಗಳಿಗಿದು ಅನಿವಾರ್ಯ ಆಯ್ಕೆಯಾಗಿತ್ತು, ಗೋಪಾಲಯ್ಯ ಮತ್ತು ಅಖಂಡ ಶ್ರೀನಿವಾಸಮೂರ್ತಿ ತಂಡ ನೇರವಾಗಿ ದೇವೇಗೌಡರನ್ನೇ ಕಂಡು ಕಾಂಗ್ರೆಸ್-ಜೆಡಿಎಸ್ ಪಾಲು ಹಂಚಿಕೆಯ ವ್ಯಾಪಾರಕ್ಕೇ ಗೌಡರು ಅಂಟಿಕೊಳ್ಳುವಂತೆ ಒಪ್ಪಿಸಿಬಂದರು. ಇದು ಕುಮಾರಣ್ಣನಿಗೂ ಪೀಕಲಾಟ ದೇವೇಗೌಡರಿಗೂ ಉಭಯ ಸಂಕಟ. ಆಕ್ಕಿ ಮೇಲೆ ಆಸೆ ನೆಂಟರ ಮೇಲೆ ಪ್ರೀತಿ ಎಂಬಂತೆ ಏನಾಗುತ್ತೋ ಆಗಿಹೋಗಲಿ ಎಂದು ದೇವೇಗೌಡರು ಮುಗುಮ್ಮಾದರು. ಮೇಲುನೋಟಕ್ಕೆ ಅಶೋಕ್ ಜೊತೆ ವ್ಯವಹಾರ ಕುದುರಿದ್ದರೂ ಕುಮಾರಣ್ಣನಿಗೆ ಕಾಂಗ್ರೆಸ್ ಜೊತೆಗಿನ ವ್ಯಾಪಾರವೇ ಹೆಚ್ಚು ಲಾಭವಾಗಿ ಕಂಡಿತು. ಬೆಂಗಳೂರು ಗ್ರಾಮಾಂತರದಲ್ಲೇನೋ ಬಿಜೆಪಿ ಜೊತೆ ಕೈಜೋಡಿಸಬಹುದು. ಡೀಕೆ ಆಪ್ತ ರವಿಯನ್ನು ಸೋಲಿಸಿ ಅಡಕಮಾರನಹಳ್ಳಿ ಕೃಷ್ಣಪ್ಪ ಗೆಲ್ಲಬೇಕೆಂದರೆ ಅದಕ್ಕೆ ಬಿಜೆಪಿ ಬೆಂಬಲ ಬೇಕೇಬೇಕು. ಅಶೋಕ್ ಅದಕ್ಕೆ ಒಪ್ಪಿದ್ದರೂ ಕೂಡ ಮಂಡ್ಯದಲ್ಲಿ ಸಹಜವಾಗೇ ಜೆಡಿಎಸ್ ಕಾಂಗ್ರೆಸ್‌ಗಿಂತ ಹೆಚ್ಚು ಬಲಾಢ್ಯವಾಗಿತ್ತು, ಹಾಸನದಲ್ಲೂ ಜೆಡಿಎಸ್‌ಗಿದ್ದ ಪ್ರಭಾವದಿಂದಲೇ ಪಟೇಲ್ ಶಿವರಾಂ ಗೆಲ್ಲುವುದು ನಿಕ್ಕಿಯಾಗಿತ್ತು, ಸಮಸ್ಯೆಯಿದ್ದದ್ದು ಮೈಸೂರಿನಲ್ಲಿ,

ಮೈಸೂರು ಜಿಲ್ಲೆಯಲ್ಲಿ ಕಾಂಗ್ರೆಸ್ ಮತ್ತು ಜೆಡಿಎಸ್ ಹೆಚ್ಚುಕಮ್ಮಿ ಸರಿಸಮವಾಗಿದ್ದರೂ ಚಾಮರಾಜನಗರ ಜಿಲ್ಲೆಯಲ್ಲಿ ಕಾಂಗ್ರೆಸ್ ನಂತರ ಹೆಚ್ಚು ಶಕ್ತಿಶಾಲಿಯಾಗಿದ್ದದ್ದು ಬಿಜೆಪಿ. ಕಾಂಗ್ರೆಸ್‌ನ ಎರಡನೇ ಪ್ರಾಶಸ್ತ್ಯದ ಮತಗಳು ಜೆಡಿಎಸ್‌ಗೆ ಬಿದ್ದರಷ್ಟೇ ಅಲ್ಲಿ ಸಂದೇಶ್ ನಾಗರಾಜ್ ಗೆಲ್ಲಲು ಸಾಧ್ಯ, ಹಾಗೆ ತುಮಕೂರು, ಚಿತ್ರದುರ್ಗ, ಕೋಲಾರಗಳಲ್ಲಿ ಪೈಪೋಟಿಯಿದ್ದದ್ದು ಕಾಂಗ್ರೆಸ್ ಮತ್ತು ಜೆಡಿಎಸ್ ನಡುವೆಯೇ ಹೊರತು ಮೂರನೇ ಸ್ಥಾನದಲ್ಲಿದ್ದ ಬಿಜೆಪಿಗೆ ಜೆಡಿಎಸ್ ಬೆಂಬಲಿಸದೇ ಬೇರೆ ವಿಧಿಯೇ ಇರಲಿಲ್ಲ, ಇಂಥ ಕ್ಷೇತ್ರಗಳಲ್ಲಿ ಹೇಗಿದ್ದರೂ ಬಿಜೆಪಿ ಬೆಂಬಲ ಕೊಟ್ಟೇ ಕೊಡುತ್ತದೆ. ಮಿಕ್ಕೆಡೆಗಳಲ್ಲಿ ಕಾಂಗ್ರೆಸ್ ಜೊತೆ ಕೈಜೋಡಿಸಿದರೇನೇ ಅಧಿಕಾರದ ಲಾಭ ಪಡೆಯಲು ಸಾಧ್ಯ ಎಂಬ ಲೆಕ್ಕಾಚಾರ ಚಲುವರಾಯಸ್ವಾಮಿ, ಗೋಪಾಲಯ್ಯರದಾಗಿತ್ತು,

ಕಾಂಗ್ರೆಸ್ ವಿರುದ್ಧ ಜೆಡಿಎಸ್ ತನ್ನ ಜೊತೆ ಕೈಜೋಡಿಸುತ್ತದೆ ಎಂಬ ಬಿಜೆಪಿ ಲೆಕ್ಕಾಚಾರ ದಿನಕಳೆದಂತೆ ಹುಸಿಯಾಗಲಾರಂಭಿಸಿ ಚುನಾವಣೆ ಸಮೀಪಿಸಿದಂತೆಲ್ಲ ಬೇರೆಯದೇ ಚಿತ್ರಣವಾಗಿತ್ತು, ಬೆಂಗಳೂರು ನಗರ ಕ್ಷೇತ್ರದ ಜೆಡಿಎಸ್ ಶಾಸಕರಾದ ಜಮೀರ್, ಗೋಪಾಲಯ್ಯ ಮತ್ತು ಅಖಂಡ ಶ್ರೀನಿವಾಸಮೂರ್ತಿ ಸೇರಿದಂತೆ ಹೆಚ್ಚೂಕಮ್ಮಿ 600ಕ್ಕೂ ಅಧಿಕ ಜೆಡಿಎಸ್ ಮತಗಳು ಕಾಂಗ್ರೆಸ್ ಅಭ್ಯರ್ಥಿ ನಾರಾಯಣಸ್ವಾಮಿಯ ಪರ ಬಿದ್ದವು. ಬಿಜೆಪಿಯ ದೊಡ್ಡ ಬಸವರಾಜ್‌ಗೆ ಇದರ ಮುನ್ಸೂಚನೆಯಿತ್ತೋ ಏನೋ ಜೆಡಿಎಸ್ ಓಟುಗಳನ್ನು ಸೌಜನ್ಯಕ್ಕೂ


ಚುನಾವಣೆಯ ಕಾವೆಬ್ಬಿಸಿಬಿಟ್ಟರೆ ಕುರ್ಚಿ ಹಿಡಿಯುವ ತಮ್ಮ ಉದ್ದೇಶ ತನ್ನಿಂತಾನೇ ಈಡೇರುತ್ತದೆ....!

ಇಂಥದೊಂದು ಲೆಕ್ಕ ಹಾಕಿಯೇ ಬಿಜೆಪಿ ವರಿಷ್ಠ ಅನಂತ್ ಮತ್ತು ಜೋಷಿ ಕೂಟ ದೇವೇಗೌಡರಿಗೆ ಮಸ್ಕಾ ಹೊಡೆದಿತ್ತು, ಅತ್ತ ದೆಹಲಿಗೆ ಹೋಗಿ ಪ್ರಧಾನಿ ಮೋದಿಯನ್ನು ಖುದ್ದಾಗಿಯೇ ಭೇಟಿ ಮಾಡಿಕೊಂಡು ಬಂದಿದ್ದ ದೇವೇಗೌಡರು ಮೋದಿ ಕುರಿತಂತೆ ಮೆಚ್ಚುಗೆಯ ಮಾತುಗಳನ್ನೂ ಶುರು ಹಚ್ಚಿಕೊಂಡರು. ಮತ್ತೊಂದೆಡೆ ಕುಮಾರಣ್ಣನ ಜೊತೆ ಸಂಧಾನಕ್ಕೊಂದೇ ರಾಜ್ಯ ಬಿಜೆಪಿಯ ಒಕ್ಕಲಿಗ ಬ್ರಿಗೇಡ್‌ನ ಅಧಿಪತಿ ಆರ್. ಅಶೋಕ್‌ರನ್ನು ಛೂಬಿಟ್ಟರು. ಅಶೋಕ್ ಮತ್ತು ಕುಮಾರಣ್ಣನ ಮಧ್ಯೆ ಅದೇನು ಚೌಕಾಶಿ ನಡೆಯಿತೋ ದೇವೇಗೌಡ ಮತ್ತು ಅನಂತ್‌ಕುಮಾರ್ ಏನೇನು ಮಾತಾಡಿಕೊಂಡರೋ ಬಲ್ಲವರ್‍ಯಾರು?


ಸಂದೇಶ್ ನಾಗರಾಜ್


ಚಲುವರಾಯಸ್ವಾಮಿ


ಗೋಪಾಲಯ್ಯ


ರಾಮಲಿಂಗಾರೆಡ್ಡಿ


ರವಿ


ಧರ್ಮಸೇನ



ವಿಲ್ಲ, ದಕ್ಷಿಣ ಕನ್ನಡ ಮತ್ತು ಉತ್ತರ ಲ್ಲೂ ಇದೇ ಲೆಕ್ಕಾಚಾರ ಫಲ ಕೊಟ್ಟಿತ್ತು. ್ ಪರ ಜೆಡಿಎಸ್ ಮತಗಳು ಹರಿದುಬಂದದ್ದು ಗೆ ದೊಡ್ಡ ಹಿನ್ನಡೆಯಾಗಿ ಪರಿಣಮಿಸಿತು. ಿಯನ್ನು ತನ್ನ ಕೇಸರಿ ಪ್ರಯೋಗಶಾಲೆಯನ್ನಾಗಿ ಕೊಂಡಿದ್ದ ಬಿಜೆಪಿಗಿದು ಅನಿರೀಕ್ಷಿತ ವಾಗಿತ್ತು. ಬಿಜಾಪುರದಲ್ಲಿ ಕಾಂಗ್ರೆಸ್‌ನ ಎರಡನೇ ದ ಮತಗಳಿಗೆ ಕೈಹಾಕಿದ್ದು ಬಸನಗೌಡ ್ ಯತ್ನಾಳ್. ಹಾಗೇ ಬೆಳಗಾವಿಯಲ್ಲಿ ಇದೇ ವನ್ನು ಕಾಂಗ್ರೆಸ್ ಪ್ರಯೋಗಿಸಿದ್ದರಿಂದಾಗಿ ವಿ, ಬಿಜಾಪುರ, ದಕ್ಷಿಣ ಕನ್ನಡ, ಉತ್ತರ ಳಲ್ಲಿ ಬಿಜೆಪಿ ನೆಲ ಕಚ್ಚಿತ್ತು. ಆ ಮಟ್ಟಿಗೆ ಸಿದ್ದು ರಿಕೆ ಒಂದು ಹಂತಕ್ಕೆ ಯಶಸ್ವಿಗೊಂಡಾಗಿತ್ತು. ದರೆ ಮಂಡ್ಯದ ಕಾಂಗ್ರೆಸ್ ಕಚ್ಚಾಟವಿತ್ತಲ್ಲ, ಅದರ ಜೆಡಿಎಸ್‌ಗಾಯಿತು. ಇತ್ತ ತುಮಕೂರಿನಲ್ಲಿ . ರಾಜಣ್ಣನ ಮಗ ರಾಜೇಂದ್ರನಿಗೆ ಬೇರೆಯದೇ ೀವು ಕಾದಿತ್ತು. ರಾಜಣ್ಣನ ಆಧಿಪತ್ಯದ ವಿರುದ್ಧ ನಲ್ಲೇ ಅಸಹನೆ ಕುದಿಯುತ್ತಿದ್ದದ್ದನ್ನು ಾಗೇ ಗಮನಿಸಿದ್ದ ಸಿದ್ದು ಅದು ಈ ಮಟ್ಟಿಗೆ ಕೊಡುತ್ತದೆಯೆಂದು ನಿರೀಕ್ಷಿಸಿರಲಿಲ್ಲ. ಇತ್ತ ರದಲ್ಲಿ ಸಂಸದ ಮುನಿಯಪ್ಪ ವಿರುದ್ಧ ದ್ದಿದ್ದ ಕಾಂಗ್ರೆಸ್ ಅತೃಪ್ತರಿಗೆ ಜೆಡಿಎಸ್ ವುದರ ಹೊರತಾಗಿ ಅನ್ಯಮಾರ್ಗವಿರಲಿಲ್ಲ. ೂರಿನಲ್ಲಿ ಜೆಡಿಎಸ್ ಗೆಲುವನ್ನು ತ್ತಾದರೂ ಕೋಲಾರ ಮಾತ್ರ ಬಯಸದೇ ಭಾಗ್ಯದಂತೆ ವಶವಾಯಿತು.

ಷ್ಟೆಲ್ಲದರ ಹೊರತಾಗಿಯೂ ಸಿದ್ದು ಚಾಣಾಕ್ಷ ಲ ಕೊಟ್ಟದ್ದೂ ಬಿಜೆಪಿಯನ್ನು ಡಿಯುವಲ್ಲೇ. ದಕ್ಷಿಣ ಕನ್ನಡ, ಉತ್ತರ ಕನ್ನಡ, ರ, ಬೆಳಗಾವಿಗಳಲ್ಲಿ ಬಿಜೆಪಿಗೆ ಗುತ್ತದೆಯೆಂಬ ಸಣ್ಣ ಸುಳಿವು ಕೂಡ ಅದರ ರಿಗಿರಲಿಲ್ಲ. ಎತ್ತಿಂದೆತ್ತ ಲೆಕ್ಕ ಹಾಕಿದರೂ ು ಸ್ಥಾನಗಳಿಸಬೇಕಿದ್ದ ಬಿಜೆಪಿ ಕನಿಷ್ಠ ಹತ್ತು ಲಿ ಕೇವಲ ಆರಕ್ಕೆ ತೃಪ್ತಿ ಪಡಬೇಕಾಯಿತು. ್ ಮತ್ತು ಬಿಜೆಪಿಗಳ ಮಧ್ಯೆ ಕಣ್ಣಾಮುಚ್ಚಾಲೆ ಂಡೇ ಕಮ್ಮಿಯೆಂದರೂ ಆರು ಸ್ಥಾನಗಳಿಸುವ ರದಲ್ಲೇ ದೇವೇಗೌಡರು ಉರುಳಿಸಿದ ದಾಳಕ್ಕೆ ನಾಲ್ಕು ಮಾತ್ರ. ಇದರರ್ಥ ಜೆಡಿಎಸ್ ಏನು ದಿತವಿಟ್ಟುಕೊಂಡಿತ್ತೋ ಅದು ಬೆಳೆಯಲೂ ಯಿಸಲೂ ಇಲ್ಲ.

ಲ್ಲವೆಂದರೂ ಇಪ್ಪತ್ತು ಸ್ಥಾನ ಹಿಡಿದೇ ುತ್ತೇವೆಂದು ಲೆಕ್ಕ ಹಾಕಿದ್ದ ಸಿದ್ದು ನಿರೀಕ್ಷೆಗೆ ನ ಗುಂಪುಗಾರಿಕೆ 'ಒಳಜಗಳ' ಅಸಹನೆಯಿಂದ ಗಿತ್ತೇ ಹೊರತು ಅದಕ್ಕೆ ಜೆಡಿಎಸ್ ಆಗಲಿ ಯಾಗಲಿ ಕಾರಣವಾಗಲೇ ಇಲ್ಲ!

13 ಸ್ಥಾನಗಳೊಂದಿಗೆ ಪರಿಷತ್ತಿನಲ್ಲಿ ದೊಡ್ಡ , ಕಾಂಗ್ರೆಸ್ ಪ್ರಭುತ್ವ ಸ್ಥಾಪಿಸಲಿದೆ. ೂರು ನಗರ ಮತ್ತು ಗ್ರಾಮಾಂತರಗಳಲ್ಲಿ ದ್ದ ಪ್ರಾಬಲ್ಯವನ್ನು ಮುರಿದು, ಯನ್ನಾಕ್ರಮಿಸಿಕೊಂಡಿದ್ದ ಕೇಸರಿ ಹಿಡಿತವನ್ನು ಮಾಡಿ, ಬೆಳಗಾವಿ, ಬಿಜಾಪುರದಿಂದ ಬಿಜೆಪಿ ಗಳನ್ನು ಶಿಥಿಲಗೊಳಿಸಿ ಕಾಂಗ್ರೆಸ್ ಪ್ರಾಬಲ್ಯ ವಲ್ಲಿ ಸಿದ್ದು ಯಶಸ್ವಿಯಾಗಿರುವುದಂತೂ ನಿಚ್ಚಳ. ಮಿಗಿಲಾಗಿ ಜೆಡಿಎಸ್ ಮತ್ತು ಬಿಜೆಪಿ 'ರಹಸ್ಯ ಒಡಂಬಡಿಕೆ'ಗೆ ಮಾಡಿದ ್ದೆಯಲ್ಲ, ಅದು ರಾಜ್ಯದ ರಾಜಕಾರಣದ ೂ ಕಮ್ಮಿಯೇನಲ್ಲ.

■ ರಾ. ಸೋಮನಾಥ್



ಮಂಡ್ಯ- ರೊಕ್ಕಸ್ಥ ಅಪ್ಪಾಜಿಯ ಮುಂದೆ ಶಿವರಾಮು ಘುಲ್ ಸುಸ್ತು!

ಭಾರೀ ಕುತೂಹಲ ಕೆರಳಿಸಿದ್ದ ಮಂಡ್ಯ ವಿಧಾನಪರಿಷತ್ ಚುನಾವಣೆಯಲ್ಲಿ ಜೆಡಿಎಸ್ ಅಭ್ಯರ್ಥಿ ಎನ್.ಅಪ್ಪಾಜಿಗೌಡನ ಹಣದ ಹೊಡೆತಕ್ಕೆ ಮಾಜಿ ಶಾಸಕ ಎಲ್.ಆರ್.ಶಿವರಾಮೇಗೌಡ ಅಕ್ಷರಶಃ ಬಲಿಯಾಗಿದ್ದಾನೆ. ಸುಮಾರು 20 ಕೋಟಿಗೂ ಹೆಚ್ಚು ಹಣವನ್ನು ನೀರಿನಂತೆ ಹರಿಸಿದ ಅಪ್ಪಾಜಿಗೌಡನದು ಗೆಲುವು ಎನ್ನುವುದಕ್ಕಿಂತ ಮತಗಳ ಮೆಘಾ ಖರೀದಿ ಎನ್ನುವುದೇ ಸೂಕ್ತ! ಜೆಡಿಎಸ್ ಅಭ್ಯರ್ಥಿಯಾಗಿ ಅಪ್ಪಾಜಿಗೌಡ 2302 ಮತ ಬುಟ್ಟಿಗೆ ಹಾಕಿಕೊಂಡರೆ ಕಾಂಗ್ರೆಸ್‌ನ ಶಿವರಾಮೇಗೌಡನ ಪಾಲಿಗೆ ಒಲಿದದ್ದು 1660 ಮತ ಮಾತ್ರ. ಅಲ್ಲಿಗೆ, ಚುನಾವಣೆಗೆ ಮುನ್ನ ಗೆದ್ದೇ ಬಿಟ್ಟೆನೆಂದು ಬೀಗುತ್ತಿದ್ದ ಶಿವರಾಮೇಗೌಡ ಬರೋಬ್ಬರಿ 642 ಮತಗಳ ಅಂತರದಿಂದ ಮುಖಕ್ಕೆ ಇಕ್ಕಿಸಿಕೊಂಡಂತಾಗಿದೆ. ಇನ್ನು ಆರಂಭದಿಂದಲೂ ಆಟಕ್ಕೂ ಇಲ್ಲ, ಲೆಕ್ಕಕ್ಕೂ ಇಲ್ಲ ಎನ್ನುವಂತಾಗಿದ್ದ ಬಿಜೆಪಿ ಅಭ್ಯರ್ಥಿ ಕಾಡೇನಹಳ್ಳಿ ನಾಗಣ್ಣ ಗೌಡ ಜುಜುಬಿ 139 ಮತ ಕಟಾವು ಮಾಡಿಕೊಳ್ಳುವ ಹೊತ್ತಿಗೆ ಸುಸ್ತಾಗಿ ಹೋಗಿದ್ದಾನೆ.

ಅಪ್ಪಾಜಿಗೌಡನ ಗೆಲುವು ಮಂಡ್ಯದಲ್ಲಿ ಜೆಡಿಎಸ್‌ನ ಬೇರುಗಳನ್ನು ಮತ್ತಷ್ಟು ಆಳಕ್ಕಿಳಿಸಿದೆ. ಹಾಲಿ ಎಂಎಲ್ಸಿ ಬಿ.ರಾಮಕೃಷ್ಣರನ್ನು ಹಿಂದಿಕ್ಕಿ ದೇವೇಗೌಡ-ಕುಮಾರಸ್ವಾಮಿ ಕೈಗೆ ಭರ್ತಿ ಕಾಸು ಕೊಟ್ಟೇ ಟಿಕೆಟ್ ಖರೀದಿಸಿದ್ದ ಅಪ್ಪಾಜಿಗೌಡ ತಾನು ಸಂಪಾದಿಸಿದ್ದ ಹಡಬೆ ದುಡ್ಡನ್ನು ಚೆಲ್ಲಾಡಿ ಅದ್ದೂರಿಯಾಗಿ ವಿಧಾನಪರಿಷತ್ ಮೆಟ್ಟಿಲು ಹತ್ತಿದ್ದಾನೆ.

ಒನ್ಸ್ ಎಗೇನ್, ಮಂಡ್ಯದ ಕಾಂಗ್ರೆಸ್ ಸೋಲಿಗೆ ಆ ಪಕ್ಷದ ನಾಯಕರೇ ಮುಂಚೂಣಿ ವಹಿಸಿ ಅಡಿಗಲ್ಲು ಹಾಕಿದ್ದಾರೆ. ಜೆಡಿಎಸ್‌ನಲ್ಲಿ ಎದ್ದಿದ್ದ ಭಿನ್ನಮತವನ್ನು ಸಮರ್ಪಕವಾಗಿ ಬಳಸಿಕೊಳ್ಳಲಾಗದ ಕಾಂಗ್ರೆಸ್ಸಿಗರು ಮಂಡ್ಯವನ್ನು ಮತ್ತೆ ಜೆಡಿಎಸ್ ಮಡಿಲಿಗೆ ಹಾಕಿದ್ದಾರೆ. "ಮಂಡ್ಯದಲ್ಲಿ ಕಾಂಗ್ರೆಸ್ ಗೆಲ್ಲಬೇಕಾದರೆ ನನ್ನಿಂದ ಮಾತ್ರವೇ ಸಾಧ್ಯ. ಮೂಟೆಗಳಲ್ಲಿ ಹಣ ತಂದು ಸುರಿಯುತ್ತೇನೆ. ಜೆಡಿಎಸ್ ಅಭ್ಯರ್ಥಿಗಿಂತ ಹೆಚ್ಚು ಹಣ ಖರ್ಚು ಮಾಡುತ್ತೇನೆ" ಎಂದೆಲ್ಲಾ ಬಡಬಡಿಸಿದ್ದ ಶಿವರಾಮೇಗೌಡ ಚುನಾವಣೆ ಹಿಂದಿನ ದಿನ ಅಪ್ಪಾಜಿಗೌಡ ಮತದಾರರಿಗೆ ಹಂಚಿದ ಹಣದ ಸುದ್ದಿ ಕೇಳಿಯೇ ಥಂಡಾ ಹೊಡೆದುಹೋಗಿದ್ದ. ಜೆಡಿಎಸ್ ಅಭ್ಯರ್ಥಿಗಿಂತ ಒಂದು ಪಟ್ಟು ಜಾಸ್ತಿ ಕೊಡುತ್ತೇನೆ ಎಂದಿದ್ದ ಶಿವರಾಮೇಗೌಡ ತಾನು ಕೊಟ್ಟ 25 ಸಾವಿರ ಹಣವನ್ನು ತನ್ನದೇ ಪಕ್ಷದ ಜನಪ್ರತಿನಿಧಿಗಳಿಗೆ ಸಮರ್ಪಕವಾಗಿ ಯಾವಾಗ ಮುಟ್ಟಿಸಲಿಲ್ಲವೋ ಆಗಲೇ ಈ ಬಾರಿಯ ಚುನಾವಣೆ ಫಲಿತಾಂಶ ಜೆಡಿಎಸ್‌ನ ಅಪ್ಪಾಜಿಗೌಡನ ಪರವಾಗಿಯೇ ಇರುತ್ತದೆಂದು ನಿರ್ಧಾರವಾಗಿಬಿಟ್ಟಿತ್ತು. ಶಿವರಾಮೇಗೌಡನ ಅಬ್ಬರವೆಲ್ಲಾ ಉತ್ತರ ಕುಮಾರನ ಪೌರುಷದಂತೆ ನಗೆಪಾಟಲಿಗೆ ಈಡಾಗಿದೆ. ಪ್ರತಿಯೊಬ್ಬ ಜೆಡಿಎಸ್ ಸದಸ್ಯರಿಗೆ ನಿಗದಿತ ಸಮಯದಲ್ಲಿ ಸರಿಯಾಗಿ ಹಣ ಮುಟ್ಟಿಸಿದ ಅಪ್ಪಾಜಿಗೌಡ, ಕಾಂಗ್ರೆಸ್‌ನ ಅತೃಪ್ತ ಮುಖಂಡರ ಮೂಲಕ ಕಾಂಗ್ರೆಸ್ ಹಾಗೂ ಪಕ್ಷೇತರ ಸದಸ್ಯರಿಗೆ ಕೈತುಂಬಾ ಹಣ ಕೊಟ್ಟು ಗೆಲುವು ಸಾಧಿಸಿದ್ದಾನೆ.

ಇದಕ್ಕಿಂತಲೂ ಮುಖ್ಯವಾಗಿ, ರಾಮಕೃಷ್ಣರಿಗೆ ಟಿಕೆಟ್ ತಪ್ಪಿದ ಕಾರಣಕ್ಕೆ ಆರಂಭದಲ್ಲಿ ಮುನಿಸಿಕೊಂಡಿದ್ದ ಚಲುವರಾಯಸ್ವಾಮಿ ಮತ್ತಿತರ ನಾಯಕರು ಕೊನೇಕ್ಷಣದಲ್ಲಿ ತಮ್ಮೆಲ್ಲ ಭಿನ್ನಾಭಿಪ್ರಾಯವನ್ನು ಬದಿಗೊತ್ತಿ ಪಕ್ಷಕ್ಕಾಗಿ ದುಡಿದದ್ದೇ ಅಪ್ಪಾಜಿಗೌಡನ ಗೆಲುವಿನ ಹೈಲೈಟು!

ಅಪ್ಪಾಜಿ ಗೌಡನ ಮ್ಯಾಜಿಕ್ 'ನೈನ್'

ಜೆಡಿಎಸ್ ಅಭ್ಯರ್ಥಿ ಅಪ್ಪಾಜಿಗೌಡ ಸಂಖ್ಯಾಶಾಸ್ತ್ರದ ಮೊರೆಹೋಗಿ ಅದರಂತೆ ಮತದಾರರಿಗೆ ಹಣದ ಕಾಣಿಕೆ ಅರ್ಪಿಸಿದ್ದು ವಿಶೇಷವಾಗಿತ್ತು. ಸಂಖ್ಯೆ 9 ಬರುವಂತೆ ಹಣ ಹಂಚಿದರೆ ಗೆಲ್ಲುವ ಛಾನ್ಸ್ ಜಾಸ್ತಿ ಎಂದು ಅದ್ಯಾವ ಪುಣ್ಯಾತ್ಮ ಸಲಹೆ ಕೊಟ್ಟನೋ ಅಪ್ಪಾಜಿಗೌಡ ಅದರಂತೆಯೇ ನಡೆದುಕೊಂಡಿದ್ದಾನೆ. ಬಹುಶಃ ಮಾಟ-ಮಂತ್ರ, ಹೋಮ-ಹವನಗಳಲ್ಲಿ ಬಹಳ ನಂಬಿಕೆ ಇರುವ ದೇವೇಗೌಡರೇ ಇಂತಹದ್ದೊಂದು ಸಲಹೆ ಕೊಟ್ಟಿರಬಹುದೇನೊ. ಅಪ್ಪಾಜಿಗೌಡ ಗ್ರಾಮ ಪಂಚಾಯತಿ ಸದಸ್ಯರಿಗೆ 36 ಸಾವಿರ ರೂಪಾಯಿ (3+6=9), ತಾಲ್ಲೂಕು ಪಂಚಾಯತಿ ಸದಸ್ಯರಿಗೆ 45 ಸಾವಿರ (4+5=9), ಜಿಲ್ಲಾ ಪಂಚಾಯತಿ ಸದಸ್ಯರಿಗೆ 81 ಸಾವಿರ (8+1=9), ಪಟ್ಟಣ ಪಂಚಾಯತಿ, ಪುರಸಭೆ ಸದಸ್ಯರಿಗೆ 54 ಸಾವಿರ (5+4=9) ಹಾಗೂ ನಗರಸಭೆ ಸದಸ್ಯರಿಗೆ 63 ಸಾವಿರ (6+3=9) ರೂಪಾಯಿಯಂತೆ ಹಣ ಹಂಚಿದ್ದ. ಜೊತೆಗೆ ತಾನು ಹಣ ತಲುಪಿಸಿದ್ದ ಪ್ಯಾಕೆಟ್ ಮೇಲೆ ಧರ್ಮಸ್ಥಳ ಮಂಜುನಾಥಸ್ವಾಮಿಯ ಫೋಟೋ ಹಾಗೂ ಕುಂಕುಮ ಹಾಕುವುದನ್ನು ಮರೆತಿರಲಿಲ್ಲ. ಇನ್ನು ಅದ್ಯಾವ 'ಮೆಂಬ್ರು' ತಾನೇ ದೇವರ ಫೋಟೊಕ್ಕೆ, ಕುಂಕುಮಕ್ಕೆ (ಅದರಲ್ಲೂ ದೇವೇಗೌಡರ ಪಾರ್ಟಿಯಿಂದ ಬಂದ) ದ್ರೋಹ ಬಗೆಯುವ ಧೈರ್ಯ ತೋರಿಯಾನು? ಮತದಾನದ ಹಿಂದಿನ ಸಂಜೆಯಿಂದ ಬೆಳಗಿನ ಜಾವದವರೆಗೂ ಹಣದ ಪ್ಯಾಕೆಟ್‌ಗಳು ಬಟವಾಡೆಗೊಳ್ಳುತ್ತಲೇ ಇದ್ದವು.


ವಿರೋಧ ಪಕ್ಷದ ಪಾಳಯಕ್ಕೂ ನುಗ್ಗಿದ ಅಪ್ಪಾಜಿಗೌಡ ಕಾಂಗ್ರೆಸ್ ಅತೃಪ್ತ ಮುಖಂಡರ ಕೈಗೆ ಭರ್ತಿ ಹಣ ತುಂಬಿದ್ದ. ಎಸ್.ಎಂ.ಕೃಷ್ಣರ ಬಣಕ್ಕೆ, ಅಂಬಿ ಬಣದ ಶಿವರಾಮೇಗೌಡನನ್ನು ಗೆಲ್ಲಿಸಿಕೊಳ್ಳುವ ಹಕೀಕತ್ತು ಇರಲಿಲ್ಲ. ಶಿವರಾಮೇಗೌಡನ ಸೋಲಿನಲ್ಲಿ ಎಸ್.ಎಂ. ಕೃಷ್ಣರ ಬಣದ್ದೇ ಪ್ರಮುಖ ಪಾತ್ರ ಎನ್ನಬಹುದು. ಚುನಾವಣೆ ಹಿಂದಿನ ದಿನ ಮಾಜಿ ಸಂಸದೆ ರಮ್ಯಾ ಮುಖ್ಯಮಂತ್ರಿ ಸಿದ್ದರಾಮಯ್ಯನವರ ನಿವಾಸಕ್ಕೆ ತೆರಳಿ ಶಿವರಾಮೇಗೌಡನ ವಿರುದ್ಧ ಅತೃಪ್ತಿ ಕಾರಿಕೊಂಡಾಗಲೆ ಕೃಷ್ಣ ಬಣ ಶಿವರಾಮೇಗೌಡನ ಪರ ನಿಲ್ಲುವುದಿಲ್ಲ ಎಂಬ ಮುನ್ಸೂಚನೆ ಸಿಕ್ಕಿಬಿಟ್ಟಿತ್ತು. ಕೃಷ್ಣ ಬಣದ ಗುರುಚರಣ್, ಬಿ.ಸಿ.ಶಿವಾನಂದ, ಎಂ.ಕೆ.ಸೋಮಶೇಖರ್, ಎಚ್.ಪಿ.ಮಹೇಶ್ ಮೊದಲಾದವರು ಒಳಗೊಳಗೆ ಶಿವರಾಮೇಗೌಡನ ವಿರುದ್ಧ ಕೆಲಸ ಮಾಡಿದರು. ಕಾಂಗ್ರೆಸ್ ಹಾಗೂ ಪಕ್ಷೇತರ ಸದಸ್ಯರಲ್ಲಿ ಅನೇಕರು ಚುನಾವಣೆಯ ಹಿಂದಿನ ದಿನ ಮಾಜಿ ಎಂಎಲ್ಸಿ ಕೆ.ಟಿ.ಶ್ರೀಕಂಠೇಗೌಡನ ಮನೆಯಲ್ಲಿ ಕಾಣಿಸಿಕೊಂಡು ಹಣದ ಪ್ಯಾಕೆಟ್ ಪಡೆದು ಹಿಂತಿರುಗುತ್ತಿದ್ದರು.

ಜೆಡಿಸ್ ಅಭ್ಯರ್ಥಿ ಅಪ್ಪಾಜಿಗೌಡ ಎಷ್ಟು ಹಣ ಕೊಡುತ್ತಾನೋ ಅದಕ್ಕೆ 5 ಸಾವಿರ ಸೇರಿಸಿ ಕೊಡುತ್ತೇನೆ ಎಂದಿದ್ದ ಶಿವರಾಮೇಗೌಡ ಗಂಟು ಬಿಚ್ಚಲೇ ಇಲ್ಲ. ಶಿವರಾಮೇಗೌಡ ಕೊಟ್ಟ 25 ಸಾವಿರ ರೂಪಾಯಿ ಕೂಡಾ ಶೇ.25-30ರಷ್ಟು ಮತದಾರರಿಗೆ ತಲುಪಲೇ ಇಲ್ಲ.

ಶಿವರಾಮೇಗೌಡನಿಗೆ ಶಾಶ್ವತ ಮುಕ್ತಿ!

ಜೆಡಿಎಸ್ ಅಭ್ಯರ್ಥಿ ಆಯ್ಕೆಯಲ್ಲಿನ ಗೊಂದಲವೇ ತನ್ನನ್ನು ಗೆಲುವಿನ ದಡ ಸೇರಿಸಬಹುದು ಎಂದು ಚುನಾವಣೆಗೂ ಆರಂಭದಲ್ಲೇ ಹೇಳಿಕೊಂಡು ಬೀಗುತ್ತಿದ್ದ ಶಿವರಾಮೇಗೌಡ ಜೆಡಿಎಸ್ ಛದ್ರಕೋಟೆ ಛಿದ್ರ ಮಾಡುತ್ತೇನೆ ಎನ್ನುತ್ತಿದ್ದ. ಆದರೆ ಮುಂಬರುವ ಜಿ.ಪಂ., ತಾ.ಪಂ. ಚುನಾವಣೆಯ ಟಿಕೆಟ್ ಬೇಕಿದ್ದರೆ ಜೆಡಿಎಸ್ ಅಭ್ಯರ್ಥಿ ಅಪ್ಪಾಜಿಗೌಡನನ್ನು ಗೆಲ್ಲಿಸಿಕೊಂಡು ಬರಲೇಬೇಕೆಂದು ದೊಡ್ಡಗೌಡರು ಬೆದರಿಕೆ ಹಾಕಿದ್ದೇ ತಡ ಚಲುವರಾಯಸ್ವಾಮಿ ಮೊದಲ್ಗೊಂಡು ಬಂಡಾಯ ಶೂರರೆಲ್ಲಾ ಬೆಂಡಾಗಿಹೋಗಿದ್ದರು. ಬಹುಶಃ ಶಿವರಾಮೇಗೌಡನಿಗಿಂತ ಬೇರೆ ಯಾರೇ ಕಾಂಗ್ರೆಸ್ ಅಭ್ಯರ್ಥಿಯಾಗಿದ್ದು ಹಣ ಚೆಲ್ಲಿದ್ದರೆ ಕಾಂಗ್ರೆಸ್ ಬಾವುಟ ಹಾರಿಸಬಹುದಿತ್ತೇನೊ. ಆದರೆ ಬಾಯಿಬಡುಕ, ತಾನು ಏನು ಹೇಳುತ್ತಿದ್ದೇನೆ ಎಂಬ ಅರಿವೂ ಇಲ್ಲದೆ ನಾಲಿಗೆ ಹರಿಬಿಡುವ ಶಿವರಾಮೇಗೌಡ ಕಾಂಗ್ರೆಸ್ ಅಭ್ಯರ್ಥಿಯಾದನೋ ಅಂದೇ ಕಾಂಗ್ರೆಸ್‌ನ ರವೀಂದ್ರ ಶ್ರೀಕಂಠಯ್ಯ, ಜಿ.ಮಾದೇಗೌಡ ಸೇರಿದಂತೆ ಹಲವರು ಅಪಸ್ವರ ಎತ್ತಿದ್ದರು. ಆಗಬಹುದಾದ ಯಡವಟ್ಟನ್ನು ಗಮನಿಸಿದ ಸಿಎಂ ಸಿದ್ದರಾಮಯ್ಯ ಖುದ್ದು ಪವರ್ ಮಿನಿಸ್ಟರ್ ಡಿ.ಕೆ.ಶಿ. ಹೆಗಲಿಗೆ ಮಂಡ್ಯ ಉಸ್ತುವಾರಿ ಹೊರಿಸಿ ಕಳಿಸಿದ್ದರು. ಮೇಲ್ನೋಟಕ್ಕೆ ಡಿಕೆಶಿ ಸಾರಥ್ಯದಲ್ಲಿ ಅಂಬಿ-ಕೃಷ್ಣ ಬಣಗಳು ಒಂದುಗೂಡಿದಂತೆ ತೋರಿಸಿಕೊಂಡರು ಒಳಗೊಳಗೆ ಶಿವರಾಮೇಗೌಡನ ವಿರುದ್ಧ ಭರ್ಜರಿಯಾಗೇ ಕತ್ತಿ ಮಸೆದಿದ್ದರು. ಅಂಬಿ ಬಲಗೈ ಭಂಟ ಅಮರಾವತಿ ಚಂದ್ರಶೇಖರ್, ಸಚ್ಚಿದಾನಂದ ಹಾಗೂ ಮಾವ ಶೆಟ್ಟಹಳ್ಳಿ ಲಿಂಗರಾಜನ ಕೈಗೆ ಶಿವರಾಮೇಗೌಡ ಕೊಟ್ಟ ಹಣದ ಗಂಟನ್ನು ಅವರು ಬಿಚ್ಚಲೇ ಇಲ್ಲ.

ಇದ್ದುದ್ದರಲ್ಲಿ ಶಾಸಕ ಪಿ.ಎಂ.ನರೇಂದ್ರಸ್ವಾಮಿಯ ಮಳವಳ್ಳಿಯ ಬಿಟ್ಟರೆ ಬೇರೆ ತಾಲ್ಲೂಕುಗಳಲ್ಲಿ ಕಾಂಗ್ರೆಸ್ ಅಭ್ಯರ್ಥಿಗೆ ಒಳೇಟು ಬಿದ್ದಿರುವುದೇ ಜಾಸ್ತಿ. ಒಂದು ವೇಳೆ ಯಾವ ತಾಲ್ಲೂಕಿನಲ್ಲಿ ಎಷ್ಟೆಷ್ಟು ಮತ ಬಿದ್ದಿದೆ ಎಂಬುದು



ಜೆಡಿಎಸ್ ನಾಯಕರೊಂದಿಗೆ ಗೆಲುವಿನ ಸಿಹಿ ಸವಿಯುತ್ತಿರುವ ಅಪ್ಪಾಜಿಗೌಡ

ಗೊತ್ತಿದ್ದರೆ ಯಾರು ಪಕ್ಷದ ಅಭ್ಯರ್ಥಿ ಪರ ಕೆಲಸ ಮಾಡಿದ್ದಾರೆ, ಯಾರು ವಿರುದ್ಧ ಮಾಡಿದ್ದಾರೆ ಎಂಬುದನ್ನು ಊಹಿಸಬಹುದಿತ್ತು. ಆದರೆ ಅಂತಹ ಅವಕಾಶ ಈ ಚುನಾವಣೆಯಲ್ಲಿ ಇಲ್ಲದಿರುವುದರಿಂದ ಒಳೇಟು ನೀಡಿರುವವರು ಯಾವ ಮುಜುಗರವೂ ಇಲ್ಲದೆ ಕೈಜೋಡಿಸಿದ್ದಾರೆ. ಹುಚ್ಚ ಮದುವೆಯಲ್ಲಿ ಉಂಡೋನೆ ಜಾಣ ಎಂಬಂತೆ ಅತ್ತ ಶಿವರಾಮೇಗೌಡನಿಂದ ಹಣ ನುಂಗಿದ ಹಲವು ಕಾಂಗ್ರೆಸ್ ನಾಯಕರು ಇತ್ತ ಜೆಡಿಎಸ್‌ನ ಅಭ್ಯರ್ಥಿ ಅಪ್ಪಾಜಿಗೌಡನಿಂದಲೂ ಭರ್ತಿ ದುಡ್ಡು ಸುಲಿದು ಶಿವರಾಮೇಗೌಡ ಶಾಶ್ವತವಾಗಿ ಮನೆ ಸೇರುವಂತೆ ಮಾಡಿದ್ದಾರೆ. ಬಾಯಿಬಡುಕ ಶಿವರಾಮೇಗೌಡನಿಗೆ ಇಂತಹದ್ದೊಂದು ಶಾಸ್ತಿ ಆಗಲೇಬೇಕಿತ್ತು ಬಿಡಿ.

ಕಳೆದ 18 ವರ್ಷಗಳಿಂದ ಅಧಿಕಾರವಿಲ್ಲದೆ ಪರಿತಪಿಸುತ್ತಿದ್ದೇನೆ. ಈ ಚುನಾವಣೆಯಲ್ಲಾದರೂ ಗೆಲ್ಲಿಸಿ ಮುಕ್ತಿ ನೀಡಿ ಎಂದು ಅಂಗಲಾಚಿದ್ದ ಶಿವರಾಮೇಗೌಡನಿಗೆ ಮತದಾರರು ಭರ್ಜರಿ ಮುಕ್ತಿಯನ್ನೇ ದಯಪಾಲಿಸಿದ್ದಾರೆ. ಇನ್ನು ಮೇಲಾದರು ಶಿವರಾಮೇಗೌಡ ಚುನಾವಣೆಗಳ ಉಸಾಬರಿ ಬಿಟ್ಟು ತನ್ನ ಒಡೆತನದ ರಾಯಲ್ ಕಾನ್‌ಕಾರ್ಡ್ ಶಾಲೆಯ ದೇಖಾರೇಖಿ ನೋಡಿಕೊಂಡು ತೆಪ್ಪಗಿರುವುದು ಕ್ಷೇಮ.

● ವರದಿಗಾರ

ಪತ್ರಿಕಾಧರ್ಮ

ಭಾರತದಲ್ಲಿ ಯಾವುದೇ ವಿಚಾರ ಹೇಳಬೇಕೆಂದರೂ ಧರ್ಮ ತಟ್ಟನೆ ನಮ್ಮ ಮುಂದೆ ಬಂದು ನಿಲ್ಲುತ್ತದೆ. ಧರ್ಮ ಎಂಬುದು ಗುಣಲಕ್ಷಣ, ಮೌಲ್ಯ, ದಯೆ, ದಾನಧರ್ಮ, ನ್ಯಾಯ, ಒಳ್ಳೆಯ ನಡವಳಿಕೆ, ಮಾಡಬೇಕಾದ ಕರ್ತವ್ಯ ಜೀವನವಿಧಾನ, ಧಾರಣಶಕ್ತಿ ನ್ಯಾಯ ಇತ್ಯಾದಿ ಅರ್ಥಗಳನ್ನೂ ಸ್ಫುರಿಸುತ್ತದೆ. ವಿಜ್ಞಾನದಲ್ಲಿ ಕೂಡ ವಸ್ತುವಿನ ಲಕ್ಷಣಗಳಿಗೆ ಸಂಬಂಧಿಸಿದಂತೆ ಗುಣಧರ್ಮ ಪದ ಬಳಸಲಾಗುತ್ತಿದೆ. ನೀರಿನ ಗುಣಧರ್ಮ, ಬೆಂಕಿಯ ಗುಣಧರ್ಮ ಇತ್ಯಾದಿ. ಪತ್ರಿಕಾಧರ್ಮ ಎಂಬುದು ಪತ್ರಿಕೆಗಳಿಗೆ ಇರಬೇಕಾದ ಮೌಲ್ಯಗಳನ್ನು ಸೂಚಿಸುತ್ತದೆ.

ಜನಸಮುದಾಯದ ಹಿತವನ್ನು ಕಾಪಾಡುವುದೇ ಪತ್ರಿಕೆಗಳ ಬಹುದೊಡ್ಡ ಮೌಲ್ಯವಾಗಿದೆ. ಜನಸಮುದಾಯ ಪದ ಎಲ್ಲ ಧರ್ಮಗಳನ್ನು, ಜನಾಂಗಗಳನ್ನು, ಪ್ರಾಂತೀಯ ವೈಶಿಷ್ಟ್ಯಗಳನ್ನು, ಭಾಷೆಗಳನ್ನು, ಜಾತಿ, ವರ್ಣ ಮತ್ತು ವರ್ಗಗಳನ್ನು ಮತ್ತು ಏನನ್ನು ಬರೆಯಬೇಕು, ಏನನ್ನು ಬರೆಯಬಾರದು, ಬರೆದರೆ ಹೇಗೆ ಬರೆಯಬೇಕು ಎಂಬುದನ್ನು ಒಳಗೊಂಡಿರುತ್ತದೆ.

ಹೀಗೆ ಪತ್ರಕರ್ತನಾದವನು ತನ್ನದು ಪತ್ರಿಕಾಧರ್ಮ ಎಂಬುದನ್ನು ಅರಿತುಕೊಂಡು ಆ ಧರ್ಮವನ್ನು ಪಾಲಿಸಲೇಬೇಕು ಎಂಬ ಛಲವನ್ನು ಹೊಂದಿದಾಗ ಮಾತ್ರ ಪತ್ರಿಕಾರಂಗ ತನ್ನ ಘನತೆಯನ್ನು ಉಳಿಸಿಕೊಳ್ಳಲು ಸಾಧ್ಯ.


ಪತ್ರಕರ್ತನಾಗುವುದೆಂದರೆ ಸಿನಿಮಾಗಳಲ್ಲಿ ಮತ್ತು ಟಿ.ವಿ. ಧಾರಾವಾಹಿಗಳಲ್ಲಿ ಪತ್ರಕರ್ತರ ಪಾತ್ರದಲ್ಲಿ ತೋರಿಸುವ ನಾಯಕ, ನಾಯಕಿಯರಾಗುವುದಲ್ಲ, ಪತ್ರಕರ್ತನಾದವನು ಎಂದಿಗೂ ತಾನೊಬ್ಬ ಬೇರೆಯವರಿಗಿಂತ ದೊಡ್ಡ ಮನುಷ್ಯ ಎಂದು ಭಾವಿಸಬಾರದು. ಏಕೆಂದರೆ ಅದೇ ಅವನ ಅವನತಿಗೆ ಕಾರಣವಾಗುತ್ತದೆ. ತಾನು ಬೇರೆಯವರಿಗಿಂತ ಭಿನ್ನ ಎಂಬ ಮನೋರೋಗ ಪತ್ರಕರ್ತರಿಗೆ ಬಹುಬೇಗ ಬಡಿಯುತ್ತದೆ. ಆ ರೋಗನಿರೋಧಕ ಶಕ್ತಿಯನ್ನು ಪತ್ರಕರ್ತರು ಹೊಂದುವುದು ಅವಶ್ಯವಾಗಿದೆ. ಇದುವೆ ಪತ್ರಕರ್ತನ ಮೊದಲ ಸಾಧನೆ ಎಂದು ಪತ್ರಕರ್ತರು ಭಾವಿಸಬೇಕು. ಪತ್ರಿಕಾರಂಗದಲ್ಲಿ ಯಾವುದೇ ವೀರೋಚಿತ ಸಾಹಸ ಮಾಡಬೇಕಿಲ್ಲ, ಪತ್ರಕರ್ತನೊಬ್ಬನ ತನಿಖಾ ವರದಿಯೊಂದು ಪ್ರಕಟಗೊಂಡಾಗ ಜನ ಹಾಗೆ ಭಾವಿಸುವುದು ಸ್ವಾಭಾವಿಕವಾದರೂ ಅದೇನು ಸಾಹಸವಲ್ಲ ಎಂಬ ಮನೋಭಾವವನ್ನು ಪತ್ರಕರ್ತ ಹೊಂದುವುದು ಆತನ ವೃತ್ತಿಪಾವಿತ್ರ್ಯದ ರಕ್ಷಣೆಗೆ ಅವಶ್ಯವಾಗಿದೆ.

ಪತ್ರಕರ್ತ ಕೆಲವೊಂದು ಸಲ ತನ್ನ ಬದುಕನ್ನೇ ಪಣಕ್ಕಿಟ್ಟು ಸುದ್ದಿಯನ್ನು ಸಂಗ್ರಹಿಸಬೇಕಾಗುವುದು. ಅಂಥ ಪ್ರಸಂಗದಲ್ಲಿ ಪತ್ರಿಕಾ ಮಾಲೀಕರ ಮತ್ತು ಸಂಪಾದಕರ ಸಹಾಯ ಕೋರುತ್ತ ಕೂಡುವ ಸಮಯ ಅದಾಗಿರುವುದಿಲ್ಲ, ಹಾಗೆ ಸಹಾಯ ಬಯಸಿದರೂ ಸಿಗುವ ಸಾಧ್ಯತೆಗಳಿರುವುದಿಲ್ಲ, ವರದಿಗಾರ ಸುದ್ದಿಯನ್ನು ತರುವ ಕೂಲಿಯಂತಾಗಬಾರದು. ರಾಜಕಾರಣಿಗಳು, ಅಧಿಕಾರಿಗಳು ಭಾಷಣಗಳಲ್ಲಿ ಪತ್ರಿಕಾಗೋಷ್ಠಿಯಲ್ಲಿ ಹೇಳಿದರು, ಕೇಳಿದರು, ನುಡಿದರು, ಕರೆನೀಡಿದರು, ಅಭಿಪ್ರಾಯ ವ್ಯಕ್ತಪಡಿಸಿದರು ಎಂಬುದು ಮಾತ್ರ ವರದಿಗಾರಿಕೆಯಾಗುವುದಿಲ್ಲ, ಜನರು, ಸಂಘಟನೆಗಳು ಮತ್ತು ಸರ್ಕಾರ ಕೊಡುವ ಪತ್ರಿಕಾ ಪ್ರಕಟಣೆಗಳ ಮೇಲೆಯೆ ಅವಲಂಬಿತವಾಗುವುದು ಸಲ್ಲದು. ಜನಸಮುದಾಯದೊಳಗಿನ ವೈವಿಧ್ಯ ಮತ್ತು ವೈರುಧ್ಯಗಳನ್ನು ಮಾನವೀಯ ದೃಷ್ಟಿಯಿಂದ ನೋಡುತ್ತಲೇ ಎಲ್ಲ ಜಾತಿ ಜನಾಂಗಗಳಲ್ಲಿ ಅನ್ಯಾಯಕ್ಕೊಳಗಾಗುವವರ, ಬಡವರ, ಅಸಹಾಯಕ ಹೆಣ್ಣುಮಕ್ಕಳ ಮತ್ತು ಮಕ್ಕಳ ಪಕ್ಷಪಾತಿಗಳಾಗುವುದು ಪತ್ರಿಕಾ ಧರ್ಮವನ್ನು ಎತ್ತಿಹಿಡಿಯುವ ಕ್ರಮವಾಗಿದೆ. ಆದ್ದರಿಂದ ಪತ್ರಕರ್ತ ಉದಾತ್ತ ಮಾನವನಾಗದೆ ಬೇರೆ ದಾರಿಯಿಲ್ಲ.

ಜಾತಿ ಮತ್ತು ಕೋಮುಘರ್ಷಣೆ, ಧನಪಿಪಾಸು ರಾಜಕಾರಣಿಗಳು, ರಾಜಕೀಯ ಪಕ್ಷಗಳ ವೈರುಧ್ಯ, ಜಮೀನುದಾರರ ಅಟ್ಟಹಾಸ, ಉದ್ದಿಮೆಪತಿಗಳ ಭೂಕಬಳಿಕೆ, ಅವರ ಕಾರ್ಖಾನೆಗಳಿಂದಾಗುವ ಭೂ, ಜಲ ಹಾಗೂ ವಾಯುಮಾಲಿನ್ಯ, ಜನರ ಆರ್ಥಿಕ ಸ್ಥಿತಿಯ ಮೇಲೆ ಮತ್ತು ಅವರ ಆರೋಗ್ಯದ ಮೇಲೆ ಆಗುವ ದುಷ್ಪರಿಣಾಮ, ಒಂದು ಪ್ರದೇಶದ ಜನ ಅನುಭವಿಸುವ ಸಾಮೂಹಿಕ ಸಮಸ್ಯೆಗಳು ಮುಂತಾದ ಪ್ರಸಂಗಗಳಲ್ಲಿ ಪತ್ರಕರ್ತನಾದವನು ಸಾಮಾಜಿಕ ಹಿತವನ್ನು ದೃಷ್ಟಿಯಲ್ಲಿಟ್ಟುಕೊಂಡೇ ಬರೆಯಬೇಕಾಗುತ್ತದೆ. ಒಂದು ಸುದ್ದಿಯನ್ನು ಪ್ರಕಟಿಸುವುದು ಎಷ್ಟು ಜವಾಬ್ದಾರಿಯುತವೋ, ಜನಹಿತ ಮತ್ತು ದೇಶದ ಹಿತದೃಷ್ಟಿಯಿಂದ ಕೆಲವೊಂದು ಸುದ್ದಿಗಳನ್ನು ಪ್ರಕಟಿಸದೆ ಇರುವುದು ಕೂಡ ಅಷ್ಟೇ ಜವಾಬ್ದಾರಿಯುತವಾಗಿರುತ್ತದೆ. ಪತ್ರಕರ್ತನಾದವನು ಎಲ್ಲ ಕ್ಷೇತ್ರಗಳಲ್ಲಿನ ಒಳ್ಳೆಯವರನ್ನು ಗುರುತಿಸಬೇಕಾಗುತ್ತದೆ. ಕೋಮುಗಲಭೆಗಳಿಂದ ಮತ್ತು ಜಾತಿಸಂಘರ್ಷಗಳಿಂದ ಜನಸಮುದಾಯವನ್ನು ಪಾರುಮಾಡಲು ಸರ್ವಸಮಾಜಗಳಲ್ಲಿನ ಒಳ್ಳೆಯದನ್ನು ಬಿಂಬಿಸುವ ಪರಂಪರೆ, ಆಚರಣೆ, ಉದಾತ್ತ ವಿಚಾರಗಳು ಮತ್ತು ವ್ಯಕ್ತಿಗಳ ಮೇಲೆ ಬೆಳಕು ಚೆಲ್ಲಬೇಕಾಗುತ್ತದೆ.

ಒಂದು ಪ್ರಾಯೋಗಿಕ ವಿಶ್ಲೇಷಣೆ

ಭಟ್ಕಳದಲ್ಲಿ 1993ನೇ ಏಪ್ರಿಲ್ 1 ರ



ಹನುಮಜಯಂತಿಯಂದು ಆರಂಭವಾದ ಕೋಮುಗಲಭೆ ಒಂದು ವರ್ಷದವರೆಗೆ ಮುಂದುವರಿಯಿತು. ಸ್ವಾತಂತ್ರ್ಯಾನಂತರ 35 ಸಾವಿರಕ್ಕೂ ಹೆಚ್ಚು ಕೋಮುಗಲಭೆಗಳಾಗಿವೆ. ಎಲ್ಲ ಕೋಮುಗಲಭೆಗಳಂತೆ ಇದು ಕೂಡ ಕ್ಷುಲ್ಲಕ ಕಾರಣಕ್ಕಾಗಿಯೇ ಆರಂಭವಾಯಿತು.


ಅಂದು ಹನುಮಜಯಂತಿ ಪ್ರಯುಕ್ತ ರಥೋತ್ಸವ ನಡೆದ ವೇಳೆ ಮುಸ್ಲಿಮರೊಬ್ಬರ ಮನೆಯ ಹಿಂದಿನಿಂದ ಎಸೆದ ಮೂರು ಕಲ್ಲುಗಳು ರಥದ ಮೇಲೆ ಬಿದ್ದವು ಎಂಬ ನೆಪದೊಂದಿಗೆ ಗಲಭೆ ಆರಂಭವಾಯಿತು.

ಅಂದು ರಾತ್ರಿ ಅಮಾಯಕರ ಮೇಲೆ ಹಲ್ಲೆಗಳು ನಡೆದವು. ಪ್ರಾರ್ಥನಾ ಸ್ಥಳಗಳು ಮತ್ತು ಪೂಜಾಸ್ಥಳಗಳ ಮೇಲೆಯೂ ದಾಳಿ ಮಾಡಲಾಯಿತು. ಈ ಗಲಭೆಯಿಂದಾಗಿ ಎರಡೂ ಕಡೆಗಳಲ್ಲಿ ಹತ್ತು ಹತ್ತು ಜನ ಬಡವರು ಸತ್ತರು. ಪ್ರಾರ್ಥನಾ ಸಮುದಾಯದವರ ನೂರಾರು ಎಕರೆ ತೆಂಗಿನತೋಟಗಳನ್ನು ನೆಲಸಮಗೊಳಿಸಲಾಯಿತು. ಒಂದೇ ಪಟ್ಟಣದ ಜನರ ಮಧ್ಯೆ ತಮ್ಮ ತಮ್ಮ ಜಾತಿ, ಧರ್ಮಗಳ ಹಿನ್ನೆಲೆಯಲ್ಲಿ ಅಪನಂಬಿಕೆ, ಭಯ, ಆತಂಕಗಳು ಮನೆ ಮಾಡಿದವು. ಪರದೆಯ ಹಿಂದಿರುವ ಮಹಿಳೆಯರ ಮೇಲೆ ಅತ್ಯಾಚಾರಗಳಾದವು. ಭಟ್ಕಳದ ಹೂವಿನ ಚೌಕದಲ್ಲಿ ಹಗಲು ಹೊತ್ತಿನಲ್ಲೇ ಖಡ್ಗಗಳನ್ನು ಝಳಪಿಸುತ್ತ ಬಂದ ಗುಂಪೊಂದು ಭಯೋತ್ಪಾದನೆಯ ವಾತಾವರಣ ಸೃಷ್ಟಿಸಿತು. ಪಟ್ಟಣದ ಹೊರವಲಯದಲ್ಲಿನ ಬಡವರ ಮನೆಗಳಿಗೆ ಬೆಂಕಿ ಹಚ್ಚಲಾಯಿತು. ಆ ಬಡವರು ಎಲ್ಲ ಧರ್ಮಗಳಿಗೆ ಸೇರಿದವರಾಗಿದ್ದರು. ಅವರ ಸುಟ್ಟ ಮನೆಗಳ ಗೋಡೆಗಳ ಮೇಲೆ ಲಕ್ಷ್ಮೀ, ಗಣಪತಿ, ಜೀಸಸ್, ಕಾಬಾ, ಅಜಮೇರ್ ದರ್ಗಾ ಮುಂತಾದ ಕ್ಯಾಲೆಂಡರ್‌ಗಳು ನೇತಾಡುತ್ತಿದ್ದವು. ಎಲ್ಲ ಧರ್ಮಗಳ ಬಡವರು ದುಷ್ಕರ್ಮಿಗಳ ಅಮಾನುಷ ಕೃತ್ಯದಿಂದಾಗಿ ಎಲ್ಲವನ್ನೂ ಕಳೆದುಕೊಂಡು ಅಸಹಾಯಕರಾಗಿದ್ದರು.

ಅರಬರು ಸಾವಿರ ವರ್ಷಗಳ ಹಿಂದೆ ಮೆಣಸು ಮುಂತಾದ ಸಾಂಬಾರ ಪದಾರ್ಥಗಳ ವ್ಯಾಪಾರಕ್ಕಾಗಿ ಪಶ್ಚಿಮ ಕರಾವಳಿ ಪ್ರದೇಶಕ್ಕೆ ಬರುತ್ತಿದ್ದರು. ಈ ಪ್ರದೇಶದಲ್ಲೇ ತಿಂಗಳುಗಟ್ಟಲೆ ಉಳಿಯುತ್ತಿದ್ದರು. ಇಲ್ಲಿನ ಹೆಣ್ಣುಮಕ್ಕಳನ್ನು ಇಸ್ಲಾಂ ಧರ್ಮದ ಪ್ರಕಾರ ಮದುವೆಯಾಗುತ್ತಿದ್ದರು. ವಿಧವೆಯರನ್ನು ಮದುವೆಯಾಗುವುದು ಕೂಡ ಇಸ್ಲಾಂ ಧರ್ಮ ಸಮ್ಮತಿಸುತ್ತದೆ. ಹೀಗೆ ಅಸ್ತಿತ್ವಕ್ಕೆ ಬಂದ ಜನಾಂಗವನ್ನು ನವಾಯತರು ಎಂದು ಕರೆಯಲಾಗುತ್ತದೆ. ಇವರ ನವಾಯತಿ ಭಾಷೆ ಅರಬಿ ಮತ್ತು ಕೊಂಕಣಿ ಶಬ್ದಗಳಿಂದ ಕೂಡಿದೆ. ಇವರು ಸಾಯಂಕಾಲಕ್ಕೆ ಮೊದಲೇ ಊಟ ಮಾಡುವ ಪದ್ಧತಿಯನ್ನು ಹೊಂದಿದ್ದರಿಂದ ಇವರು ಜೈನ ಧರ್ಮದ ಮಹಿಳೆಯರನ್ನು ಕೂಡ ಮದುವೆಯಾಗಿರಬಹುದು. ಅಳಿಯಕಟ್ಟಿನ ವೈವಾಹಿಕ ಸಂಬಂಧದ ಅಂಶಗಳು ಇರುವುದರಿಂದ ಶೂದ್ರ ಜನಾಂಗಗಳ ಮಹಿಳೆಯರನ್ನೂ ಮದುವೆಯಾಗಿರಬಹುದು. ಅದೇನೇ ಇದ್ದರೂ ಈ ಮುಸ್ಲಿಂ ಜನಾಂಗ ಎರಡೂ ಧರ್ಮಗಳ ಭಾವೈಕ್ಯದ ಸಂಕೇತವಾಗಿತ್ತು. ಆದರೆ ಭಟ್ಕಳ ಗಲಭೆಯಲ್ಲಿ ಕೋಮುದ್ವೇಷ ಎಷ್ಟೊಂದು ತೀವ್ರವಾಗಿತ್ತೆಂದರೆ. ನವಾಯತರ ತೆಂಗಿನ ತೋಟಗಳು ರಾತ್ರೋರಾತ್ರಿ ನೆಲಸಮವಾದವು. ಸುಂದರ ಜೈನಬಸದಿಯೊಂದು ಅಗ್ನಿಗೆ ಆಹುತಿಯಾಯಿತು. ನಾಮಧಾರಿ, ಮೀನುಗಾರ ಮತ್ತು ಮುಸ್ಲಿಂ ಸಮುದಾಯದ ಅಮಾಯಕರ ಕೊಲೆಯಾಯಿತು. ಒಂದು ವರ್ಷಕಾಲ ಮುಂದುವರಿದ ಈ ಕೋಮುಗಲಭೆಯಲ್ಲಿ ಸಾವಿರಾರು ಕೋಟಿಗಳಷ್ಟು ಆಸ್ತಿಪಾಸ್ತಿ ಮತ್ತು ವ್ಯವಹಾರದ ಹಾನಿಯಾಯಿತು.

ಮಾನವ ಸಂಬಂಧಗಳು

ಹತೋಟಿ ಮೀರಿದ ಕೋಮುಗಲಭೆಗೆ ಕಾರಣರಾದ ಎರಡೂ ಕಡೆಯ ದುಷ್ಕರ್ಮಿಗಳ ಚಾಕುಚೂರಿಗಳಿಗೆ ಅಮಾಯಕರು ಸಿಕ್ಕಿ ಗಾಯಾಳುಗಳಾದಾಗ ಅವರ ಸಂಬಂಧಿಕರು ಆ ಗಾಯಾಳುಗಳನ್ನು ಮಣಿಪಾಲ ಆಸ್ಪತ್ರೆಗೆ ಮತ್ತು ಮಂಗಳೂರಿನ ಆಸ್ಪತ್ರೆಗಳಿಗೆ ಒಯ್ಯುತ್ತಿದ್ದರು. 'ಗಾಯಾಳು ಮಣಿಪಾಲ್'ಗೆ ಎಂದು ಪತ್ರಿಕೆಯಲ್ಲಿ ಬಂದಾಗ ಪ್ರಜ್ಞಾವಂತರು ಆ ಗಾಯಾಳು ಹಿಂದೂ ಎಂದು ಅರ್ಥ ಮಾಡಿಕೊಳ್ಳುತ್ತಿದ್ದರು. 'ಗಾಯಾಳು ಮಂಗಳೂರಿಗೆ' ಎಂದು ಬರೆದಾಗ ಆ ಗಾಯಾಳು ಮುಸ್ಲಿಂ ಎಂದು ಅರ್ಥವಾಗುತ್ತಿತ್ತು. ಹಿಂದೂಗಳು ಮಣಿಪಾಲ್ ಆಸ್ಪತ್ರೆಗೆ ಹೋದ ಹಾಗೆ ಮುಸ್ಲಿಮರು ಮಂಗಳೂರಿನ ತಮ್ಮ ಧರ್ಮದವರು ಆರಂಭಿಸಿದ ದೊಡ್ಡ ಆಸ್ಪತ್ರೆಗೆ ಹೋಗುತ್ತಿದ್ದರು! ಹೀಗೆ ಕೋಮುಗಲಭೆಗಳು ಮನುಷ್ಯರನ್ನು ಎಲ್ಲ ಕ್ಷೇತ್ರಗಳಲ್ಲೂ ವಿಂಗಡಿಸಿ ಬಿಡುತ್ತದೆ. ಪೊಲೀಸ್ ಇಲಾಖೆಯಲ್ಲೂ ಈ ಸಮಸ್ಯೆ ತಲೆದೋರುತ್ತದೆ. ಭಟ್ಕಳ್ ಗಲಭೆಯಲ್ಲಿ ಮೂಲಭೂತವಾದಿಯೊಬ್ಬ ಮಣ್ಣಿನ ಗಣಪತಿಯನ್ನು ಒಡೆದು ಹಾಕಿದಾಗ ಹಿಂದೂ ಪೊಲೀಸ್ ಪೇದೆಯೊಬ್ಬ ಉದ್ವೇಗಕ್ಕೆ ಒಳಗಾಗಿ ವರ್ತಿಸಿದ್ದು ಜನರಲ್ಲಿ ಗಾಬರಿ ಹುಟ್ಟಿಸುವಂತಾಗಿತ್ತು.



ಆಗ ಸ್ಥಳದಲ್ಲಿದ್ದ ಜಿಲ್ಲಾ ಮೀಸಲು ಪಡೆಯ ಸಂವೇದನಾಶೀಲ ಇನ್ಸ್‌ಪೆಕ್ಟರ್ ವಿಶ್ವನಾಥ ಶೆಟ್ಟಿ ಎಂಬವರು ಅವನಲ್ಲಿ ಪೊಲೀಸ್ ಧರ್ಮದ ಬಗ್ಗೆ ಅರಿವು ಮೂಡಿಸಿ ಕರ್ತವ್ಯನಿರತನಾಗುವಂತೆ ಮಾಡಿದ್ದು ಹೃದಯಸ್ಪರ್ಶಿಯಾಗಿತ್ತು.

ಇರಿತಕ್ಕೆ ಒಳಗಾದ ಅಸಹಾಯಕ ಮುಸ್ಲಿಮರನ್ನು ಸಮೀಪದಲ್ಲಿದ್ದ ಮಾನವತಾವಾದಿ ಹಿಂದೂಗಳು ತಮ್ಮ ಕಾರುಗಳಲ್ಲಿ ಹಾಕಿಕೊಂಡು ಆಸ್ಪತ್ರೆಗೆ ಒಯ್ಯುತ್ತಿದ್ದರು. ಅದೇರೀತಿ ಇರಿತಕ್ಕೆ ಒಳಗಾದ ಹಿಂದೂಗಳನ್ನು ಮುಸ್ಲಿಮರು ತಮ್ಮ ಕಾರುಗಳಲ್ಲಿ ಹಾಕಿಕೊಂಡು ಆಸ್ಪತ್ರೆಗೆ ಒಯ್ಯುತ್ತಿದ್ದರು. ಅಂಥ ಸಂದರ್ಭಗಳಲ್ಲಿ ಇರಿತಕ್ಕೆ ಒಳಗಾದ ಕೋಮುಗಳ ಜನರು ಆ ಕಾರುಗಳಲ್ಲಿ ಇರುವುದು ಅನಿವಾರ್ಯವಾಗಿತ್ತು, ಇಲ್ಲದಿದ್ದರೆ ಸಹಾಯ ಮಾಡುವವರ ಮೇಲೆಯೆ ಉದ್ರಿಕ್ತ ಗುಂಪುಗಳು ಹಲ್ಲೆ ಮಾಡುವ ಸಾಧ್ಯತೆಗಳಿದ್ದವು.

ಮೀನುಗಾರ ಹೆಣ್ಣುಮಕ್ಕಳು ನವಾಯತರ ಮೊಹಲ್ಲಾಗಳಿಗೆ ಮೀನು ಮಾರಲು ಹೋದಾಗ, ತಮ್ಮ ಗಂಡಸರು ಯಾವ ಪ್ರದೇಶದ ಮೇಲೆ ಹಲ್ಲೆ ಮಾಡುವ ಬಗ್ಗೆ ರಾತ್ರಿ ಮಾತನಾಡುತ್ತಿದ್ದನ್ನು ಗುಟ್ಟಾಗಿ ತಿಳಿಸುತ್ತಿದ್ದರು. ಆಗ ನವಾಯತರು ಮುಂಜಾಗ್ರತೆಯಿಂದ ಇರುತ್ತಿದ್ದರು.

ಆಗ ಉತ್ತರಕನ್ನಡ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಯಾಗಿದ್ದ ಈಗಿನ ಡಿಜಿಪಿ ಮತ್ತು ಐಜಿ ಓಂಪ್ರಕಾಶ ಅವರು ಭಟ್ಕಳದಲ್ಲಿ ಮೊಹಲ್ಲಾ ಸಭೆಗಳನ್ನು ಆರಂಭಿಸಿ ಎರಡೂ ಕೋಮಿನ ಹಿರಿಯರನ್ನು ಕರೆಸಿದರು. ಆಗ ಆ ಹಿರಿಯರು ತಮ್ಮ ತಮ್ಮ ಕೋಮುಗಳಲ್ಲಿನ ದುಷ್ಕರ್ಮಿಗಳ ಕುರಿತು ಗೋಪ್ಯವಾಗಿ ಮಾಹಿತಿ ನೀಡಿದರು. ಜನಸಾಮಾನ್ಯರ ಮತ್ತು ಪತ್ರಕರ್ತರ ಸಹಕಾರವೂ ದೊರೆಯಿತು. ಇಂಥ ಅನೇಕ ಪ್ರಯತ್ನಗಳಿಂದಾಗಿ ಓಂಪ್ರಕಾಶ ಅವರು ಕೋಮುಗಲಭೆಯನ್ನು ಹತೋಟಿಗೆ ತಂದರು.

ಸಮೂಹಸನ್ನಿಯಲ್ಲಿ ವಿವಿಧ ಕೋಮುಗಳ ಜನರು ಉದ್ವೇಗದಿಂದ ವರ್ತಿಸುವುದು ಸಹಜ. ಏಕೆಂದರೆ ಹಾಗೆ ಉದ್ವೇಗಕ್ಕೆ ಒಳಗಾಗುವಂತೆ ಮಾಡುವಲ್ಲಿ ಪಟ್ಟಭದ್ರ ಹಿತಾಸಕ್ತಿಗಳು ಯಶಸ್ಸನ್ನು ಸಾಧಿಸಿರುತ್ತವೆ. ಇದು ಮೇಲ್ನೋಟದ ವಿಚಾರ. ಆದರೆ, ಪತ್ರಿಕಾಧರ್ಮವನ್ನು ಸ್ವೀಕರಿಸಿದ ಪತ್ರಕರ್ತ ಸಮಸ್ಯೆಯ ಆಳಕ್ಕೆ ಇಳಿದಾಗ ಸತ್ಯದ ಅರಿವಾಗುವುದು.

ಹನುಮಜಯಂತಿಯಂದು ನಡೆಯುವ ರಥೋತ್ಸವದಲ್ಲಿ ಬಳಕೆಯಾಗುವ ಆ ರಥ ಬ್ರಿಟಿಷ್ ಸರ್ಕಾರವಿದ್ದಾಗ ಮುಸ್ಲಿಮ ಪಟೇಲರೊಬ್ಬರ ಸಹಾಯದಿಂದ ದುರಸ್ತಿಗೆ ಒಳಗಾಯಿತು ಎಂಬುದು ಗತಕಾಲದ ಬಗ್ಗೆ ವಿಚಾರಿಸುವ ಸಂದರ್ಭದಲ್ಲಿ ತಿಳಿದುಬಂದಿತು. ರಥ ಶಿಥಿಲಗೊಂಡಿದ್ದರಿಂದ ಅಂದಿನ ಬ್ರಿಟಿಷ್ ಅಧಿಕಾರಿ ರಥೋತ್ಸವಕ್ಕೆ ಅನುಮತಿ ನೀಡಿದ್ದಿಲ್ಲ, ಆದರೆ ಭಟ್ಕಳ ಪಟ್ಟಣದ ಪಟೇಲರು 'ಇದು ಊರಿನ ಮರ್ಯಾದೆಯ ಪ್ರಶ್ನೆ ಮತ್ತು ಹಿಂದೂ ಸಹೋದರರ ಭಾವನೆಗಳನ್ನು ಘಾಸಿಗೊಳಿಸುವ ಪ್ರಶ್ನೆ' ಎಂದು ಭಾವಿಸಿ ತಮ್ಮ ಸ್ವಂತ ಖರ್ಚಿನಿಂದ ರಥವನ್ನು ರಥೋತ್ಸವಕ್ಕೆ ಯೋಗ್ಯವಾಗುವ ಹಾಗೆ ನವೀಕರಣಗೊಳಿಸಿದರು. ಈ ಕಾರಣಕ್ಕಾಗಿಯೆ ಪ್ರತಿವರ್ಷ ರಥೋತ್ಸವದ ದಿನ ಪಂಚವಾದ್ಯಗಳೊಂದಿಗೆ ಆ ಪಟೇಲರ ಮನೆಗೆ ಆಮಂತ್ರಣ ನೀಡುವ ವಿಚಾರವೂ ಬೆಳಕಿಗೆ ಬಂದಿತು.

ರಥದ ಕಡೆಗೆ ಬಿದ್ದ ಕಲ್ಲುಗಳು ಕೋಮುವಾದಿಗಳ ಕೃತ್ಯವಾಗಿತ್ತು, ಕೋಮುವಾದಿ ಮತ್ತು ಮೂಲಭೂತವಾದಿಗಳ ಈರ್ಷ್ಯೆ ಹಿಂದೂ-ಮುಸ್ಲಿಂ ಗಲಭೆಗಳಾಗಿ ಪರಿವರ್ತನೆ ಹೊಂದುವುದು ಈ ದೇಶದ ದುರಂತವಾಗಿದೆ. ಅಂಥ ಸಂದರ್ಭಗಳಲ್ಲಿ ಎರಡೂ ಕಡೆಯ ದುಷ್ಕರ್ಮಿಗಳು ತಮ್ಮ ತಮ್ಮ ಕೋಮುಗಳ ಹೀರೋಗಳಂತೆ ವರ್ತಿಸಲು ಆರಂಭಿಸುತ್ತಾರೆ. ಬಹುಪಾಲು ಪ್ರಜ್ಞಾವಂತರು ನಿಷ್ಕ್ರಿಯರಾಗಿ ಕೋಮುವಾದಿಗಳನ್ನು ಶಪಿಸುತ್ತ ಮನೆಯೊಳಗೆ ಉಳಿಯುತ್ತಾರೆ. ಇಂಥ ಪ್ರಜ್ಞಾವಂತರ ನಿಷ್ಕ್ರಿಯತೆ ಕೂಡ ದೇಶದಲ್ಲಿ ಕೋಮುಗಲಭೆಗಳು ಮುಂದುವರಿಯಲು ಇರುವ ಕಾರಣಗಳಲ್ಲಿ ಒಂದಾಗಿದೆ. ಆದರೆ ಜನಸಾಮಾನ್ಯರೇ ಪ್ರಯತ್ನಪಟ್ಟು ಕೋಮುಗಲಭೆಗಳಲ್ಲಿ ತೊಂದರೆಗೊಳಗಾದವರನ್ನು ರಕ್ಷಿಸುವುದು ಕೂಡ ಸಾಮಾನ್ಯವಾಗಿದೆ.

ಭಟ್ಕಳ ಗಲಭೆ ನಡೆದಾಗ ಹಿಂದೂಗಳು ತಮ್ಮ ಮೊಹಲ್ಲಾಗಳಲ್ಲಿನ ಮುಸ್ಲಿಮರ ರಕ್ಷಣೆ ಮಾಡಿದರು. ಮುಸ್ಲಿಮರು ತಮ್ಮ ಮೊಹಲ್ಲಾಗಳಲ್ಲಿನ ಹಿಂದೂಗಳನ್ನು ರಕ್ಷಿಸಿದರು. ಭಟ್ಕಳದ ಇತಿಹಾಸ ತಿರುವಿದಾಗ ಅಲ್ಲಿ ಹೀಗೆ ಕೋಮುಗಲಭೆಗಳಾದ ದಾಖಲೆಗಳೇ ಇರಲಿಲ್ಲ.

ಸಾಮಾಜಿಕ ಸಂಬಂಧಗಳಲ್ಲಿನ ಬದಲಾವಣೆ

ಈ ಗಲಭೆಗೆ ಕಾರಣಗಳಲ್ಲಿ ಮುಖ್ಯವಾದುದೆಂದರೆ ಹಿಂದೂ ಮತ್ತು ಮುಸ್ಲಿಂ ವ್ಯಾಪಾರಿ ಸಮುದಾಯಗಳಲ್ಲಿನ ಪೈಪೋಟಿ. ಹಿಂದೂ ಮತ್ತು ಮುಸ್ಲಿಂ ವಿದ್ಯಾರ್ಥಿಗಳಲ್ಲಿನ ಸ್ನೇಹ, ಪ್ರೇಮ ಮುಂತಾದ ಸಂಬಂಧಗಳು.

ಹಿಂದಿನ ಕಾಲದ ನವಾಯತ ಮುಸ್ಲಿಮರು ತಮ್ಮ ತೆಂಗಿನತೋಟಗಳಲ್ಲಿ ದುಡಿಯುವ ಹಿಂದುಳಿದ ನಾಮಧಾರಿ ಸಮಾಜದವರ ಜೊತೆಗೆ ಹೊಂದಿದ್ದ ಸಾಮಾಜಿಕ



...ಸಂಬಂಧಗಳು ಅವರ ಮಕ್ಕಳ ಕಾಲದಲ್ಲಿ ಮುಂದುವರಿಯಲಿಲ್ಲ, ಏಕೆಂದರೆ ಕಲಿತ ನವಾಯತ ಮುಸ್ಲಿಂ ಯುವಕರು ಕಲಿತ ಮೇಲ್ಜಾತಿ ಯುವಕ, ಯುವತಿಯರ ಜೊತೆಗೆ ಗೆಳೆತನ ಬೆಳೆಸತೊಡಗಿದರು. ಹಿಂದುಳಿದ ಜಾತಿಗಳ ಯುವಕರ ಜೊತೆ ಅವರ ಸಂಬಂಧ ಪರಂಪರಾಗತವಾಗಿ ...ದ ರೀತಿಯಲ್ಲಿ ಉಳಿಯಲಿಲ್ಲ. ಹೀಗೆ ಸಾಮಾಜಿಕ ಸಂಬಂಧಗಳಲ್ಲಿ ಪಲ್ಲಟವಾದಾಗ ಹುಟ್ಟಿಕೊಳ್ಳುವ ಅಪನಂಬಿಕೆ ...ಸು ಕೂಡ ಕೋಮುಗಲಭೆಗಳಿಗೆ ಕಾರಣವಾಗುತ್ತವೆ.

ಈ ಎಲ್ಲ ಕಾರಣಗಳಿಂದ ಸಾಮಾಜಿಕ ಸಂಬಂಧಗಳಲ್ಲಿ ...ದ ಬದಲಾವಣೆಗಳು ಕೂಡ ಕೋಮುಗಲಭೆಯ ಹಿಂದೆ ...ಪ್ತವಾಗಿದ್ದವು. ಇಂಥ ಪ್ರಸಂಗಗಳಲ್ಲಿ ಮನುಷ್ಯತ್ವವನ್ನು ...ತ್ತಿ ಹಿಡಿಯುವುದು ಮಾತ್ರ ಪತ್ರಕರ್ತನ ಧರ್ಮವಾಗಿ ...ತ್ತದೆ. ತಾನು ಎಲ್ಲ ಧರ್ಮದವನು, ಎಲ್ಲ ಜನಾಂಗದವನು ಮತ್ತು ಎಲ್ಲರೂ ತನ್ನವರು ಎಂಬ ಭಾವಪೂರ್ಣತೆಯಿಂದ ಮಾತ್ರ ಆತ ತನ್ನ ಪತ್ರಿಕಾಧರ್ಮವನ್ನು ಪಾಲಿಸಲು ಸಾಧ್ಯ.

ಕೆಲವೊಂದು ಸಲ ಬಹಳ ಮಹತ್ವದ ಸುದ್ದಿಯೊಂದು ...ಮನಕ್ಕೆ ಬಂದರೂ ಬರೆಯಲಾಗದಂಥ ನೈತಿಕ ಪ್ರಜ್ಞೆ ...ಡತೊಡಗುತ್ತದೆ. ಗಲಭೆ ವೇಳೆ ಒಂದು ರಾತ್ರಿ ...ಗಾಯಿತು. ಭಟ್ಕಳದ ಕೆಲ ಪೊಲೀಸರು ದುಷ್ಕರ್ಮಿಗಳ ಜೊತೆ ಸೇರಿಕೊಂಡು ಶ್ರೀಮಂತ ನವಾಯತರ ...ನೆಯೊಂದನ್ನು ಲೂಟಿ ಮಾಡಿದರು. ತಮ್ಮ ಹ್ಯಾಟುಗಳಲ್ಲಿ ...ಂಗಾರ ಸರಗಳನ್ನು ತುಂಬಿಕೊಂಡು ಹೊರಬಂದರು. ಪೊಲೀಸ್ ವರಿಷ್ಠಾಧಿಕಾರಿಗೆ ಗೊತ್ತಾಗಿ ಆ ಪೊಲೀಸರನ್ನು ವಿಚಾರಣೆಗೆ ಒಳಪಡಿಸಿದರು ಮತ್ತು ಆ ಸುದ್ದಿಯನ್ನು ...ಟ್ಟರು. ಆದರೆ ಅದನ್ನು ಪ್ರಕಟಿಸಲಿಲ್ಲ, ಕಾರಣ ಗಲಭೆಗಳ ಸಂದರ್ಭದಲ್ಲಿ ಅನ್ಯಾಯಕ್ಕೊಳಗಾದವರು ಖಾಕಿ ಸಮವಸ್ತ್ರದ ಮೇಲೆ ನಂಬಿಕೆ ಇಟ್ಟಿರುತ್ತಾರೆ. ಆ ನಂಬಿಕೆಯೂ ಹೋದ ಮೇಲೆ ಒಳ್ಳೆಯವರು ಹತಾಶರಾಗುತ್ತಾರೆ. ದುಡುಕಿನ ...ಾವದವರು ದುಡುಕುತ್ತಾರೆ. ಅಂಥವರು ಕೊಲೆಗಡುಕರೂ ...ಗಬಹುದು.

ಇದನ್ನೆಲ್ಲ ಅರಿತುಕೊಂಡು ಯಾವ ಸುದ್ದಿಯನ್ನು ಹೇಗೆ ...ಕಟಿಸಬೇಕು ಮತ್ತು ಯಾವ ಸುದ್ದಿಯನ್ನು ಪ್ರಕಟಿಸಬಾರದು ...ಬ ವಿವೇಚನೆ ಪತ್ರಕರ್ತರಿಗೆ ಇರಬೇಕಾಗುತ್ತದೆ. ...ತ್ರಕರ್ತನಿಗೆ ಸಾಮಾಜಿಕ ನ್ಯಾಯದ ಮುಂದೆ ಯಾವುದೂ ...ಡ್ಡದಾಗಿ ಕಾಣಬಾರದು. ಕೋಮುಗಲಭೆಗಳಲ್ಲಿ ಅತೀವ ...ನಷ್ಟಗಳಿಗೆ ಒಳಗಾಗುವವರು ಎರಡೂ ಕಡೆಯ ...ಣ್ಣುಮಕ್ಕಳು ಮತ್ತು ಬಡವರು ಎಂಬುದನ್ನು ...ರೆಯಬಾರದು. ಕೋಮುಗಲಭೆಗಳು ನಡೆದ ಸ್ಥಳದಲ್ಲಿ ...ಕು ಚಪ್ಪಲಿಗಳೇ ಏಕೆ ಬಿದ್ದಿರುತ್ತವೆ. ಕೋಮುಗಲಭೆಗಳನ್ನು ...ರ್ಸುವವರ ಉತ್ತಮ ಚಪ್ಪಲಿಗಳೇಕೆ ಬಿದ್ದಿರುವುದಿಲ್ಲ. ...ಭೆಗಳಲ್ಲಿ ಎರಡೂ ಕಡೆಗಳ ಬಡವರೇ ಏಕೆ ಸಾವು ...ೋವುಗಳಿಗೆ ಒಳಗಾಗುತ್ತಾರೆ. ಗಲಭೆ ನಡೆಯುವ ...ದರ್ಭದಲ್ಲಿ ಎರಡೂ ಕಡೆಗಳ ಧನಾಢ್ಯರು ಮತ್ತು ...ೋಮುವಾದಿ ರಾಜಕೀಯ ಮಾಡುವ ನಾಯಕರು ಎಲ್ಲಿ ...ಗಿಕೊಂಡಿರುತ್ತಾರೆ ಎಂಬುದನ್ನು ತಿಳಿದುಕೊಳ್ಳುವುದು ...ತ್ರಕರ್ತನ ಆದ್ಯ ಜವಾಬ್ದಾರಿಯಾಗಿರುತ್ತದೆ.


ಜನಮುಖಿ

...ಅಭಿವೃದ್ಧಿ ಪತ್ರಿಕೋದ್ಯಮದ ಕಡೆಗೆ ಪತ್ರಕರ್ತರು ...ಗಿನ ಗಮನ ಹರಿಸಬೇಕು. ಅಭಿವೃದ್ಧಿಗೆ ಅಡ್ಡಿಯನ್ನುಂಟು ...ಡುವ ಕೋಮುಗಲಭೆಗಳು, ಮೂಢನಂಬಿಕೆಗಳು ಮತ್ತು ...ಶದ ನಿಷ್ಕ್ರಿಯತೆ ಹಾಗೂ ಶಾಂತಿ ಮತ್ತು ಸುವ್ಯವಸ್ಥೆಯಲ್ಲಿ ...ಉಬರುವ ಲೋಪದೋಷಗಳ ಬಗ್ಗೆ ಜನರಿಗೆ ...ಳುವಂಥ ಸುದ್ದಿಗಳಿಗೆ ಹೆಚ್ಚಿನ ಮಹತ್ವವಿರಬೇಕು. ...ವೃದ್ಧಿಗೆ ಪೂರಕವಾಗುವ ವೈಜ್ಞಾನಿಕ ಮನೋಭಾವ, ...ರ ಸಮಸ್ಯೆಗಳನ್ನು ಬಗೆಹರಿಸುವಂಥ ಯೋಜನೆಗಳು, ...ಸಮುದಾಯಕ್ಕೆ ಸಹಾಯಕವಾಗುವಂಥ ಸರ್ಕಾರಿ ...ತುಗಳು, ಸಮಾಜದಲ್ಲಿನ ಮಾದರಿ ವ್ಯಕ್ತಿಗಳು, ...ಮಾಣಿಕ ಮತ್ತು ಕ್ರಿಯಾಶೀಲ ಅಧಿಕಾರಿಗಳು ಹಾಗೂ ...ಕೀಯ ನಾಯಕರ ಪ್ರಯತ್ನಗಳು ಮುಂತಾದವುಗಳ ...ಶೇಷಗಳನ್ನು ಪ್ರಕಟಿಸುವುದರ ಮೂಲಕ ಪತ್ರಕರ್ತರು ...ಮುಖಿಯಾಗಬೇಕು.

-ರಂಜಾನ್ ದರ್ಗಾ

ಸರಣಿ ಸೋಲುಗಳಿಂದ ಪಾಠ ಕಲಿಯದವರು

2014ರ ಚುನಾವಣೆಗಳ ವೇಳೆ ಜನರನ್ನು ಮರುಳಿಸುವಂತಹ ಭಾಷಣ ಕುಟ್ಟಿ ಗೆಲುವು ಸಾಧಿಸಿದ ಮೋದಿ ಅಂದು ಕೇವಲ 'ಗುಜರಾತ್ ಮಾದರಿ ಅಭಿವೃದ್ಧಿ' ಮತ್ತು ಯುಪಿಎ ಸರ್ಕಾರದ ಭ್ರಷ್ಟಾಚಾರಗಳ ಬಗ್ಗೆ ಮಾತನಾಡಿದ್ದನೆ ಹೊರತು ಆರೆಸ್ಸೆಸ್‌ನ ಕೋಮುವಾದಿ ಅಜೆಂಡಾ ಬಗ್ಗೆ ಅಪ್ಪಿತಪ್ಪಿಯಾದರೂ ಉಸಿರೆತ್ತಿರಲಿಲ್ಲ. ಇದೀಗ ಮೋದಿ ಪ್ರಧಾನಮಂತ್ರಿಯಾಗಿ ಸುಮಾರು 19 ತಿಂಗಳುಗಳೇ ಸಂದಿವೆ. ಆದರೆ ಆತ ನೀಡಿದ್ದ ಒಂದೇ ಒಂದು ಭರವಸೆಯಾದರೂ ಈಡೇರಿಲ್ಲ. 'ಒಳ್ಳೆಯ ದಿನಗಳು' ಬರುತ್ತವೆ ಎಂದು ಜನ ಬಾಯ್ತೆರೆದು ಕಾದದ್ದೆ ಬಂತು, ರೂ 15 ಲಕ್ಷ ಕಪ್ಪುಹಣವೂ ಬಂದಿಲ್ಲ, ಉದ್ಯೋಗಗಳೂ ಸೃಷ್ಟಿಯಾಗಿಲ್ಲ, ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ತೈಲ ಬೆಲೆ ಕುಸಿದರೂ ದೇಶದೊಳಗೆ ಅದೇ ಮಟ್ಟದಲ್ಲಿ ಕಡಿಮೆಯಾಗಿಲ್ಲ. ಇದರೊಂದಿಗೆ ಗಗನಕ್ಕೇರಿರುವ ಅಗತ್ಯವಸ್ತುಗಳ ಬೆಲೆ ಮುಂತಾದ ದಿನನಿತ್ಯದ ಸಮಸ್ಯೆಗಳು ಜನಸಾಮಾನ್ಯರ ಬದುಕನ್ನು ದುರ್ಭರಗೊಳಿಸಿವೆ. ಒಟ್ಟಿನಲ್ಲಿ 'ಅಭಿವೃದ್ಧಿ', 'ಅಚ್ಛೇ ದಿನ್' ಇತ್ಯಾದಿಗಳು ಮರೀಚಿಕೆಯಾಗಿರುವುದನ್ನು ಗಮನಿಸಿರುವ ಮತದಾರ ಪ್ರಭುವಿಗೆ ಮೋದಿಯ ಭಾಷಣಗಳು ರೊಟ್ಟಿ ಇಲ್ಲದ ಬರೀ ಖೊಟ್ಟಿ ಮಾತು ಎನ್ನುವುದರ ಅರಿವಾಗಿದೆ. ಮತದಾರರು ಎಚ್ಚೆತ್ತುಕೊಂಡುದರ ಪರಿಣಾಮವಾಗಿ ಮೋದಿ




ಹವಾ ಅದೆತ್ತಲೋ ತೇಲಿಹೋಗಿದೆ. ಮೋದಿ ಮೋಡಿ ಸಂಪೂರ್ಣವಾಗಿ ನೆಲ ಕಚ್ಚಿದೆ. ದೆಹಲಿ, ಬಿಹಾರ ರಾಜ್ಯ ಚುನಾವಣೆಗಳು ಮತ್ತು ಉತ್ತರಪ್ರದೇಶ, ಗುಜರಾತ್, ಮಧ್ಯಪ್ರದೇಶಗಳ ಸ್ಥಳೀಯಾಡಳಿತ ಚುನಾವಣೆಗಳ ಫಲಿತಾಂಶವೇ ಇದಕ್ಕೆ ಸಾಕ್ಷಿಯಾಗಿದೆ. ಬಿಹಾರ ಚುನಾವಣೆಗಳ ಮೊದಲೆರಡು ಹಂತಗಳಲ್ಲಿ ಅದೇ ಹಳಸಲು 'ಅಭಿವೃದ್ಧಿ' ಮಂತ್ರವನ್ನು ಪಠಿಸಲಾಗಿತ್ತು, ಆದರೆ ಅದು ನಿರೀಕ್ಷಿತ ಫಲ ನೀಡದಿದ್ದಾಗ 'ಅಭಿವೃದ್ಧಿ' ಅಮಿಷದ ಮೂಲಕ ಮತದಾರರ ಓಲೈಕೆ ಕಷ್ಟ ಎಂಬ ಸತ್ಯಾಂಶದ ಅರಿವಾಗಿ ಇದ್ದಕ್ಕಿದ್ದಂತೆ ತಂತ್ರಗಾರಿಕೆಯನ್ನು ಬದಲಾಯಿಸಲಾಯಿತು. ನಂತರದ ಹಂತಗಳಲ್ಲಿ ಮೋದಿಯಾದಿಯಾಗಿ ಎಲ್ಲಾ ಬಿಜೆಪಿ ಮುಖಂಡರು ತಮ್ಮ ಪ್ರಚಾರಗಳಲ್ಲಿ ಕೋಮುವಾದದ ಅಸ್ತ್ರವನ್ನು ಪ್ರಯೋಗಿಸಿದರು. ಆದರೆ ಇದೂ ಕೂಡ ಊಹಿಸಿದಷ್ಟು ಯಶಸ್ಸನ್ನು ತಂದುಕೊಟ್ಟಿಲ್ಲ, ವಿಫಲವೇ ಆಯಿತೆನ್ನಬಹುದು. ಅಂತಿಮವಾಗಿ ರಾಜ್ಯಸಭೆಯಲ್ಲಿ ಬಹುಮತ ಗಳಿಸುವ ಪ್ಲಾನ್ ಧೂಳೀಪಟವಾದಾಗ ಕರಟಕ ದಮನಕರ ನೆತ್ತಿಗೇರಿದ್ದ ಪಿತ್ತ ಕಾಲಿಗಿಳಿದಿದೆ. ಜನರ ಭ್ರಮೆಯ ತೆರೆ ಸರಿಯತೊಡಗಿರುವುದನ್ನು ಅರಿತ ಚಾಣಾಕ್ಷ ಮೋದಿ ಸಂಸತ್ತಿನಲ್ಲಿ ತನ್ನ ಮಾತುಗಳ ವರಸೆಯನ್ನು ಬದಲಾಯಿಸಿದ್ದಾನೆ. ಪ್ರತಿಪಕ್ಷಗಳನ್ನು ಬಹಳ ಗೌರವಯುತವಾಗಿ ಸಂಬೋಧಿಸಿದ್ದಲ್ಲದೆ ಸಂವಿಧಾನದ ಬಗ್ಗೆ ಜೇನಿನಂಥಾ ಸವಿಮಾತುಗಳನ್ನೂ ಆಡಿದ್ದಾನೆ!

ಮೋದಿ-ಶಾ ಜೋಡಿಯ ಕಾರ್ಯತಂತ್ರಗಳು ಮತ್ತೆ ಮತ್ತೆ ವಿಫಲವಾಗುತ್ತಿರುವುದರಿಂದ ಇತ್ತ ಬಿಜೆಪಿ ಒಳಗಣ ವಿರೋಧಿ ಬಣದಲ್ಲಿ ಅಸಮಾಧಾನ ಹೆಚ್ಚುತ್ತಿದೆ. ಹೊಗೆಯಾಡುತ್ತಿರುವ ಜ್ವಾಲಾಮುಖಿ ಒಮ್ಮೊಮ್ಮೆ ಬಾಯ್ತೆರೆಯುವಂತೆ ಮತ್ತೊಮ್ಮೆ ಬಂಡಾಯದ ಧ್ವನಿಗಳು ಕೇಳತೊಡಗಿದವು. ಆದರೇನು, ಎಂದಿನಂತೆ ಆರೆಸ್ಸೆಸ್‌ನ ದಂಡ ಇಂತಹ ಆಂತರಿಕ ಕಿಚ್ಚುಗಳನ್ನೆಲ್ಲ ಒಂದೇ ದಿನದೊಳಗಾಗಿ ತಣ್ಣಗಾಗಿಸಿತು! ಆರೆಸ್ಸೆಸ್‌ನ ಅಚ್ಚುಮೆಚ್ಚಿನ ಚೋರ ಗುರು ಚಾಂಡಾಲ ಶಿಷ್ಯ ಜೋಡಿ ಈಗ ಆರೆಸ್ಸೆಸ್ ಆಣತಿಯಂತೆ ಮುಂಬರಲಿರುವ ಅಸ್ಸಾಂ ಮತ್ತು ಪಶ್ಚಿಮ ಬಂಗಾಳ ರಾಜ್ಯ ಚುನಾವಣೆಗಳಲ್ಲಿ ಪುನಃ ನೇರವಾಗಿ ಕೋಮುವಾದದ ವಿಚಾರವನ್ನೆ ಎತ್ತಲು ನಿರ್ಧರಿಸಿದೆ. ಅಂತೆಯೆ ನವೆಂಬರ್‌ನಲ್ಲಿ ಅಸ್ಸಾಂನ ರಾಜಧಾನಿ ದಿಸ್ಪುರದಲ್ಲಿ ಹಮ್ಮಿಕೊಳ್ಳಲಾಗಿದ್ದ ಜಾಥಾ ಒಂದರಲ್ಲಿ ಮಾತನಾಡಿದ ಅಮಿತ್ ಶಾ, ಬಾಂಗ್ಲಾದೇಶದಿಂದ ಮುಸ್ಲಿಂ ನಿರಾಶ್ರಿತರು ಒಳನುಸುಳುತ್ತಿರುವ ವಿಚಾರವನ್ನೆತ್ತಿ ಜನರ ಭಾವನೆಗಳನ್ನು ಕೆರಳಿಸಲು ಮುಂದಾಗಿದ್ದಾನೆ. ಒಂದು ವಾರ ಕಳೆದು ಪಶ್ಚಿಮ ಬಂಗಾಳಕ್ಕೆ ಹೋದ ಆರೆಸ್ಸೆಸ್ ಮುಖ್ಯಸ್ಥ ಮೋಹನ್ ಭಾಗವತ, ಅಲ್ಲಿ ರಾಮಮಂದಿರ ನಿರ್ಮಾಣದ ಸ್ಫೋಟಕ ವಿಷಯವನ್ನು ಪ್ರಸ್ತಾಪಿಸಿದ್ದಾನೆ. "ನನ್ನ ಜೀವಮಾನದೊಳಗೆ ಮಂದಿರ ನಿರ್ಮಿಸಲಾಗುವುದು..... ಬಹುಶಃ ಅದನ್ನು ನಾವು ಕಣ್ಣಾರೆ ಕಾಣಬಹುದು. ನಿರ್ಮಾಣ ಯಾವಾಗ ಮತ್ತು ಹೇಗೆ ಆಗಲಿದೆ ಎಂಬುದನ್ನು ಯಾರಿಂದಲೂ ಹೇಳಲು ಸಾಧ್ಯವಿಲ್ಲ, ಆದರೆ ನಾವು ಸಕಲ ಸಿದ್ಧತೆಗಳನ್ನು ಮಾಡಿಕೊಂಡು ತಯಾರಾಗಿರಬೇಕು" ಎಂದಿದ್ದಾನೆ. ಬಾಂಗ್ಲಾ ನಿರಾಶ್ರಿತರು ಮತ್ತು ರಾಮಮಂದಿರ ವಿವಾದಗಳನ್ನು ಮತ್ತೆ ಕೆದಕುವುದರ ಹಿಂದೆ ಎರಡು ವಿಧದ ದುರ್ಲಾಭಗಳನ್ನು ಪಡೆಯುವ ಉದ್ದೇಶ ಅಡಗಿದೆ. ಇದರಿಂದ ಅತ್ತ ಹಿಂಬಾಲಕರನ್ನು ತೃಪ್ತಿಪಡಿಸಿದಂತೆಯೂ ಆಗುತ್ತದೆ ಇತ್ತ ಚುನಾವಣೆಗಳಲ್ಲಿ ಮತ ಸೆಳೆಯುವುದಕ್ಕೂ ಉಪಯುಕ್ತವಾಗುತ್ತದೆಂದು ಆರೆಸ್ಸೆಸ್ ಭಾವಿಸಿದೆ. ವಾಸ್ತವದಲ್ಲಿ ಸಂಘ ಪರಿವಾರಕ್ಕೆ ರಾಮಮಂದಿರ ನಿರ್ಮಾಣ ಪೂರ್ಣಗೊಳ್ಳುವುದು ಬೇಕಾಗಿಲ್ಲ. ಏಕೆಂದರೆ ಮಂದಿರ ಅಪೂರ್ಣವಿದ್ದಷ್ಟು ದಿನ ಚುನಾವಣಾ ಲಾಭ ದಕ್ಕಿಸಿಕೊಳ್ಳುತ್ತಾ ಇರಬಹುದು! 2019ರ ಚುನಾವಣೆಗಳಲ್ಲಿ ಹೇಗಾದರೂ ಸರಿ 350 ಲೋಕಸಭಾ ಸೀಟುಗಳನ್ನು ಪಡೆದೇತೀರಬೇಕೆಂದು ಆರೆಸ್ಸೆಸ್ ತೀರ್ಮಾನಿಸಿದೆಯಂತೆ.

ಇನ್ನು ಪಶ್ಚಿಮ ಬಂಗಾಳ, ತಮಿಳ್ನಾಡು, ಕೇರಳ ರಾಜ್ಯಗಳಲ್ಲಿ ಗೋರಾಜಕೀಯ, ಮತಾಂತರದ ಗುಲ್ಲು, ಉಗ್ರರ ಬೆದರಿಕೆಗಳಂತಹ ವಿಧಾನಗಳ ಮೂಲಕ ಕೂಡುಬಾಳ್ವೆಯ ಸಮಾಜಗಳನ್ನು ಒಡೆದು ಸಮುದಾಯಗಳನ್ನು ಧ್ರುವೀಕರಿಸುವ ಕಾರ್ಯ ಜಾರಿಯಲ್ಲಿದೆ. ಆದರೂ ಈ ರಾಜ್ಯಗಳ ಚುನಾವಣಾ ಫಲಿತಾಂಶಗಳ ಬಗ್ಗೆ ಬಿಜೆಪಿಗೆ ದೊಡ್ಡ ನಿರೀಕ್ಷೆಯೇನೂ ಇರುವಂತಿಲ್ಲ, ಹಾಗಾಗಿ ಪಕ್ಷದ ಹೆಚ್ಚಿನ ಗಮನವೆಲ್ಲ ಅಸ್ಸಾಂ ಮೇಲೆ ಕೇಂದ್ರೀಕೃತವಾಗಿದೆ. ಕಳೆದ ಚುನಾವಣೆಗಳಲ್ಲಿ 126 ಸ್ಥಾನಗಳ ಪೈಕಿ ಬಿಜೆಪಿಗೆ ಸಿಕ್ಕಿದ್ದು ಬರೀ 5 ಮಾತ್ರ. ಈ ಬಾರಿ ಹೇಗಾದರೂ ಮಾಡಿ ಅತ್ಯಧಿಕ ಸೀಟುಗಳನ್ನು ಗಳಿಸಬೇಕೆಂದು ಪಣತೊಟ್ಟಿರುವ ಅದು ಈಗ ಬಿಪಿಎಫ್ (ಬೋಡೋಲ್ಯಾಂಡ್ ಪೀಪಲ್ಸ್ ಫ್ರಂಟ್) ಮತ್ತು ಎಜಿಪಿ (ಅಸೋಂ ಗಣ ಪರಿಷದ್) ಜೊತೆ ಸೇರಿ ಮೈತ್ರಿಕೂಟವೊಂದನ್ನು ರಚಿಸುವ ಕಾರ್ಯವನ್ನು ಭರದಿಂದ ನಡೆಸಿದೆ. ರಣರಂಗದ ಇನ್ನೊಂದು ಕಡೆ ಬೇರೊಂದು ವಿಧದ ತಂತ್ರಗಾರಿಕೆ ಜಾರಿಯಲ್ಲಿದೆ. ಮುಖ್ಯಮಂತ್ರಿ ತರುಣ್ ಗೊಗೊಯ್ ಆಪ್ತ ಹಿಮಂತ ಬಿಸ್ವ ಸರ್ಮ ಇದೇ ಆಗಸ್ಟ್ ತಿಂಗಳಲ್ಲಿ ಕಾಂಗ್ರೆಸ್ ತ್ಯಜಿಸಿ ಬಿಜೆಪಿಗೆ ಸೇರಿಕೊಂಡ ನಂತರ ಇತ್ತೀಚೆಗೆ "ಆಪರೇಷನ್ ಕಮಲ" ಮೂಲಕ ಮತ್ತೂ 9 ಕಾಂಗ್ರೆಸ್ ಶಾಸಕರನ್ನು ಸೆಳೆದುಕೊಳ್ಳಲಾಗಿದೆ. ಮುಂದಿನ ದಿನಗಳಲ್ಲಿ ಇನ್ನಷ್ಟು ಕಾಂಗ್ರೆಸ್ ಶಾಸಕರು ಬಿಜೆಪಿಗೆ ಪಕ್ಷಾಂತರ ಮಾಡಲಿರುವರೆಂದು ಹೇಳಲಾಗುತ್ತಿದೆ. ಬಿಜೆಪಿ ವತಿಯಿಂದ ಈಗಾಗಲೆ ಹಲವಾರು ರ್‍ಯಾಲಿಗಳನ್ನು ನಡೆಸಲಾಗಿದೆ. ಗಮನಾರ್ಹವಾಗಿ ಇವುಗಳಲ್ಲೆಲ್ಲಾ ಎತ್ತಲಾಗುತ್ತಿರುವ ಮುಖ್ಯ ವಿಷಯವೆಂದರೆ ಬಾಂಗ್ಲಾದೇಶೀಯ ಮುಸ್ಲಿಂ ನಿರಾಶ್ರಿತರುದು. ಇದರ ಜೊತೆಗೆ ರಾಮಮಂದಿರ ನಿರ್ಮಾಣದ ವಿಷಯವನ್ನೂ ಸೇರಿಸಿಕೊಳ್ಳುವುದರ ಸ್ಪಷ್ಟ ಉದ್ದೇಶ ಮತದಾರರ ನಡುವೆ ಕೋಮು ಧ್ರುವೀಕರಣ ಸೃಷ್ಟಿಸುವುದಾಗಿದೆ.

ಅತ್ತ 2014ರಲ್ಲಷ್ಟೆ ಚುನಾವಣೆ ಎದುರಿಸಿದಂತಹ ಈಶಾನ್ಯ ರಾಜ್ಯ ಅರುಣಾಚಲ ಪ್ರದೇಶವನ್ನು ಬಿಜೆಪಿ ತೆಕ್ಕೆಗೆ ತೆಗೆದುಕೊಳ್ಳಲು ಮತ್ತೊಂದು ತಂತ್ರಗಾರಿಕೆಯನ್ನು ಬಳಸಲಾಗುತ್ತಿದೆ. ಅಲ್ಲಿ ರಾಷ್ಟ್ರಪತಿ ಆಡಳಿತ ಹೇರುವ ಪ್ರಯತ್ನವೊಂದು ಇತ್ತೀಚೆಗೆ ನಡೆಯಿತು. ಮುಖ್ಯಮಂತ್ರಿ ನಬಂ ತುಕಿ ಬಗ್ಗೆ ಅತೃಪ್ತರಾಗಿದ್ದ ರಾಜ್ಯದ 20 ಕಾಂಗ್ರೆಸ್ ಶಾಸಕರು ಸೇರಿಕೊಂಡು ಮುಖ್ಯಮಂತ್ರಿ ಸ್ವಜನಪಕ್ಷಪಾತ ಮತ್ತು ಭ್ರಷ್ಟಾಚಾರದಲ್ಲಿ ತೊಡಗಿರುವ ಕುರಿತು ಪಕ್ಷದ ಹೈಕಮಾಂಡ್‌ಗೆ ದೂರಿದ್ದರು. ಆದರೆ ಅದು ಅರಣ್ಯರೋದನವಾಗಿ ಪರಿಣಮಿಸಿದಾಗ ಹತಾಶರಾಗಿದ್ದ ಇವರನ್ನು ತಮ್ಮೆಡೆಗೆ ಸೆಳೆದ ಕೆಲವು ಬಿಜೆಪಿ ಶಾಸಕರು 'ಐಕ್ಯರಂಗ'ವೊಂದನ್ನು ಕಟ್ಟಿಕೊಂಡು "ಆಪರೇಷನ್ ತುಕಿ ಉರುಳಿಸುವಿಕೆ" ಎಂಬ ಯೋಜನೆಯೊಂದನ್ನು ಸಿದ್ಧಪಡಿಸಿ ಅದಕ್ಕೆ ಬಿಜೆಪಿ ನಿಷ್ಠಾವಂತ ರಾಜ್ಯಪಾಲರ ಅನಧಿಕೃತ ಅನುಮೋದನೆ ಪಡೆದುಕೊಂಡರು. ಬಳಿಕ 'ಸಮಾನಾಂತರ' ಸದನ ಕಲಾಪ ನಡೆಸಿ ಸ್ಪೀಕರ್ ನಬಂ ರೆಬಿಯಾರನ್ನು ಕಿತ್ತುಹಾಕಿ ಬೇರೊಬ್ಬ ನಾಯಕನನ್ನು ಚುನಾಯಿಸಿದರು! ಆದರೆ ಇದೀಗ ವಿವಾದ ಹೈಕೋರ್ಟ್ ಮೆಟ್ಟಲೇರಿರುವುದರಿಂದ ಸದ್ಯಕ್ಕಂತೂ "ಆಪರೇಷನ್ ಉರುಳಿಸುವಿಕೆ" ವಿಫಲವಾಗಿದೆ.

ಈಡೇರಿಸಲಾಗದ ಭರವಸೆಗಳ ಜೊತೆ ದೆಹಲಿ, ಬಿಹಾರ ಮೊದಲಾದೆಡೆಗಳ ಸೋಲುಗಳು ಮೋದಿ ಸರ್ಕಾರದ ಜನಪ್ರಿಯತೆಯ ಬ್ಯಾಂಕಿನ ಠೇವಣಿಯನ್ನು ಕ್ಷಿಪ್ರವಾಗಿ ಕರಗಿಸುತ್ತಿವೆ. ಇಂತಹ ಸನ್ನಿವೇಶದಲ್ಲಿ ಕೋಮು ಧ್ರುವೀಕರಣ, "ಆಪರೇಷನ್ ಕಮಲ" ಮೊದಲಾದ ತಂತ್ರಗಾರಿಕೆಗಳು ಅಥವಾ ಮೋದಿಯ ಮರುಳು ಮಾತುಗಳ ಚುನಾವಣಾ ಪ್ರಚಾರಗಳು ಈ ಬಾರಿ ಮತಗಟ್ಟೆಯಲ್ಲಿ ನಿರೀಕ್ಷಿಸಿದಷ್ಟು ಲಾಭ ತರಬಲ್ಲವೇ? ■



ಬುದ್ಧ, ಬಸವಣ್ಣನ ಹೋರಾಟವೂ ಅಸಹಿಷ್ಣುತೆ ವಿರುದ್ಧವೇ

ಜನನುಡಿಯ ಮೂರನೆ ವರ್ಷದ ಕಾರ್ಯಕ್ರಮ ನಡೆಯುತ್ತಿದೆ. ಇದರ ತಯಾರಿಗಾಗಿ ಬೆಂಗಳೂರಲ್ಲಿ ಒಂದು ಸಿದ್ಧತಾ ಸಭೆಯನ್ನು ಮಾಡಿದ್ದೆವು. ಅದರ ನಂತರ ಮಂಗಳೂರಲ್ಲಿ ನಡೆಯಿತು. ಪೂರ್ವಭಾವಿಯಾಗಿ ಬಹುತೇಕ ಜಿಲ್ಲೆಗಳಲ್ಲಿ ಯುವಕರು ಪತ್ರಿಕಾಗೋಷ್ಠಿಗಳನ್ನು ನಡೆಸಿ ಜಾಗೃತಿ ಮೂಡಿಸುವ ಕೆಲಸ ಮಾಡಿದ್ದಾರೆ. ಈ ಸಂದರ್ಭದಲ್ಲಿ ಬಹಳಷ್ಟು ಮಂದಿ ಅನೇಕ ಸಲಹೆಗಳನ್ನು ನೀಡಿದ್ದಾರೆ.. ಬಹಳ ಮುಖ್ಯವಾಗಿ ನೀವು ಸಭಾಂಗಣದಲ್ಲಿ ಮಾಡುವುದು ಬಿಟ್ಟು ಬೀದಿಗೆ ಬನ್ನಿ, ಕನಿಷ್ಠ ಟೌನ್‌ಹಾಲ್‌ನಲ್ಲಿಯಾದರೂ ಮಾಡಿ ಅಂದವರೇ ಹೆಚ್ಚು.


ನನಗೆ ಅನ್ನಿಸುವ ಹಾಗೆ, ಪ್ರತಿಯೊಂದು ಸಂಘಟನೆಗೂ ಅದರದ್ದೇ ಆಗಿರುವ ಹೋರಾಟದ ವಿಧಾನಗಳಿರುತ್ತವೆ. ಜನನುಡಿ ಮೂಲತಃ ಸಾಂಸ್ಕೃತಿಕ ಸ್ವರೂಪದ್ದು, ಹೋರಾಟದ್ದಲ್ಲ. ಜನನುಡಿಯ ಸಂಘಟನೆಯಲ್ಲಿ ಒಳಗೊಂಡಿರುವವರಲ್ಲಿ ಬಹಳಷ್ಟು ಮಂದಿ ಹೋರಾಟಗಾರರಿದ್ದಾರೆ. ಅವರು ಆ ಕೆಲಸವನ್ನು ಮಾಡುತ್ತಲೇ ಇದ್ದಾರೆ. ಜನನುಡಿ ಬೀದಿಗೆ ಬರಬೇಕೆ ಬೇಡವೇ ಎನ್ನುವ ಬಗ್ಗೆ ಮುಂದಿನ ದಿನಗಳಲ್ಲಿ ಚರ್ಚೆ ಮಾಡಬಹುದು. ಜನನುಡಿಯ ಉದ್ದೇಶದ ಬಗ್ಗೆ ನಿನ್ನೆಯಿಂದ ಅನೇಕ ಚಿಂತಕರು ತಮ್ಮದೇ ರೀತಿಯಲ್ಲಿ ವಿವರಿಸಿದ್ದಾರೆ. ಹೊಸ ಆಲೋಚನೆಗಳನ್ನು ಹುಟ್ಟುಹಾಕುವ ಮತ್ತು ಇವತ್ತಿನ ಸಂದರ್ಭದಲ್ಲಿ ನಮ್ಮ ವರ್ತಮಾನದ ಬಿಕ್ಕಟ್ಟುಗಳಿಗೆ ಪರ್ಯಾಯ ಹುಡುಕುವ ಪ್ರಯತ್ನ ಇಲ್ಲಿದೆ. ಇಲ್ಲಿ ಬಂದವರು ತಾವು ಕೇಳಿದ್ದನ್ನು, ಅರ್ಥ ಮಾಡ್ಕೊಂಡಿದ್ದನ್ನು ತಮ್ಮತಮ್ಮ ಹೋರಾಟದಲ್ಲಿ ಅಳವಡಿಸಿಕೊಳ್ಳುವಂತಾಗಬೇಕು. ಇದೇ ನಮ್ಮ ಉದ್ದೇಶ ಕೂಡಾ.

ವರ್ಷಕ್ಕೊಮ್ಮೆ ಸೇರೋದು, ಬಂಗಡೆ ಮೀನು ಊಟ ಮಾಡೋದು- ಇವೆಲ್ಲದರಿಂದ ಏನು ಪ್ರಯೋಜನ? ಎಂದು ಕೆಲವರು ಕಾಳಜಿಯಿಂದ ಇನ್ನು ಕೆಲವರು ಕೊಂಕಿನಿಂದ ಕೇಳಿದ್ದಾರೆ. ಹಾಗಿದ್ದರೆ ಜನನುಡಿಯಿಂದ ಏನೂ ಪ್ರಯೋಜನವೇ ಆಗಿಲ್ವೆ? ಕಳೆದೆರಡು ಜನನುಡಿ ಮತ್ತು ಈ ವರ್ಷದ ಜನನುಡಿಯನ್ನು ಮುಕ್ತಮನಸ್ಸಿನಿಂದ ನೋಡಿದರೆ ಪ್ರಶ್ನೆ ಕೇಳಿದವರಿಗೆ ಉತ್ತರ ಸಿಗಬಹುದು. ಇಲ್ಲಿ ಸೇರಿದ ಜನರ ಸಂಖ್ಯೆಯನ್ನು ಮಾತ್ರ ನೋಡಿ ಇದನ್ನು ಹೇಳ್ತಾ ಇಲ್ಲ. ಭಾಗವಹಿಸಿರುವ ಪ್ರೇಕ್ಷಕರ ಮುಖಗಳನ್ನು ನೋಡಿ ಈ ಮಾತು ಹೇಳ್ತಿದೀನಿ. ಚಿಂತಕರು, ಹೋರಾಟಗಾರರು, ಶಿಕ್ಷಕರು, ಅಧಿಕಾರಿಗಳು, ವಿದ್ಯಾರ್ಥಿಗಳು ಹೀಗೇ ನಾನಾ ವರ್ಗಗಳಿಗೆ ಸೇರಿದವರು ಪಾಲ್ಗೊಂಡಿದ್ದಾರೆ.

ಜನನುಡಿ ಒಂದು ರೀತಿಯಲ್ಲಿ ಇಡಿ ರಾಜ್ಯದಲ್ಲಿ ಸಾಂಸ್ಕೃತಿಕ ಎಚ್ಚರವನ್ನು ಮೂಡಿಸಿದೆ ಎನ್ನುವುದನ್ನು ಯಾವುದೇ ಅನುಮಾನ ಇಲ್ಲದೆ ಹೇಳಬಹುದು. ಯಾವುದೋ ಮುಖವಾಡಗಳನ್ನು ಧರಿಸಿ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ತಮ್ಮ ಹಿಡನ್ ಅಜೆಂಡಾದ ಭಾಗವಾಗಿ ನಡೆಸುತ್ತಿರುವವರ ನಿಜಬಣ್ಣ ಜನನುಡಿಯಿಂದ ಬಯಲಾಗಿದೆ. ಬಹಳಷ್ಟು ವರ್ಷಗಳ ಕಾಲ ಸಾಂಸ್ಕೃತಿಕ, ಧಾರ್ಮಿಕ ಮುಖವಾಡ ಹಾಕಿಕೊಂಡು ಕಾರ್ಯಕ್ರಮ ನಡೆಸುತ್ತಾ ಬಂದಿರುವವರ ಮುಖವಾಡ ಕಳಚಿಬೀಳುತ್ತಿದೆ. ನಾಡಿನ ಸಾಹಿತಿಗಳು, ಚಿಂತಕರು ಇದಕ್ಕೆ ಸಕಾರಾತ್ಮಕವಾಗಿ ಸ್ಪಂದಿಸುತ್ತಾ ಬಂದಿರುವುದು ಜನನುಡಿ ಸರಿಯಾದ ದಾರಿಯಲ್ಲಿ ಸಾಗುತ್ತಿದೆ ಎನ್ನುವುದನ್ನು ಸಾಬೀತುಗೊಳಿಸಿದೆ.

ವಿವೇಕಾನಂದರು ನೂರು ಮಂದಿ ಯುವಕರನ್ನ ಕೊಡಿ, ದೇಶವನ್ನೆ ಬದಲಾಯಿಸ್ತೀನಿ ಅಂದಿದ್ರು. ಇಲ್ಲಿ 500 ಮಂದಿ ಯುವಕರು ಬದಲಾವಣೆ ತರಲು ತಯಾರಾಗಿ ನಿಂತಿದ್ದಾರೆ. ನಾನು ಸಾಮಾನ್ಯವಾಗಿ ಹತಾಶೆ, ನಿರಾಶೆ, ವೈರಾಗ್ಯದ ಮಾತುಗಳನ್ನು ಆಡೋದಿಲ್ಲ, ನಾನು ಆಶಾವಾದಿ, ನನಗೆ ಈ ತಲೆಮಾರಿನ ಯುವಕರ ಬಗ್ಗೆ ಭರವಸೆ ಇದೆ. ಇದು ಮತ್ತೆಮತ್ತೆ ಸಾಬೀತಾಗುತ್ತಲೇ ಇದೆ.


ಸೋಷಿಯಲ್ ಮೀಡಿಯ ಒಂದು ನವಮಾಧ್ಯಮ. ನಾವು ಈ ನವ ಮಾಧ್ಯಮದ ಬಳಕೆಯಲ್ಲಿ ಹಿಂದೆ ಉಳಿದಿದ್ದೇವೆ. ನಮ್ಮಂತ ಕೆಲವರ ಮೇಲೆ ಅಲ್ಲಿ ನಿರಂತರವಾಗಿ ದಾಳಿ ನಡೆಯುತ್ತಿದೆ. ನಮ್ಮ ರೀತಿಯಲ್ಲಿ ಆಲೋಚನೆ ಮಾಡುವ ಹುಡುಗರು ಹುಡುಗಿಯರು ಅಲ್ಲಿ ಅಲ್ಪಸಂಖ್ಯಾತರಾಗಿದ್ದಾರೆ. ಈ ಬಾರಿಯ ಜನನುಡಿ ಈ ಕೊರತೆಯನ್ನು ನೀಗಿಸುವಂತೆ ಸಿದ್ಧತೆಯಿಂದ ಹಿಡಿದು ಕಾರ್ಯಕ್ರಮಗಳ ಪ್ರಚಾರದವರೆಗೆ ಈ ಎರಡು ದಿನಗಳವರೆಗೂ, ಸೋಷಿಯಲ್ ಮೀಡಿಯಾವನ್ನು ಅವಲಂಬಿಸಿಕೊಂಡಿದೆ. ಇದು ಬಹಳ ಮುಖ್ಯವಾದ ಕೆಲಸ. ನವಮಾಧ್ಯಮವನ್ನು ಸಮರ್ಪಕವಾಗಿ ಬಳಸಿಕೊಳ್ಳೋದು ನಮ್ಮ ಮುಂದಿರುವ ಬಹಳ ದೊಡ್ಡ ಸವಾಲು. ಇವತ್ತು ಹೋರಾಟಗಾರರ ಜೊತೆಗೆ ಕೆಲಸ ಮಾಡಬೇಕಾಗಿರುವ ಸಾಂಪ್ರದಾಯಿಕ ಮಾಧ್ಯಮ ನಮ್ಮ ಜೊತೆ ಇಲ್ಲ, ಪತ್ರಿಕೆಗಳ ಕವರೇಜ್ ನೋಡಿದ್ರೆ ಯಾರು ನಮ್ಮ ಜೊತೆ ಇದ್ದಾರೆ, ಯಾರು ಇಲ್ಲ ಅನ್ನುವುದು ಗೊತ್ತಾಗುತ್ತೆ, ನವಮಾಧ್ಯಮವಾದ



ಸೋಷಲ್ ಮೀಡಿಯಾ, ಓದುಗನೇ ಪತ್ರಕರ್ತನಾಗುವ ಮಾಧ್ಯಮ. ಇದಕ್ಕೆ ಪತ್ರಿಕೋದ್ಯಮದ ತರಬೇತಿ ಬೇಕಾಗಿಲ್ಲ, ಪತ್ರಿಕೆಗಳದ್ದು ಒನ್ ವೇ ಕಮ್ಯುನಿಕೇಷನ್. ಹೆಚ್ಚೆಂದ್ರೆ ವಾಚಕರ ವಿಭಾಗಕ್ಕೆ ಬರೆಯಬಹುದು. ಸೋಷಿಯಲ್ ಮೀಡಿಯಾ ಟು ವೇ ಕಮ್ಯುನಿಕೇಷನ್ ಸಾಧ್ಯವಾಗಿಸಿದೆ.

ನವ ಮಾಧ್ಯಮದಲ್ಲಿ ಹರಡಿದ ಮಾಹಿತಿಯ ಕಾರಣದಿಂದಲೇ ಇವತ್ತು ಇಷ್ಟೊಂದು ಜನ ಬಂದು ಸೇರಿದ್ದಾರೆ. ಮಂಗಳೂರಿನಂಥ ಸಮುದ್ರದ ಕಿನಾರೆಯಲ್ಲಿ ಜನನುಡಿ ನಡೀತಿದ್ರೂ ಬೀದರ್, ಧಾರವಾಡ, ಚಾಮರಾಜ ನಗರ ಮೊದಲಾದ ಕಡೆಯಿಂದ ಯುವಕ ಯುವತಿಯರು ಬಂದಿದ್ದಾರೆ. ಇವರು ಪ್ರೇಕ್ಷಕರು ಮಾತ್ರ ಅಲ್ಲ, ಹೋರಾಟ ಮುನ್ನಡೆಸುವ ನಾಯಕರು ಕೂಡ. ಅವರು ಇಲ್ಲಿ ಪಡೆಯೋದನ್ನು ಮುಂದಕ್ಕೆ ತಮ್ಮ ಹೋರಾಟಗಳಲ್ಲಿ ಕೊಂಡೊಯ್ತಾರೆ.

ಜನನುಡಿ ಕಾರ್ಯಕ್ರಮಕ್ಕೆ ಸರ್ಕಾರದಿಂದ ಧನಸಹಾಯ ಪಡೆದಿಲ್ಲ, 25 ರುಪಾಯಿಂದ ದೊಡ್ಡ ಮೊತ್ತದವರೆಗೂ ದೇಣಿಗೆ ಕೊಟ್ಟವರಿದ್ದಾರೆ. ಕೆಲವು ಹಿರಿಯ ಸಾಹಿತಿಗಳು, ಹೋರಾಟಗಾರರು ತಾವು ಅತಿಥಿಗಳಾಗಿ ಗೋಷ್ಠಿಗಳಲ್ಲಿ ಭಾಗವಹಿಸದೆ ಇದ್ದರೂ ಪ್ರೇಕ್ಷಕರಾಗಿ ಬಂದು ಕೂತಿದ್ದಾರೆ.. ಇದು ಅವರ ದೊಡ್ಡತನವನ್ನು ತೋರಿಸುತ್ತದೆ. ಅವರ ಬಗೆಗಿನ ಗೌರವವನ್ನು ಹೆಚ್ಚಿಸಿದೆ.



* * *

ಈ ಬಾರಿಯ ಜನನುಡಿಯಲ್ಲಿ ಮುಖ್ಯವಾಗಿ ಎರಡು ವಿಷಯಗಳು ಚರ್ಚೆಯಾಗಿವೆ; ಅಸಹಿಷ್ಣುತೆ ಮತ್ತು ಇಂದಿನ ಅಭಿವೃದ್ಧಿಯ ಮಾದರಿ. ಜೊತೆಗೆ ಕೋಮುವಾದ ಮತ್ತು ಮೌಢ್ಯಾಚರಣೆಗಳು.

ಈಗಾಗಲೇ ಬಹಳಷ್ಟು ಕಡೆ ಅಸಹಿಷ್ಣುತೆ ಕುರಿತು ಚರ್ಚೆ ಆಗಿದೆ. ಕಳೆದ ಮೂರು ತಿಂಗಳೀಚೆಗೆ ಅಷ್ಟೇ ಇದು ಶುರುವಾಗಿದ್ದಾ? ಅದಕ್ಕಿಂತ ಮುಂಚೆ ಎಲ್ಲವೂ ಸರಿಯಾಗಿತ್ತೇ? ಅಥವಾ ಈಗಲಾದರೂ ಹಾಗೇನೂ ಇಲ್ಲದೆ ಎಲ್ಲವೂ ಸರಿ ಇದೆಯಾ? ಅಸಹಿಷ್ಣುತೆ ಬಗ್ಗೆ ಮೇಲಿಂದ ಮೇಲೆ ಮಾತಾಡುವಾಗ ವಿರೋಧಿಗಳು ಮಾತ್ರವಲ್ಲ, ನಮ್ಮ ಜೊತೆ ಇರುವ ಕೆಲವರು ಕೂಡ ನಿಮ್ಮದು ಅತಿಯಾಯ್ತು ಎನ್ನುವುದುಂಟು.. ಹಾಗೆ ನೋಡಿದರೆ ಅಸಹನೆ, ಅಸಹಿಷ್ಣುತೆ ಅನ್ನೋದು ಕಳೆದ ಐದು ಸಾವಿರ ವರ್ಷಗಳಿಂದ ಈ ನೆಲದಲ್ಲಿದೆ. ಧಾರ್ಮಿಕ ಚಳವಳಿಯ ಪರಂಪರೆ ನೋಡಿದರೆ, ಅದಕ್ಕೆ ಎದುರಾಗಿ ಪ್ರತಿಭಟನಾ ಚಳವಳಿಗಳು ನಡೆಯುತ್ತಾ ಬಂದುದನ್ನು ಕಾಣಬಹುದು. ಬುದ್ಧನ ಹೋರಾಟ ಆ ಕಾಲದ ಅಸಹಿಷ್ಣುತೆಯ ವಿರುದ್ಧದ ಹೋರಾಟ. ಬಸವಣ್ಣನ ಹೋರಾಟ ಕೂಡ ಅಸಹಿಷ್ಣುತೆ ವಿರುದ್ಧದ ಹೋರಾಟವೇ ಆಗಿತ್ತು.

ಅಂಬೇಡ್ಕರ್, ನಾರಾಯಣ ಗುರು, ಪೆರಿಯಾರ್ ಹೀಗೆ ಎಲ್ಲ ಸಮಾಜ ಸುಧಾರಕರ ಹೋರಾಟಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ ಅವೆಲ್ಲವೂ ಆಯಾಕಾಲದ ಅಸಹಿಷ್ಣುತೆಯ ವಿರುದ್ಧದ ಹೋರಾಟಗಳೇ ಆಗಿವೆ. ದಲಿತರ, ಮಹಿಳೆಯರ, ಕಾರ್ಮಿಕರ, ಮುಸ್ಲಿಮರ ಬಗ್ಗೆ ಅಸಹಿಷ್ಣುತೆ ಬಹಳ ವರ್ಷಗಳಿಂದ ಇದೆ. ಅದು ಈ ಕೆಲವು ತಿಂಗಳಲ್ಲಿ ಹುಟ್ಟಿಕೊಂಡಿದ್ದಲ್ಲ, ಹಾಗಾದರೆ ವ್ಯತ್ಯಾಸ ಏನು?

ಸಾಮಾಜಿಕವಾದ ಅಸಹಿಷ್ಣುತೆಯನ್ನು ಎದುರಿಸಲು ನಮ್ಮ ಬಳಿ ಬಾಬಾಸಾಹೇಬ್ ಅಂಬೇಡ್ಕರ್ ನೀಡಿರುವ ಸಂವಿಧಾನ ಇದೆ. ಸಂವಿಧಾನದ ಆಶಯಗಳನ್ನು ಈಡೇರಿಸಲು ಶಾಸಕಾಂಗ, ನ್ಯಾಯಾಂಗ, ಕಾರ್ಯಾಂಗ, ಜೊತೆಗೆ ನಾಲ್ಕನೆಯ ಸ್ತಂಭವಾದ ಮಾಧ್ಯಮರಂಗವೂ ಇದೆ. ಆದರೆ ಅಸಹಿಷ್ಣುತೆಯ ವಿರುದ್ಧ ನಡೆಯುತ್ತಾ ಬಂದ ಹಿಂದಿನ ಮತ್ತು ಇಂದಿನ ಹೋರಾಟಗಳ ನಡುವೆ ಪ್ರಮುಖ ವ್ಯತ್ಯಾಸವೊಂದಿದೆ. ಅದು ಅಸಹಿಷ್ಣುತೆ ವಿರುದ್ಧ ದನಿ ಎತ್ತುವವರನ್ನು ದಮನಿಸಲು ಪ್ರಭುತ್ವವೇ ಟೊಂಕಕಟ್ಟಿ ನಿಂತಿರುವುದು.

ದಾದ್ರಿಯಲ್ಲಿ ಮುಸ್ಲಿಮ್ ವ್ಯಕ್ತಿಯೊಬ್ಬರ ಮನೆಯ ಫ್ರಿಜ್ಜಿನಲ್ಲಿ ದನದ ಮಾಂಸ ಇದೆಯೆಂದು ಆರೋಪಿಸಿ ಹಲ್ಲೆ ಮಾಡಿ ಹತ್ಯೆ ಮಾಡಲಾಯಿತು. ಇಂಥಾ ವಿಕೃತಿ ನಡೆದಾಗ ಈ ದೇಶದ ಪ್ರಧಾನಿ ತಕ್ಷಣಕ್ಕೆ ಪ್ರತಿಕ್ರಿಯೆ ನೀಡಲಿಲ್ಲ, ಬಹಳ ದಿನಗಳ ನಂತರ, ಅದು ಕೂಡ ಒತ್ತಡಕ್ಕೆ ಮಣಿದು ಕಾಟಾಚಾರಕ್ಕೆ ಒಂದು ಹೇಳಿಕೆ ಕೊಟ್ಟರು. ಮೌನದ ಮೂಲಕ ಪ್ರಧಾನಿ ಕೊಟ್ಟ ಸಂದೇಶ ಏನು? ಇಂಥ ಸಂದರ್ಭಗಳಲ್ಲಿ ಪ್ರಭುತ್ವ ಮೌನವಾಗಿದ್ದರೆ, ಅದು ದುರ್ಘಟನೆಗಳನ್ನು ಬೆಂಬಲಿಸುತ್ತಿದೆ ಎಂದು ಅರ್ಥವಲ್ಲವೇ?. ಜನರಿಂದ ಚುನಾಯಿತವಾದ ಸರ್ಕಾರ ಮಾತ್ರ ಪ್ರತಿರೋಧ ತೋರುವವರ ದಮನಕ್ಕೆ ನಿಂತಿದ್ದರೆ ಅದನ್ನು ಎದುರಿಸಬಹುದು. ಇದು ನಮಗೆ ರೂಢಿ ಇದೆ. ಆದರೆ ಇಂದು ಕೆಲವು ಸಂವಿಧಾನೇತರ ಶಕ್ತಿಗಳು ಚುನಾಯಿತ ಸರ್ಕಾರದ ಕಾರ್ಯಗಳನ್ನು ನಿರ್ವಹಿಸುತ್ತಿವೆ. ಈ ದೇಶದ ಶಿಕ್ಷಣ, ಸಾಂಸ್ಕೃತಿಕ ಹಾಗೂ ಆರ್ಥಿಕ ನೀತಿಗಳನ್ನು ರೂಪಿಸುತ್ತಿರುವುದು ಜನರಿಂದ ಚುನಾಯಿತಗೊಂಡ ಸರ್ಕಾರ ಅಲ್ಲ; ಅವು ನಾಗ್ಪುರದಲ್ಲಿ, ದೆಹಲಿಯ ಝುಂಡೇವಾಲಾದಲ್ಲಿ, ಕೇಶವಕೃಪಾದಲ್ಲಿ ನಡೆಯುತ್ತಿವೆ. ಈ ಸಂಘಟನೆಗಳು ಬಹಿರಂಗವಾಗಿ ಕಾಣಿಸಿಕೊಳ್ಳುವುದಿಲ್ಲ, ಚುನಾವಣೆಯಲ್ಲಿ ಸ್ಪರ್ಧಿಸುವುದಿಲ್ಲ, ಮತದಾರರ ಮುಂದೆ ಬರುವುದಿಲ್ಲ, ಅದು ಚುನಾಯಿತ ಪ್ರತಿನಿಧಿಗಳನ್ನು ಕೈಗೊಂಬೆಗಳನ್ನಾಗಿ ಮಾಡಿಕೊಂಡು ಸ್ವಯಂ ಆಡಳಿತ ನಡೆಸುತ್ತಿವೆ. ಶತ್ರುಗಳು ಯಾರು ಎಂದು ಗೊತ್ತಾಗದ ಸ್ಥಿತಿಯಲ್ಲಿ ನಾವಿಂದು ಇದ್ದೇವೆ. ನಾವು ಗುದ್ದಾಡುತ್ತಿರುವುದು ಮುಖವಾಡಗಳ ಜೊತೆ. ಅದರ ಹಿಂದಿರುವ ಮುಖಗಳನ್ನು ನಾವು ಗಮನಿಸುತ್ತಿಲ್ಲ, ಈ ಮುಖಗಳು ಆಗಾಗ ಒಂದೊಂದಾಗಿ ಮುಖವಾಡ ಕಳಚಿಟ್ಟು ಮತ್ತೊಂದನ್ನು ಮುಂದೊಡ್ಡುತ್ತವೆ. ಆಗ ನಾವು ಮತ್ತೊಂದು ಮುಖವಾಡದ ಜೊತೆ ಗುದ್ದಾಟ ಮುಂದುವರೆಸ್ತೇವೆ. ಇದರ ಬದಲಿಗೆ ಮುಖವಾಡ ತೊಟ್ಟವರನ್ನೇ ಬೆತ್ತಲು ಮಾಡಿ ಅದರ ಹಿಂದಿರುವ ಮುಖಗಳನ್ನು ಬಯಲು ಮಾಡಿದರೆ ಮಾತ್ರ ನಮ್ಮ ಹೋರಾಟವನ್ನು ತಾರ್ಕಿಕ ಅಂತ್ಯಕ್ಕೆ ಕೊಂಡೊಯ್ಯಲು ಸಾಧ್ಯ.

* * *

ದೇವನೂರರ ಜೊತೆ ಮಾತಾಡುವಾಗ 'ಇತ್ತೀಚೆಗೆ ನೀವು ಬಹಳ ಚೆನ್ನಾಗಿ ಮಾತಾಡ್ತಿದ್ದೀರಿ' ಎಂದು ನಾನು ಹೇಳಿದೆ. ಆಗ ಅವರು 'ನಾನು ಚೆನ್ನಾಗಿ ಮಾತಾಡ್ತಿದ್ದೀನಿ ಅಂದ್ರೆ ನಾನು ಸರಿಯಾಗಿಲ್ಲ ಅಂತ ಅರ್ಥ' ಅಂದುಬಿಟ್ಟರು. ನನಗೂ ಅದು ತಾಕಿತು. ಇತ್ತೀಚೆಗೆ ನನ್ನನ್ನು ಬಹಳ ಜನ ಮಾತಿಗೆ ಕರೀತಾರೆ. ಯಾಕೆ ಬರಬೇಕು ಅಂತ ಕೇಳಿದರೆ, ನೀವು ಚೆನ್ನಾಗಿ ಕಾಂಟ್ರೋವರ್ಸಿಯಾಗಿ ಮಾತಾಡ್ತಿರಿ ಎನ್ನುತ್ತಾರೆ. ಇದು ಹೊಗಳಿಕೆಯೋ ತೆಗಳಿಕೆಯೋ ಗೊತ್ತಿಲ್ಲ, ದೇವನೂರ ಮಹದೇವ ಅವರು ನಮ್ಮ ಮಾತನ್ನು ನಾವೇ ಕೇಳೋದನ್ನ ಮೊದಲು ಕಲೀಬೇಕು ಅನ್ನುತ್ತಾರೆ. ನಿಜ, ಮಾತು ಕಡಿಮೆ ಮಾಡ್ಬೇಕು ಅನ್ನುವವರಲ್ಲಿ ನಾನೂ ಒಬ್ಬ... ಆದ್ರೆ ಮಾತೇ ಆಡದೆ ಸುಮ್ಮನಿರೋದನ್ನ ನಾನು ಒಪ್ಪೋದಿಲ್ಲ... ಇದನ್ನು ಮಹದೇವ ಅವರೂ ಒಪ್ಪಲಾರರು.

ನಿನ್ನೆಯಿಂದ ಬಹಳ ಜನ ಚಿಂತಕರು, ಪರ್ಯಾಯ ಅನ್ನೋದು ಕ್ರಿಯೆಗೆ ಪ್ರತಿಕ್ರಿಯೆ ಆಗಬಾರದು ಎಂದು ಹೇಳಿದ್ದಾರೆ. ನನಗೆ ಇದು ಪೂರ್ತಿಯಾಗಿ ಸಮ್ಮತವಲ್ಲ.

ನೀವು ಮಾಧ್ಯಮಗಳಲ್ಲಿನ ಕೆಲವು ವರದಿಗಳನ್ನು ಗಮನಿಸಿರಬಹುದು. ಅಯ್ಯಪ್ಪ ಭಕ್ತರಿಗೆ ಮುಸ್ಲಿಮರಿಂದ ಊಟ ಇತ್ಯಾದಿ ಸುದ್ದಿಗಳು ಪ್ರಕಟವಾಗುತ್ತಿವೆ. ಇಂತಹ ಸುದ್ದಿಗಳು ಹೆಚ್ಚು ಹೆಚ್ಚು ಪ್ರಕಟವಾಗಬೇಕೆಂದು ಕೆಲವರು ಹೇಳುತ್ತಿರುತ್ತಾರೆ. ಇದರಿಂದ ಸಮಾಜದಲ್ಲಿ ಸಾಮರಸ್ಯ ಮೂಡುತ್ತದೆ ಎನ್ನುವುದು ಅವರ ವಾದ. ಆದರೆ ಅಷ್ಟು ಸಾಕಾ? ಕೇವಲ ಪಾಸಿಟಿವ್ ಸಂಗತಿಗಳಿಗೆ ಪ್ರಚಾರ ಕೊಡುವುದರಿಂದಲೇ ವಿಕೃತಿಗಳೆಲ್ಲ ಕಡಿಮೆಯಾಗಬಹುದೇ? ನಾವು ಕ್ರಿಯೆಗಳಿಗೆ ಪ್ರತಿಕ್ರಿಯೆಯನ್ನೆ ವ್ಯಕ್ತಪಡಿಸದೆ ಹೋದರೆ ಹೋರಾಟ ರೂಪಿಸಲು ಸಾಧ್ಯವೇ? ಯುವಕ ಗಾಂಧೀಜಿಯನ್ನು ದಕ್ಷಿಣ ಆಫ್ರಿಕಾದಲ್ಲಿ ರೈಲಿಂದ ಹೊರಗೆ ದೂಡಿದ್ದರಲ್ಲ ಅದೊಂದು ಕ್ರಿಯೆ. ಅದಕ್ಕೆ ಗಾಂಧೀಜಿ ಹೋರಾಟದ ಪ್ರತಿಕ್ರಿಯೆ ನೀಡದೆ ಅಲ್ಲಿನ ಬಿಳಿಯರ ಮನಃಪರಿವರ್ತನೆಗಾಗಿ ಉಪವಾಸ ಮಾಡಿದ್ದರೆ ಏನಾಗುತ್ತಿತ್ತು? ಬಹುಶಃ ದೇಶಕ್ಕೆ ಸ್ವಾತಂತ್ರ್ಯವೇ ಸಿಗುತ್ತಿರಲಿಲ್ಲವೇನೋ? ಇಲ್ಲವೇ ಇನ್ನಷ್ಟು ವಿಳಂಬವಾಗುತ್ತಿತ್ತೋ ಏನೋ? ಆ ಒಂದು ಕ್ರಿಯೆ ಗಾಂಧೀಜಿಯವರನ್ನು ತಟ್ಟಿದ ಕಾರಣದಿಂದಾಗಿಯೇ ಅವರು ಪ್ರತಿಕ್ರಿಯೆ ರೂಪದಲ್ಲಿ ಚಳವಳಿಯೊಂದನ್ನು ಕಟ್ಟಿದರು. ಅವರ ಇಡಿ ಹೋರಾಟ ಅಂತಹದ್ದೊಂದು ಪ್ರತಿಕ್ರಿಯೆ.. ನಾವು ಪ್ರತಿಕ್ರಿಯೆ ನೀಡದೆ ಸಹಿಷ್ಣುಗಳಾಗಿ ಉಳಿಯಬೇಕು ಅನ್ನುವಂಥ ಮಾತು ನಮ್ಮ ಹೋರಾಟದ ಕಿಚ್ಚನ್ನು ಮಂಕುಗೊಳಿಸುವಂತಹದ್ದು. ದ್ವೇಷಿಸಬೇಕಾದವರನ್ನು ದ್ವೇಷಿಸಬೇಕಾದಷ್ಟು ದ್ವೇಷಿಸದೆ ಇದ್ದರೆ ಪ್ರೀತಿಸಬೇಕಾದವರನ್ನು ಪ್ರೀತಿಸಬೇಕಾದಷ್ಟು ಪ್ರೀತಿಸಲಾಗುವುದಿಲ್ಲ, ಹಾಗಂತ ನಾವೇನೂ ಕತ್ತಿ ಗುರಾಣಿ ಹಿಡ್ಕೊಂಡು ಹೋರಾಡಬೇಕಾಗಿಲ್ಲ, ನಮ್ಮ ಹೋರಾಟ ಬೌದ್ಧಿಕವಾದುದು, ಎರಡು ಬಗೆಯ ಮನಸ್ಸುಗಳ ನಡುವಿನ ಹೋರಾಟ. ಇದನ್ನು ಎದುರಿಸಲು ಬೌದ್ಧಿಕವಾಗಿ ನಾವು ತಯರಾಗಬೇಕಾಗುತ್ತದೆ.

ನನ್ನ ಈ ಯೋಚನೆಯೇ ಸರಿ ಎಂದು ನಾನು ವಾದಿಸಲು ಹೋಗುವುದಿಲ್ಲ, ಹಳೆಯದೆಲ್ಲವನ್ನೂ ಮರೆತುಬಿಡಿ, ಟೆನ್ಷನ್ ಮಾಡ್ಕೊಳ್ಬೇಡಿ, ಪಾಸಿಟಿವ್ ಆಗಿ ಯೋಚನೆ ಮಾಡಿ, ಮೆಡಿಟೇಷನ್ ಮಾಡಿ, ಕಣ್ಣು ಮುಚ್ಚಿ ಧ್ಯಾನ ಮಾಡಿ ರಿಲಾಕ್ಸ್ ಆಗಿ ಎಂದು ಕೆಲವರು ಸಲಹೆ ನೀಡುತ್ತಾರೆ. ನನ್ನ ಪ್ರಕಾರ ಇದು ಮನುಷ್ಯ ವಿರೋಧಿ ಸಲಹೆ. ನಾವು ಕಣ್ಣು ಮುಚ್ಚಬಾರದು, ತೆರೆದು ನೋಡ್ಬೇಕು. ಬಾಯಿ ಮುಚ್ಚಬಾರದು, ತೆರೆದು ಮಾತಾಡ್ಬೇಕು. ಸಜ್ಜನರು ಮೌನಿಗಳಾಗಿದ್ದಾರೆ, ದುರ್ಜನರು ಕೂಗುಮಾರಿಗಳಾಗಿದ್ದಾರೆ ಎಂದು ಯು.ಆರ್. ಅನಂತಮೂರ್ತಿಯವರು ನಿಧನರಾದಾಗ ಎಲ್ಲೋ ಬರೆದಿದ್ದೆ. ಆದರೆ ಇತ್ತೀಚೆಗೆ ಸಜ್ಜನರು ಮೌನ ಮುರಿದುಮಾತನಾಡತೊಡಗಿದ್ದಾರೆ. ಸಾಹಿತಿಗಳ, ಕಲಾವಿದರ ಪ್ರಶಸ್ತಿ ವಾಪಸಾತಿ ಚಳವಳಿ ಅಂತಾರಾಷ್ಟ್ರೀಯ ಮಟ್ಟದಲ್ಲಿ ಸುದ್ದಿಯಾಗಿ ಸಂಚಲನ ಮೂಡಿಸಿದೆ. ಮೌನವಾಗೇ ಉಳಿದಿದ್ದರೆ ಈ ಬದಲಾವಣೆಯನ್ನು ನಾವು ಕಾಣಲು ಸಾಧ್ಯವಾಗುತ್ತಿರಲಿಲ್ಲ.

* * *

ಕಳೆದ ಲೋಕಸಭಾ ಚುನಾವಣೆ ಫಲಿತಾಂಶ ಬಂದ ಹೊಸತರಲ್ಲಿ ನಾನು ಮಾತನಾಡುತ್ತಾ 'ಇನ್ನು ಎರಡು ಮೂರು ವರ್ಷಗಳಲ್ಲಿ ಪತ್ರಿಕೆಗಳ ಹೆಡ್ ಲೈನ್ಸ್, ಚಾನಲ್‌ಗಳ ಬ್ರೇಕಿಂಗ್ ನ್ಯೂಸ್ ಹೇಗಿರಬಹುದೆಂದು ಈಗಲೇ ಹೇಳಬಲ್ಲೆ, ಆದರೆ ಹಾಗೆ ಹೇಳಿದರೆ ಯಾರೂ ನಂಬುವುದಿಲ್ಲ, ಅದಕ್ಕಾಗಿ ಹೇಳುವುದಿಲ್ಲ' ಎಂದು ಹೇಳಿದ್ದೆ. 2–3 ವರ್ಷ ಬೇಕಾಗಿಲ್ಲ, ಆ ಹೆಡ್‌ಲೈನ್ಸ್‌ಗಳು, ಬ್ರೇಕಿಂಗ್ ನ್ಯೂಸ್‌ಗಳು ಈಗಲೇ ಶುರುವಾಗಿಬಿಟ್ಟಿವೆ. ನಾನು ಆ ಮಾತನ್ನು ಹೇಳಿದ್ದಾಗ ನಮ್ಮವರೇ ಕೆಲವರು ಹೇಳುತ್ತಿದ್ದರು: 'ಅವರು ಬದಲಾಗಿದ್ದಾರೆ, ಮೊದಲಿನ ಹಾಗೆ ಇಲ್ಲ, ಒಂದು ಅವಕಾಶ ಕೊಡ್ಬೇಕು, ಅವರು ಅಭಿವೃದ್ಧಿಯ ಹರಿಕಾರರು, ನೀವು ಸುಮ್ಮನೆ ದ್ವೇಷ ಮಾಡ್ತೀರಿ' ಇತ್ಯಾದಿ. ನಾನು 2002ನೇ ಇಸವಿಯಿಂದ ಈ ಮಹಾನುಭಾವರನ್ನ ಫಾಲೋ ಮಾಡ್ತಾ ಇದ್ದೀನಿ. ಕೌಸರ್ ಬಾನು ಗಂಡ ತನ್ನ ಹೆಂಡತಿ ಮೇಲೆ ನಡೆದಿರುವ ದೌರ್ಜನ್ಯವನ್ನು ವಿವರಿಸಿದ್ದನ್ನು ನಾನೇ ಕೇಳಿದ್ದೀನಿ. ಕಾನೂನು ಏನೇ ಹೇಳಬಹುದು, ಇಂತಹ ಹೇಯಕೃತ್ಯಗಳು ನಡೆಯುವುದನ್ನು ತಡೆಯಲು ಸಾಧ್ಯವಾಗದವರು ನನ್ನ ಪ್ರಕಾರ ಮನುಷ್ಯರಲ್ಲ, ಅಂತಹವರು ದೇಶದ ನೇತೃತ್ವ ವಹಿಸಿದರೆ ನಾವೇನು ನಿರೀಕ್ಷಿಸಲು ಸಾಧ್ಯ? ಈ ಮಾತುಗಳನ್ನು ನಾನೊಬ್ಬನೇ ಹೇಳ್ತಾ ಇರೋದಲ್ಲ. ತೀಸ್ತಾ ಸೆಟಲ್ವಾಡ್‌ನಂತಹವರು, ಕೋಮು ಸಾಮರಸ್ಯಕ್ಕಾಗಿ

ಮಾಡುತ್ತಿರುವವರು ಕೂಗಿಕೂಗಿ ಹೇಳುತ್ತಾ ಬಂದಿದ್ದಾರೆ. ಅವೆಲ್ಲವೂ ಬಹಳ ಸಣ್ಣ ದನಿಯಲ್ಲಿ ದಾಖಲಾಗಿವೆ. ...ದೋ ಹುಡುಗಿ ಒಬ್ಬ ಹುಡುಗನ ಜೊತೆ ಸ್ನೇಹ ...ದರೆ ಸರ್ಕಾರವೇ ಅಧಿಕಾರಿಗಳನ್ನ ಛೂಬಿಟ್ಟು ಫಾಲೋ ...ಸುತ್ತೆ. ಸೈಕೋಪಾತ್‌ಗಳು ಮಾತ್ರ ಇಂತಹ ಕೆಲಸ ...ಲು ಸಾಧ್ಯ. ಇಂಥ ಜನಗಳಿಂದ ಮುಂದೇನಾಗುತ್ತೆ ಊಹಿಸೋಕೆ ಬಹಳ ದೊಡ್ಡ ಬ್ರಹ್ಮಜ್ಞಾನವೇನೂ ...ಗಿಲ್ಲ.

...ನ್ನು, ಅವರು ಅಭಿವೃದ್ಧಿಯ ಬಗ್ಗೆ ಮಾತಾಡ್ತಾರೆ. ಅಭಿವೃದ್ಧಿಯ ಮಾದರಿಗಳು ಎಷ್ಟು ಟೊಳ್ಳು ...ವುದು ಈಗಾಗಲೇ ಬಯಲಾಗಿದೆ. ನಾನೇ ಈ ಹಿಂದೆ ...ಅಂಶಗಳನ್ನು ಇಟ್ಟುಕೊಂಡು ಪತ್ರಿಕೆಯಲ್ಲಿ ಬರೆದಿದ್ದೆ. ...ನಂಬದವರು ಈಗ ಬಾಯಿ ಬಡ್ಕೊಳ್ತಾ ಇದ್ದಾರೆ. ನಮ್ಮ ಸಮಸ್ಯೆ.

* * *

...ಬದಲಾವಣೆಯಲ್ಲಿ ಬಹಳ ದೊಡ್ಡ ಪಾತ್ರ ವಹಿಸುತ್ತಾ ...ರುವುದು ಯುವ ಜನಾಂಗ. ರಾಜೀವ್ ಗಾಂಧಿಯವರು ...ಂಟನೇ ವಯಸ್ಸಿಗೆ ಮತದಾನದ ಹಕ್ಕು ಕೊಟ್ಟಿಟ್ರು. ಚಲಾಯಿಸುವ ಯುವಕರಿಗೆ ಅದಕ್ಕೆ ಬೇಕಾದ ...ದ್ಧತೆ ಇರದೆ ಇದ್ದರೆ ಆಗುವುದು ಅನಾಹುತವೇ.. ...ರು ಹತ್ತು ಪರ್ಸೆಂಟ್‌ನಷ್ಟು ಇರುವ ಈ ಹೊಸ ...ದಾರರು ಇತ್ತೀಚಿನ ರಾಜಕೀಯ ಬದಲಾವಣೆಯಲ್ಲಿ ...ಯಕ ಪಾತ್ರ ವಹಿಸಿದ್ದಾರೆ ಎಂದು ಹೇಳಲಾಗುತ್ತಿದೆ.. ...ಷಿಯಲ್ ಮೀಡಿಯಾದಲ್ಲಿ ನಮ್ಮ ಮೇಲೆ ...ಯುವ ಯುವಕ ಯುವತಿಯರನ್ನೆ ನೋಡಿ. ಎಲ್ಲಾ ...ಂಟರಿಂದ ಇಪ್ಪತ್ತೈದು ವಯಸ್ಸಿನವರು.

...ವು ಎರಡು ಮೂಲಗಳಿಂದ ಪಾಠ ಕಲೀತೀವಿ. ...ವದಿಂದ ಮತ್ತು ಇತಿಹಾಸದಿಂದ. ಆದರೆ ಈಗಿನ ...ಕ ಯುವಜನತೆ ಅನುಭವಗಳಿಗೆ ...ಕೊಳ್ಳೋದಿಲ್ಲ, ಇತಿಹಾಸ ತಿಳಿದುಕೊಳ್ಳೋದಿಲ್ಲ. ...ಸದಿಂದ ಪಾಠ ಕಲಿಯದವರು ಇತಿಹಾಸ ಸೃಷ್ಟಿಸೋಕೆ ...ಲ್ಲ ಅಂತ ಬಾಬಾ ಸಾಹೇಬ್ ಅಂಬೇಡ್ಕರರು ಹೇಳ್ತಾರೆ. ಇವತ್ತಿನ ಹುಡುಗರಿಗೆ ಇತಿಹಾಸದ ನೆನಪುಗಳೆ ...ರೋದು ಬಹುದೊಡ್ಡ ದುರಂತಕ್ಕೆ ಕಾರಣವಾಗಿದೆ.

...ೀಗಿದ್ದರೂ ನಾನು ಈಗಲೂ ಆಶಾವಾದಿ. ಇಂದಿನ ...ತಲೆಮಾರು ಬಹಳ ಚಂಚಲ ಸ್ವಭಾವದ್ದು. ಉದ್ಯೋಗ ...ವೆ ಎರಡನೆ ಉದ್ಯೋಗ ಹುಡುಕಿಕೊಳ್ತಾರೆ. ನಾವೆಲ್ಲ ...ನವಿಡೀ ಒಂದು ಉದ್ಯೋಗ, ಹೆಚ್ಚೆಂದರೆ ಎರಡು; ...ಮನೆ, ಒಂದು ಮದುವೆ ಹೀಗೆ ಬದುಕಿದವರು. ...ತಲೆಮಾರು 30ನೇ ವಯಸ್ಸಿನೊಳಗೆ ನಾಲ್ಕು ...ೋಗ ಬದಲಿಸಿರುತ್ತಾರೆ. ಸಾಧ್ಯವಾದರೆ ಎರಡು ಮದುವೆ ...ತ್ತಾರೆ. ಅವರು ಬಹಳ ದಿನ ಒಂದು ಸಂಬಂಧ, ಆಲೋಚನೆಗೆ ಅಂಟಿಕೊಂಡು ಇರಲಾರರು. ಇಷ್ಟು ...ಅವರು ನಿಜವಾದ ಭಕ್ತರಂತೆ ತಾವು ನಂಬಿದ ...ದಿಂದ ಉದ್ಯೋಗದ ಸುರಿಮಳೆಯಾಗುತ್ತೆ, ...ಜೇನಿನ ಹೊಳೆ ಹರಿಯುತ್ತೆ ಅಂತೆಲ್ಲ ...ಕೊಂಡಿದ್ದರು. ನಮ್ಮ ಭಾರತ ಜಗತ್ತಿಗೆ ಸವಾಲೆಸೆದು ...ಶ್ರೈ ರಾಷ್ಟ್ರವಾಗುತ್ತದೆ ಎಂದೆಲ್ಲ ಕನಸು ಕಾಣುತ್ತಿದ್ದರು. ...ವುದೂ ಆಗುವುದಿಲ್ಲವೆಂದು ಅವರಿಗೆ ಗೊತ್ತಾಗ ...ಗಿದೆ. ಇದನ್ನು ಒಮ್ಮೆಲೆ ಒಪ್ಪಿಕೊಳ್ಳಲು ಅವರ ...ಅಡ್ಡ ಬರುತ್ತಿದೆ. ಇದರಿಂದಾಗಿ ಅವರು ಇನ್ನಷ್ಟು ...ರಾಗಿ, ವ್ಯಗ್ರರಾಗಿ ತಮ್ಮ ದೇವರ ಬೆಂಬಲಕ್ಕೆ ...ದ್ದಾರೆ. ಆದರೆ ಕೊನೆಗೊಂದು ದಿನ ಯಾರನ್ನ ಅವರು ...ಂದು ತಿಳಿದು ಭಜನೆ ಮಾಡ್ತಾ ಇದ್ದಾರೋ ಅದೇ ...ನ್ನ ಬೀದಿಗೆಸೆದು ಮುಂದೆ ನಡೀತಾರೆ. ಅದಕ್ಕಾಗಿ ...ಣ, ಜಾಗೃತಿ ಹುಟ್ಟಿಸುವ ಕೆಲಸ ಮಾಡುತ್ತಾ ...ಾ.

...ತ್ತೀಚೆಗೆ ಅಭಿವ್ಯಕ್ತಿ ಸ್ವಾತಂತ್ರ್ಯದ ಹರಣದ ಬಗ್ಗೆ ...ನಡೆಯುತ್ತಿದೆ. ಅಭಿವ್ಯಕ್ತಿ ಸ್ವಾತಂತ್ರ್ಯದ ಹರಣವನ್ನು ...ಟಸದೆ ಮೌನವಾಗಿರೋದು ಒಂದು ಬಗೆಯ ...ದರೆ; ನಮಗೆ ಇರುವ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ...ದೇ ಇರೋದು ಮಹಾಪಾಪ. ಕಣ್ಣೆದುರಿನ ...ನಗಳನ್ನು ನೋಡಿ ಬಾಯಿ ಮುಚ್ಚಿಕೊಂಡಿರೋದು, ...ದ-ಪ್ರತಿಕ್ರಿಯಿಸದೆ ಇರೋದು ಜೀವವಿರೋಧಿ ಇದು ಅಭಿವ್ಯಕ್ತಿ ಸ್ವಾತಂತ್ರ್ಯ ಹರಣಕ್ಕಿಂತ ಹೆಚ್ಚಿನ ...ಕಾರಿ ಸಂಗತಿ. ಅಭಿವ್ಯಕ್ತಿ ಸ್ವಾತಂತ್ರ್ಯದ ಹರಣದ ...ದ ನಮ್ಮ ಪ್ರತಿಭಟನೆ ಹೇಗಿರಬೇಕೆಂದರೆ ನಾವು ...ಹೆಚ್ಚು ದಿಟ್ಟತನದಿಂದ ಮಾತಾಡಬೇಕು, ಓದಬೇಕು, ...ರಿಕಾರರು ಇನ್ನೂ ಹೆಚ್ಚುಹೆಚ್ಚು ಕಾದಂಬರಿ ...ಬೇಕು, ಕವಿಗಳು ಹೆಚ್ಚು ಹೆಚ್ಚು ಕವನಗಳನ್ನು ...ಬೇಕು, ಲೇಖಕರು ಹೆಚ್ಚು ಲೇಖನಗಳನ್ನ ...ಬೇಕು, ಜತೆಗೆ ಓದುಗರು ಹೆಚ್ಚು ಪುಸ್ತಕಗಳನ್ನು ...ಸಬೇಕು. ಇದು ಅರ್ಥಪೂರ್ಣವಾದ ಮತ್ತು ...ಪರಿಣಾಮಕಾರಿಯಾದ ಪ್ರತಿಭಟನೆ.

...ವು ಬಹಳಷ್ಟು ಸಂದರ್ಭಗಳಲ್ಲಿ ಪರ್ಯಾಯ ಅಂದರೆ ...ಅಂತ ತಿಳಿದುಕೊಳ್ಳುತ್ತೇವೆ. ಅದು ಹಾಗಲ್ಲ, ಸುಳ್ಳಿಗೆ ಸತ್ಯ ಪರ್ಯಾಯವಲ್ಲ. ಯಾರೋ ಸಮಾರಂಭ ಮಾಡಿದರು ಎಂದು ಅದರ ವಿರುದ್ಧ ನಾವಿದನ್ನು ಮಾಡುತ್ತಿಲ್ಲ, ನಾವು ಹೊಸತನ್ನು ಕಟ್ಟುತ್ತಾ ಇದ್ದೀವಿ. ಈ ಅರ್ಥದಲ್ಲಿ ಪರ್ಯಾಯ ಎಂದರೆ ಹೊಸದನ್ನು ಕಟ್ಟುವುದು. ನಮ್ಮ ಬಹಳ ದೊಡ್ಡ ಸಮಸ್ಯೆ ಅಂದ್ರೆ, ಕಟ್ಟುವವರು ಬಹಳ ಬೇಗ ಒಡೆದುಹೋಗ್ತಾರೆ ಮತ್ತು ಒಡೆಯುವವರು ಬಹಳ ಬೇಗ ಒಂದಾಗ್ತಾರೆ. ನಮ್ಮಲ್ಲೇ ಅಂಬೇಡ್ಕರ್, ಬುದ್ಧ ಲೋಹಿಯಾ, ಮಾರ್ಕ್ಸ್ – ಹೀಗೆ ಅನೇಕ ವಿಚಾರಧಾರೆಗಳ ಅನುಯಾಯಿಗಳು ಇದ್ದೇವೆ. ನಮ್ಮೆಲ್ಲರ ಆಲೋಚನೆಗಳು ಒಂದೇ ಆದರೂ ಒಟ್ಟಾಗಿ ಕೆಲಸ ಮಾಡುವಲ್ಲಿ ಸೋಲುತ್ತಿದ್ದೇವೆ. ಜನನುಡಿಯನ್ನು ಆಯೋಜಿಸುವಾಗಲೂ ನಮ್ಮನ್ನು ಕರೀಲಿಲ್ಲ, ನಮಗೆ ತಿಳಿಸಲಿಲ್ಲ ಎಂಬ ಗೊಣಗಾಟಗಳು ಕೇಳಿಬಂದಿತ್ತು. ಸತ್ಯನಾರಾಯಣ ಪೂಜೆಗೋ, ಮಕ್ಕಳ ಮದುವೆಗೋ ಆಹ್ವಾನ ನೀಡಬೇಕು. ಅಂತಹ ಆಹ್ವಾನವಿಲ್ಲದೆ ಹೋಗಬಾರದು. ಆದರೆ ದಯವಿಟ್ಟು ಸಮಾನ ಮನಸ್ಕರು ನಡೆಸುವ ಕಾರ್ಯಕ್ರಮಗಳಿಗೆ ಬರಲು ಆಹ್ವಾನ ನಿರೀಕ್ಷಿಸಬೇಡಿ. ಇಂಥವುಗಳಲ್ಲಿ ಪಾಲ್ಗೊಳ್ಳೋದು ನಮ್ಮ ಕರ್ತವ್ಯ ಅಂದುಕೊಂಡು ಬನ್ನಿ. ನಾನು ಇದನ್ನು ಪಾಲಿಸ್ತಾ ಇರೋದರಿಂದಲೇ ಇತರರಿಗೂ ಹೇಳುವ ಹಕ್ಕು ನನಗಿದೆ ಎಂದು ತಿಳಿದುಕೊಂಡಿದ್ದೀನಿ. ಇವತ್ತು ಪ್ರತಿ ಜಿಲ್ಲೆಯಲ್ಲಿಯೂ ಸಮಾನ ಚಿಂತನೆಯ ಜನ ಸೇರಿ ಕಟ್ಟಿರುವ ಸಂಘಟನೆಗಳಿವೆ. ಅವೆಲ್ಲವನ್ನೂ ಒಂದು ಸೂತ್ರದ ಅಡಿಯಲ್ಲಿ ಒಗ್ಗೂಡಿಸಬೇಕಾಗಿರುವುದು ಇಂದಿನ ಅನಿವಾರ್ಯತೆ. ಒಟ್ಟಿಗೆ ಸೇರಿಸಿ ಕಟ್ಟುವ ಈ ಕೆಲಸ ರಾಜಕೀಯ ಪಕ್ಷಗಳಿಂದ ಆಗುವ ಕೆಲಸವಲ್ಲ, ಅವುಗಳಿಗೆ ಅವರದ್ದೇ ಆಗಿರುವ ಇತಿಮಿತಿಗಳಿವೆ. ಅಭಿಮತದಂತಹ ಸಂಘಟನೆಗಳಿಂದ ಇದು ಸಾಧ್ಯವಿದೆ. ಇಂತಹ ಕಾರ್ಯಕ್ರಮಗಳು ನಮ್ಮ ಸಂವಿಧಾನದ ಆಶಯಗಳಿಗನುಗುಣವಾಗಿ ನಡೆಯುವಂತಹದ್ದು. ಇದರಲ್ಲಿ ಅಧಿಕಾರಿಗಳಿಂದ ಹಿಡಿದು ಜನಪ್ರತಿನಿಧಿಗಳ ವರೆಗೆ ಎಲ್ಲರೂ ಭಾಗವಹಿಸಬಹುದು.

ಪರ್ಯಾಯ ಅಭಿವೃದ್ಧಿ, ಪರ್ಯಾಯ ರಾಜಕಾರಣ ಅನ್ನುವ ಮಾತುಗಳನ್ನ ನಾವು ಆಡುತ್ತಲೇ ಬಂದಿದ್ದೇವೆ, ಸಮಸ್ಯೆಗಳು ನಮಗೂ ಗೊತ್ತು, ಅವನ್ನೇ ಹೇಳ್ತಾ ಇರುವ ಬದಲು ಪರ್ಯಾಯ ಹೇಳಿ ಎಂದು ಸ್ವಲ್ಪ ಹೊತ್ತಿನ ಮೊದಲು ಯುವಪತ್ರಕರ್ತೆಯೊಬ್ಬಳು ನನ್ನನ್ನು ಹಿಡಿದು ನಿಲ್ಲಿಸಿ ಕೇಳಿದ್ದಳು. ಇದು ನಮ್ಮ ಯುವಜನಾಂಗದ ಸಮಸ್ಯೆ. ನಮಗೆ ದಿಢೀರ್ ಪರಿಹಾರ ಬೇಕು. ಪರೀಕ್ಷೆ ಬರೆಯಲು ಪಠ್ಯಪುಸ್ತಕ ಓದುವಷ್ಟು ತಾಳ್ಮೆ ಇಲ್ಲ, ಅದಕ್ಕಾಗಿ ಗೈಡ್ ಓದಿ ಪಾಸಾಗಲು ಹೊರಡುತ್ತಾರೆ. ಪರ್ಯಾಯ, ಪರಿಹಾರವನ್ನು ಕಂಡುಕೊಳ್ಳುವುದು ಅರ್ನಬ್ ಗೋಸ್ವಾಮಿ ರೀತಿ ಯೆಸ್ ಇಲ್ಲವೆ ನೋ ಹೇಳಿ ಎಂದು ಕೇಳಿ ಉತ್ತರ ಪಡೆಯುವಷ್ಟು ಸುಲಭವಲ್ಲ.

ಹೌದು ಪರಿಹಾರಗಳು ಸುಲಭವಾಗಿ ಕಣ್ಣಿಗೆ ಕಾಣುತ್ತಿಲ್ಲ. ಹಾಗೆ ಕಂಡಿದ್ದರೆ ಇಂದಿನ ಪರಿಸ್ಥಿತಿ ಹೀಗೆ ಯಾಕೆ ಇರುತ್ತಿತ್ತು. ಸಾಮಾನ್ಯವಾಗಿ ಪರಿಹಾರವನ್ನು ಕಂಡುಕೊಳ್ಳುವ, ಪರ್ಯಾಯ ಕಟ್ಟುವ ಜವಾಬ್ದಾರಿಯನ್ನು ನಿರ್ವಹಿಸುತ್ತಾ ಬಂದಿರುವುದು ಚಳವಳಿಗಳು. ಆದರೆ ಈ ಹಿಂದಿನ ಚಳವಳಿಗಳು ನಿಷ್ಕ್ರಿಯವಾಗಿವೆ. ರೈತಚಳವಳಿ ಹಿಂದಿನಂತೆ ಸಕ್ರಿಯವಾಗಿ ಇದ್ದಿದ್ದರೆ ಇಂದು ರೈತರು ಈ ಪ್ರಮಾಣದಲ್ಲಿ ಆತ್ಮಹತ್ಯೆಗೆ ಇಳಿಯುತ್ತಿರಲಿಲ್ಲ. ಎಸ್.ಎನ್. ಬಾಲಗಂಗಾಧರನಂತ ಒಬ್ಬ ಮನುಷ್ಯ ವಿರೋಧಿ ಅಂಬೇಡ್ಕರ್ ಅವರನ್ನು ಈಡಿಯಟ್ ಎಂದು ಕರೆದಿರುವಾಗ ರಾಜ್ಯದಲ್ಲಿ ದಲಿತ ಸಂಘಟನೆಗಳು ಹೇಗೆ ಪ್ರತಿಕ್ರಿಯಿಸಬೇಕಿತ್ತು? ಆದರೆ ಆಗಿದ್ದೇನು? ಇತ್ತೀಚೆಗೆ ದಲಿತ ಸಂಘಟನೆಯ ಕಾರ್ಯಕ್ರಮವೊಂದರಲ್ಲಿ ಈ ಬಗ್ಗೆ ಪ್ರಸ್ತಾಪಿಸಿದಾಗ, ಏನೂ ಗೊತ್ತಿಲ್ಲದವರಂತೆ ನನ್ನನ್ನೇ ಏನಾಗಿದೆಯೆಂದು ವಿಚಾರಿಸಿದರು. ಇದು ಏನನ್ನು ಸೂಚಿಸುತ್ತದೆ? ಕಲಬುರ್ಗಿಯವರನ್ನು ಛೋಟಾ ರಾಜನ್‌ಗೆ ಹೋಲಿಸುವ ಮತ್ತು ಸಂವಿಧಾನಕ್ಕೆ ಅಪಚಾರವಾಗುವಂತೆ ಮಾತನಾಡುತ್ತಿರುವ ಬಾಲಗಂಗಾಧರ್ ಅವರಂತಹ ಸಮಾಜವಿರೋಧಿಗಳ ಬಗ್ಗೆ ಇಷ್ಟೊಂದು ಸಹಿಷ್ಣುತೆ ಅಗತ್ಯವಿದೆಯೆ? ಇಂಥ ಪರಿಸ್ಥಿತಿಯಲ್ಲಿ ನಮ್ಮ ತಲೆಗೆ ನಮ್ಮದೇ ಕೈ. ಇಂಥ ವ್ಯಕ್ತಿ ಮತ್ತು ಸಂಗತಿಗಳ ವಿರುದ್ಧ ಸಂಘಟಿತರಾಗಿ ದನಿ ಎತ್ತದೆ ಇದ್ದರೆ ನಮಗೆ ಉಳಿಗಾಲವಿಲ್ಲ. ಇದನ್ನೇ ದೇಶ ಕಾಲ ಮುಖಾಮುಖಿ ಎಂದು ಕರೆದಿದ್ದು. ಮುಖಾಮುಖಿ ಅಂದರೆ ಆ ಕಡೆಯಿಂದ ದೇಶ, ಈ ಕಡೆಯಿಂದ ಕಾಲ ಎದುರುಬದುರಾಗಿ ಡಿಕ್ಕಿ ಹೊಡೆಯೋದಾ ಅಂತ ಕೆಲವರು ಕುಹಕವಾಡಿದ್ರು. ಅದು ಹಾಗಲ್ಲ. ಚಲನಶೀಲವಾದ ಕಾಲಕ್ಕೆ ನಮ್ಮ ಸಮಸ್ಯೆಗಳನ್ನು ಮುಖಾಮುಖಿಯಾಗಿಸೋದು ಇದರ ಉದ್ದೇಶ.

ಇದು ಮೂರನೆಯ ಜನನುಡಿ. ಇದು ಮೂರಕ್ಕೆ ಮುಕ್ತಾಯವಾಗುವುದಿಲ್ಲ, ಇನ್ನೂ ನೂರು ನಡೆಯಬೇಕು. ಹೆಚ್ಚೆಚ್ಚು ಜನ ಇದರಲ್ಲಿ ಭಾಗಿಯಾಗುತ್ತ ಹೋಗಬೇಕು. ಅಭಿಮತದ ಯುವಕರು ಇದನ್ನು ಸಾಧ್ಯವಾಗಿಸಿದ್ದಾರೆ. ಇಂಥಾ ಯುವಕರು ಇದ್ದರೆ ಯಾವ ಬದಲಾವಣೆಯನ್ನಾದರೂ [illegible] ಭರವಸೆಯನ್ನ, ವಿಶ್ವಾಸವನ್ನ ಜನನುಡಿ ನಮ್ಮೆಲ್ಲರಲ್ಲಿ ಮೂಡಿಸಿದೆ.

■ ದಿನೇಶ್ ಅಮೀನ್ ಮಟ್ಟು

ಹೊಸ ವರ್ಷಾಚರಣೆಯ ಅಸಹಿಷ್ಣುತೆಗೆ
ಶಕ ವರ್ಷವೇ ಉತ್ತರ

ನಮ್ಮ ಸಾಮಾನ್ಯ ಮಾತುಗಳಲ್ಲಿ ಎಂದೂ ಕಾಣಿಸಿಕೊಳ್ಳದಂತಹ 'ಸಹಿಷ್ಣುತೆ' ಎಂಬ ಪದವನ್ನು ನಾವೆಲ್ಲ ಮೊದಲು ಕೇಳಿದ್ದು ಶಾಲಾಪಾಠಗಳಲ್ಲಿ, ಆ ರಾಜ ಪರಮತ ಸಹಿಷ್ಣುವಾಗಿದ್ದ ಅದೂ ಇದೂ ಎಂದು. ಆದರೀಗ ಸಹಿಷ್ಣುತೆ-ಅಸಹಿಷ್ಣುತೆ ಎಂಬ ಪದ ಎಲ್ಲರ ಬಾಯಲ್ಲೂ ಸಾಮಾನ್ಯವೆಂತೆನಿಸಿಬಿಟ್ಟಿದೆ. ಇದು ಎಷ್ಟರಮಟ್ಟಿಗೆ ಜನರ ಬಾಯಲ್ಲಿ ಹರಿದಾಡುತ್ತಿದೆಯೆಂದರೆ, ಆ ಪದದ ಮೌಲ್ಯವೇ ನಕಾರಾತ್ಮಕವಾಗಿ ಬದಲಾಗುವಷ್ಟರಮಟ್ಟಿಗೆ ಇದು ಹಬ್ಬಿದೆ. ನಿಮಗೆ ಗೊತ್ತಿರಬಹುದು. ಒಂದು ಕಾಲದಲ್ಲಿ 'ಬುದ್ಧಿಜೀವಿ' ಎಂಬ ಪದಕ್ಕೆ ಅದರದ್ದೇ ಆದ ಮೌಲ್ಯವಿದ್ದಿತ್ತು. ಆದರೆ ವಿಶ್ವೇಶ್ವರ ಭಟ್ಟರಂತವರು ಉದ್ದೇಶಪೂರ್ವಕವಾಗಿ ಅದನ್ನು ಆಡಿಕೊಳ್ಳುವಂತಹ ಕೀಳುಮಟ್ಟದ ಪದವನ್ನಾಗಿಸಿ ಅದರ ಕುಲಗೆಡಿಸಿಬಿಟ್ಟದ್ದುಂಟು. ಇದೀಗ ಮೇಲಿನ ಪದವೂ ಕೂಡ ಇದೇ ಹಾದಿ ಹಿಡಿದಿದೆ. ಸಹಿಷ್ಣು ಅಸಹಿಷ್ಣು ಎಂಬುವುದೇ ಒಂದು ಜೋಕ್ ಎನ್ನುವಷ್ಟರ ಮಟ್ಟಿಗದು ಕುಲಗೆಟ್ಟುಬಿಟ್ಟಿದೆ.



ಸಹಿಷ್ಣುತೆ- ಅಸಹಿಷ್ಣುತೆ (ಅಸಹನೆ) ಎಂಬುದು ಮನುಷ್ಯನ ಮೂಲ ಗುಣದಲ್ಲೇ ಇದೆ. ಆತ ಅಲ್ಟಿಮೇಟ್ ಅಥವ ಪರ್ಫೆಕ್ಟ್ ರೂಪ ಎಂದು ಪರಿಗಣಿಸಲ್ಪಡುವ ಆತನ ಸೃಷ್ಟಿಯಾದ ದೇವರಲ್ಲೂ ಇದು ಪ್ರತಿಬಿಂಬಿಸಲ್ಪಟ್ಟಿದೆ. ಇಲ್ಲಿ ಅಸಹಿಷ್ಣುತೆ ಎಂಬುದು ಈಗ ಇದೆಯೋ ಇಲ್ಲವೋ ಎನ್ನುವುದಕ್ಕಿಂತ ಅದರ ಪ್ರಭಾವ ಈಗ ಎಂತದ್ದೆಂಬುದಷ್ಟೆ ಮುಖ್ಯ ಪ್ರಶ್ನೆಯಾಗಿ ನಮ್ಮ ಮುಂದೆ ನಿಂತಿದೆ. ಬೇರೆಲ್ಲ ವಿಚಾರಗಳನ್ನು ಬದಿಗಿಟ್ಟು ಇತ್ತೀಚೆಗಿನ ಕೆಲ ವರ್ಷಗಳಿಂದ ನನ್ನ ಗಮನಕ್ಕೆ ಬಂದ ಸಾಮಾನ್ಯ ವಿಚಾರವೊಂದರ ಕುರಿತಾಗಿ ಇದನ್ನು ಬರೆಯುತ್ತಿದ್ದೇನೆ. ಅದು ಹೊಸವರ್ಷಾಚರಣೆಯ ವಿಚಾರ.

ನಿಯಮಿತವಾಗಿ ಪುನರಾವರ್ತನೆಗೊಳ್ಳುವ ಮಳೆಚಳಿಗಳಂತಹ ಋತುಮಾನಗಳು, ಗಿಡಮರಗಳ ನಿರ್ದಿಷ್ಟ ಪ್ರಾಕೃತಿಕ ಬದಲಾವಣೆಗಳು ಇತ್ಯಾದಿಗಳನ್ನು ಗಮನಿಸಿ ಅದರ ಆಧಾರದಲ್ಲಿ ಈ ವರ್ಷ ಕಾಲಮಾನವನ್ನು ಮಾನವ ಗುರುತಿಸಿಕೊಂಡ. ಚಂದ್ರನ ನಿಯಮಿತ ಬದಲಾವಣೆಗಳನ್ನು ಗಮನಿಸಿ ತಿಂಗಳುಗಳ ರಚನೆಗೊಂಡಿತು. ಕನ್ನಡದಲ್ಲಿ ತಿಂಗಳು ಎಂದರೆ ಚಂದ್ರ ಎಂಬ ಅರ್ಥವೂ ಇದೆ. ಉದಾಹರಣೆಗೆ: ತಿಂಗಳ ಬೆಳಕು, ಬೆಳದಿಂಗಳು ಇತ್ಯಾದಿ. ಅದೇ ರೀತಿ ವರ್ಷ ಎಂದರೆ ಮಳೆ ಎಂಬರ್ಥವೂ ಇದೆ. ಸುಲಭ ಗ್ರಹಿಕೆಯಲ್ಲಿ ಒಂದು ಮಳೆ ಸಮಯದಿಂದ ಇನ್ನೊಂದು ಮಳೆ ಸಮಯದ ವರೆಗಿನ ಕಾಲಮಾನ ಇದು.

ಇವೆಲ್ಲ ಭೂಮಿ ಪಥ ಚಲನೆಯ ಸ್ಪಷ್ಟತೆಯಿರದ ಕಾಲಮಾನದಲ್ಲಿ ಕಂಡುಕೊಂಡ ಋತುಮಾನವನ್ನು ಸುಲಭದಲ್ಲಿ ಗುರುತಿಸುವ ಪ್ರಕ್ರಿಯೆಗಳಾದರೆ ಇಂದು ಪಥ ಚಲನೆಯಲ್ಲಿನ ಸಣ್ಣ ವ್ಯತ್ಯಾಸವನ್ನೂ ಗಮನಿಸಲಾಗುತ್ತಿದೆ (ಕೆಲ ವರ್ಷದ ಹಿಂದೆ ನಮ್ಮ ಗಡಿಯಾರವನ್ನು ಒಂದೆರಡು ಸೆಕೆಂಡ್ ಹೆಚ್ಚುಕಡಿಮೆ ಇಟ್ಟುಕೊಳ್ಳಲು ವಿಜ್ಞಾನಿಗಳು ಸೂಚಿಸಿದ್ದರು). ಇವೇನೇ ಇದ್ದರೂ ವರ್ಷದ ವ್ಯಾಪ್ತಿಯ (365.25 ದಿನ) ಬಗ್ಗೆ ನಮಗೆಲ್ಲ ತಿಳಿದಿದೆಯೇ ಹೊರತು ಅದು ಯಾವಾಗ ಆರಂಭಿಸಬೇಕೆಂಬ ಸಮಸ್ಯೆ (ಕೋಳಿ ಮೊದಲೋ ಮೊಟ್ಟೆ ಮೊದಲೋ ಎಂಬಂತೆ) ಮೊದಲಿಂದಲೂ ಮಾನವನಿಗೆದುರಾಗಿತ್ತು. (ಏಪ್ರಿಲ್ ಫೂಲ್ ಆಚರಣೆಗೆ ಈ ಗೊಂದಲದ ಕಾರಣಕ್ಕೇ ಹುಟ್ಟಿಕೊಂಡಿತು) ಆದರೂ ವಿಶ್ವದಾದ್ಯಂತ ಜನರು ಯಾವ ತಕರಾರುಗಳಿಲ್ಲದೇ ಜನವರಿಯಿಂದಲೇ ವರ್ಷಾಚರಣೆಯನ್ನು ಆಚರಿಸಲಾಗುತ್ತಿದ್ದಾರಾದರೂ ಅದಕ್ಕೂ ಇದೀಗ ಕಂಟಕ ಎದುರಾಗಿದೆ. ಕೆಲ ಸಂಪ್ರದಾಯವ್ಯಾಧಿಗಳು ಮಾಮೂಲಿನಂತೆ ಜನವರಿ ಒಂದಕ್ಕೆ ಶುಭಾಶಯ ಹೇಳುವವರನ್ನು ನಿಂದಿಸಿ 'ಇದು ನಮ್ಮ ಹೊಸ ವರ್ಷವಲ್ಲ, ನಮ್ಮ ಹೊಸ ವರ್ಷ ಯುಗಾದಿ. ಅದನ್ನೇ ಆಚರಿಸಬೇಕು, ಇದನ್ನಲ್ಲ' ಎಂದು ಅಪಸ್ವರದ ರಾಗವನ್ನು ಬಿತ್ತುತ್ತಿದ್ದಾರೆ. ದೊಡ್ಡವರ ಕಥೆ ಬಿಡಿ ಚಿಕ್ಕ ಮಕ್ಕಳಲ್ಲೂ ಇದು ನಮ್ಮದಲ್ಲ; ತಿರಸ್ಕರಿಸಬೇಕಾದ ಸಂಗತಿ ಎಂಬ ವಿಷವನ್ನು ಪ್ರತ್ಯಕ್ಷ ಯಾ ಪರೋಕ್ಷ ರೀತಿಯಲ್ಲಿ ತುಂಬುತ್ತಿದ್ದಾರೆ. ಇದು ನಿಜಕ್ಕೂ ಎಷ್ಟು ಸರಿ?

ಸರಿ, ಈ ವರ್ಷಾಚರಣೆಯ ಕುರಿತ ಐತಿಹಾಸಿಕ ಸಹಾಸತತೆ ಏನಿದೆಯಷ್ಟು ಎಂಬುವುದನ್ನ ನೋಡಹೊರಟರೆ ವಸ್ತುಸ್ಥಿತಿ ಬೇರೆಯದನ್ನೇ ತೋರಿಸುತ್ತಾ. ನಾಗು [illegible] ಅದು ಅದು ತಮ್ಮದೆಂದು ಕಳ್ಳರಂತೆ ಬಿಂಬಿಸಿಕೊಳ್ಳುವ ಸಂಸ್ಕೃತದ ವಾರಸುದಾರರು ಕ್ರಿಸ್ತ ವರ್ಷಾಚರಣೆ ನಮ್ಮದಲ್ಲ ಎನ್ನುವುದು ಮೇಲ್ನೋಟಕ್ಕೆ ಹೌದೆನಿಸಿದರೂ ಅವರೀಗ ಆಚರಿಸುವ ಶಕವರ್ಷಾಚರಣೆಯೂ ಪಕ್ಕಾ ಕದ್ದ ಮಾಲೇ ಆಗಿದೆಯೆಂಬುವುದು ಐತಿಹಾಸಿಕ ಸತ್ಯ.


ರಾಜಾ ವಿಕ್ರಮಾದಿತ್ಯನಿಗೆ 'ಶಕಾರಿ' ಎಂಬ ಬಿರುದಿದೆ. ಅರ್ಥಾತ್ ಅದು ಶಕರ ವೈರಿ ಎಂದರ್ಥ. ಹೊಸ ಶಕೆ, ಶಕ ಪುರುಷ, ಶಕ ವರ್ಷ ಎಂಬಲ್ಲಿ ಬರುವ ಯುಗ ಅಥವ ಕಾಲಮಾನ ಎಂಬ ಅರ್ಥ ಕೊಡುವ 'ಶಕ' ಎನ್ನುವ ಶಬ್ದ ಇದೇ ವಿಕ್ರಮಾದಿತ್ಯ ಸೋಲಿಸಿದ ಶಕರಿಗೇ ಸಂಬಂಧಿಸಿದ್ದಾಗಿದೆ. ಕ್ರಿಸ್ತಪೂರ್ವ ಕಾಲದಿಂದಲೂ ಈ ಶಕರು, ಹೂಣರು ಮುಂತಾದವರು ಭಾರತ ಉಪಖಂಡದ ಮೇಲೆ ದಂಡೆತ್ತಿ ಬರುತ್ತಿದ್ದರು. ಅಂತವರಲ್ಲಿ ಈ ಮಧ್ಯ ಏಷ್ಯಾದ ಶಕ ಅಥವ ಸೀಥಿಯನ್ (Scythians) ಜನಾಂಗ ಮಗಧದವರೆಗೆ ಭಾರತವನ್ನಾಕ್ರಮಿಸಿ ಆಳಿದ್ದವು. ಇಂತಹ ಶಕರನ್ನು ಹಿಮ್ಮೆಟ್ಟಿಸಿದ್ದು ವಿಕ್ರಮಾದಿತ್ಯನಾದ ಕಾರಣ ಆತನಿಗೆ ಶಕಾರಿ ಎಂಬ ಬಿರುದು.

ಭಾರತದಲ್ಲಿ ಶಕರಿಗೂ ಮೊದಲು ವರ್ಷಗಣನೆಯ ಪದ್ಧತಿ ಇದ್ದಿತಾದರೂ ಅದು ಬೇಕಾಬಿಟ್ಟಿ ಎಂಬಂತಿತ್ತೇ ಹೊರತು ಯಾವ ನಿಯಮಗಳಿಗೂ ಒಳಪಟ್ಟಿದ್ದಿರಲಿಲ್ಲ. ಪ್ರತಿಯೊಬ್ಬ ರಾಜನೂ ತಾನು ಪಟ್ಟಕ್ಕೇರಿದ ಬಳಿಕ ತನ್ನ ಹೆಸರು ಚಿರಸ್ಥಾಯಿಯಾಗಿರಲೆಂದು ತನ್ನ ಹೆಸರಿನ ವರ್ಷಾಚರಣೆಯನ್ನು ಪಟ್ಟವೇರಿದಂದಿನಿಂದ ಆರಂಭಿಸುತ್ತಿದ್ದ. ಆದರೆ ಭಾರತದ ಕೆಲ ಪ್ರದೇಶವನ್ನಾಳಿದ ವೈರಿ ಶಕರ ಇಂತಹ ವರ್ಷಾಚರಣೆಯಲ್ಲಿ ಇಂತಹ ಯಾವ ಗೊಂದಲಗಳೂ ಇಲ್ಲದೇ ಅವರ ವರ್ಷಾಚರಣೆ ಎಲ್ಲರಿಗೂ ಸುಲಭ ಗ್ರಾಹ್ಯವಾಗಿರುವಂತಿತ್ತು. ಶಕ ದೊರೆಗಳು ನಂತರ ಭಾರತ ಬಿಟ್ಟು ಹೋದರೂ ಇಲ್ಲಿನ ಜನಸಮುದಾಯದಲ್ಲೇ ಬೆರೆತ ಇತರರು ಹಾಗು ಸ್ಥಳೀಯರು ಈ ಶಕ ಪದ್ಧತಿಯನ್ನೇ ಉಳಿಸಿಕೊಂಡು ಮುಂದುವರೆಸಿದರು. ನಂತರ ಅದು ವಿಕ್ರಮಾದಿತ್ಯನ ಹೆಸರಲ್ಲಿ ವಿಕ್ರಮ ಶಕೆ, ಶಾಲಿವಾಹನ ಶಕೆ, ಏನೇನೋ ಮುಖ್ಯ ಶಕೆಗಳಾಗಿ ಮುಂದುವರೆದವಾದರೂ ಇವುಗಳಿಗೆಲ್ಲ ಮೂಲಪ್ರೇರಣೆ ಮಾತ್ರ ಭಾರತಕ್ಕೆ ಕಪ್ಪು ಸಮುದ್ರದ ಉತ್ತರ ಭಾಗದಿಂದ ಬಂದ ಶಕ (ಸೀಥಿಯನ್) ಜನಾಂಗವೇ ಆಗಿತ್ತು.

ಯಾವ ಜ್ಞಾನಕ್ಕೂ ಹಿಂದೂ, ಮುಸ್ಲಿಮ್, ಕ್ರಿಶ್ಚಿಯನ್ ಹಾಗು ದೇಸಿ-ಪರದೇಸೀ ಎಂಬ ಭೇದಗಳಿಲ್ಲ. ನಾವೆಲ್ಲ ಬಳಸುವ ಮೊಬೈಲ್ ಫೋನ್‌ಗಳು ಉಪಗ್ರಹ ನಿಯಂತ್ರಿತವಾದವುಗಳು. ಈ ಉಪಗ್ರಹ ಸಂಶೋಧನೆಗೆ ಕೋಟಿಗಟ್ಟಲೆ ಸುರಿದು ಆರಂಭಿಕ ತಳಗಟ್ಟನ್ನು ಹಾಕಿದವರು ಅಮೆರಿಕಾ ಹಾಗು ರಷ್ಯನ್ನರು. ನಾವು ಬಳಸುವ ಯಂತ್ರಗಳ ಮೂಲ ಶೋಧನೆಗಳೆಲ್ಲ ನಡೆದದ್ದು ಯೂರೋಪ್ ದೇಶಗಳಲ್ಲಿ. ನಮ್ಮ ಭಾರತದ ಸೊನ್ನೆ ಎಲ್ಲಾ ದೇಶಗಳಲ್ಲಿ ಬಳಸಲ್ಪಡುತ್ತಿದೆ. ಜನವರಿ ತಿಂಗಳ ಹೊಸವರ್ಷಾಚರಣೆ ನಮ್ಮ ದೇಶದ್ದಲ್ಲ, ಅದನ್ನು ವಿರೋಧಿಸಿ ಅನ್ನುವವರು ಆ ದೇಶ ಕಂಡುಹಿಡಿದ ಕಾರು, ಬಸ್ಸು, ಟೆಲಿಫೋನ್, [illegible]

■ ಶಶಿ ಪುತ್ತೂರು, ದಕ

ಕುಲಮದ ಮತ್ತು ಅಸಹಿಷ್ಣುತೆ



"ಅಂಬೇಡ್ಕರ್ ಒಬ್ಬ ಮೂರ್ಖ. ಅವನಿಗೆ ಕೊಲಂಬಿಯಾ ವಿಶ್ವವಿದ್ಯಾಲಯ ಹೇಗೆ ಡಾಕ್ಟರೇಟ್ ಕೊಟ್ಟಿತೋ!?"

"ಕಲಬುರ್ಗಿ ಅನೈತಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದ ವ್ಯಕ್ತಿ. ಅದೇ ಅವರ ಕೊಲೆಗೆ ಕಾರಣವಾಗಿರಬಹುದು!"

"ಕಲಬುರ್ಗಿಯ ಬೌದ್ಧಿಕ ನಿಷ್ಠೆ ಮತ್ತು ನೈತಿಕತೆ ಭೂಗತ ದೊರೆ ಛೋಟಾ ರಾಜನ್‌ನನ್ನು ನಾಚಿಸುವಂತಿತ್ತು!"

"ದಾದ್ರಿ ಪ್ರಕರಣದಲ್ಲಿ ಹೊಡೆತ ತಿಂದು ಸತ್ತ ಮುಸ್ಲಿಂ ಒಬ್ಬ ಹಸುವಿನ ಕಳ್ಳನಾಗಿದ್ದ!"

ಈ ಮೇಲಿನ ಹೇಳಿಕೆಗಳನ್ನು ಓದಿ ಇದು ಒಬ್ಬ ತಲೆ ಕೆಟ್ಟವನ ಅಥವಾ ಮಾನಸಿಕ ರೋಗಿಯ ಪ್ರಲಾಪ ಎಂದು ಓದುಗರು ಅಂದುಕೊಳ್ಳಬಹುದು. ಆದರೆ ಈ ಹೇಳಿಕೆಗಳು ಎಸ್.ಎನ್.ಬಾಲಗಂಗಾಧರ ಎಂಬ ಬೆಲ್ಜಿಯಂ ದೇಶದ ವಿದ್ವಾಂಸನ ಇತ್ತೀಚಿನ ಲೇಖನ ಮತ್ತು ಭಾಷಣದ ಸಾರಾಂಶ. ಈ ವಿಕೃತ ವಿದ್ವಾಂಸ ಬೆಲ್ಜಿಯಂನಲ್ಲಿ ನೆಲೆಸಿ ಈಗ ಕೋಮುವಾದಿಗಳ ಮತ್ತು ಜಾತಿವಾದಿಗಳ ಉದ್ಧಾರಕ್ಕಾಗಿ ಅವತರಿಸಿರುವ ವ್ಯಕ್ತಿ. ಈ ಆಮದು ವಿದ್ವಾಂಸನ ಕುಲ-ಮದದ ಅಮಲು ಹೇಗಿದೆಯೆಂದರೆ ಇತ್ತೀಚೆಗೆ ಹೈದರಾಬಾದ್‌ನ ಇಂಗ್ಲಿಷ್ ಮತ್ತು ಫಾರೀನ್ ಲಾಂಗ್ವೆಜಸ್ ವಿಶ್ವವಿದ್ಯಾಲಯದಲ್ಲಿ ಭಾಷಣ ಮಾಡುತ್ತಾ "ದಲಿತ, ಹಿಂದುಳಿದ ವರ್ಗಗಳ ಉಪನ್ಯಾಸಕರು ಅಸಮರ್ಥರು, ಮೂರ್ಖರು ಮತ್ತು ಜಾತಿ ಸರ್ಟಿಫಿಕೇಟ್ ಇರುವ ಕತ್ತೆಗಳು" ಎಂದು ಮೂದಲಿಸಿದ್ದಾನೆ. ಇವನ ವಿಕೃತ ಆರ್ಭಟ ಮತ್ತೆ ಮುಂದುವರೆದು ಈ ದೇಶದ ಅಸಹಿಷ್ಣುತೆಗೆ 'ಅಂಬೇಡ್ಕರವಾದಿ-ಭಯೋತ್ಪಾದಕರು' ಕಳೆದ ನಾಲ್ಕು ದಶಕಗಳಿಂದ ಕೊಡುಗೆ ನೀಡಿದ್ದಾರೆ ಎಂದು ಹೇಳಿದ್ದಾನೆ. ಮತಾಂಧತೆ, ಕುಯುಕ್ತಿ, ಅಪ್ರಮಾಣಿಕತೆ ಮತ್ತು ಸುಳ್ಳು ಇವೆಲ್ಲವೂ ಅಕಡೆಮಿಕ್ ಮತ್ತು ಸಮಾಜಶಾಸ್ತ್ರೀಯ ಪರಿಭಾಷೆಗಳಲ್ಲವಾದರೂ ಅದನ್ನೇ ಬಂಡವಾಳ ಮಾಡಿಕೊಂಡು ಸಂಶೋಧನೆಯ ಹೆಸರಿನಲ್ಲಿ ಅವೈದಿಕ ಸಂಸ್ಕೃತಿ ಮತ್ತು ಅಭಿಪ್ರಾಯಗಳನ್ನು ನಿಂದಿಸುವ ಅಥವಾ ತುಚ್ಛವಾಗಿ ಕಾಣುವ ಒಂದು ಮೂರ್ಖರ ಪಡೆಯನ್ನೇ ಈತ ಕಟ್ಟಿಕೊಂಡಿದ್ದಾನೆ. ಒಬ್ಬ ಸಾಧಾರಣ ಮನುಷ್ಯನಲ್ಲಿ ಇರಬೇಕಾದ ಕನಿಷ್ಠ ಮಟ್ಟದ ಮಾನವೀಯ ಸೂಕ್ಷ್ಮತೆಗಳು ಇಲ್ಲದೆ ದಾದ್ರಿ ಪ್ರಕರಣದಲ್ಲಿ ಕೊಲ್ಲಲ್ಪಟ್ಟ ಮುಸ್ಲಿಂ ವಯೋವೃದ್ಧನನ್ನು ಒಬ್ಬ ಹಸುವಿನ ಕಳ್ಳ ಎಂದು ಆರೋಪಿಸಿದ್ದಾನೆ. ಈ ಮುಸ್ಲಿಂ ವಯೋವೃದ್ಧ ಹಸು ಕದ್ದ ಬಗ್ಗೆ ಯಾವುದೇ ದಾಖಲೆಗಳಿಲ್ಲದಿದ್ದರೂ ಈ ತರಹದ ಹುಸಿ ಸುದ್ದಿಯನ್ನು ಹಬ್ಬಿಸುವ ಈ ವ್ಯಕ್ತಿಯ ಮಾನಸಿಕ ಸ್ಥಿತಿ ಎಂತಹುದಿರಬಹುದು? ಕ್ರೂರವಾಗಿ ಹೊಡೆದು ಕೊಲ್ಲಲ್ಪಟ್ಟ ಒಬ್ಬ ವಯೋವೃದ್ಧನ ಸಾವನ್ನು ವಿಶ್ಲೇಷಿಸುವ ಮತ್ತು ಬಿಂಬಿಸುವ ಪರಿಯೇ ಅಸಹ್ಯ ತರುವಂತಹುದ್ದು.

ಇನ್ನು ಪ್ರೊ.ಕಲಬುರ್ಗಿಯವರ ಬಗ್ಗೆ ಈತ ಮಾಡುವ ಆರೋಪ ನೋಡಿ ಹೇಗಿದೆ. ಎಲ್ಲವೂ ಕಪೋಲಕಲ್ಪಿತ. ದಾಬೋಲ್ಕರ್ ಮತ್ತು ಪನ್ಸಾರೆಯವರ ಕೊಲೆಗೆ ಅವರ ಅನೈತಿಕ ಚಟುವಟಿಕೆಗಳು ಕಾರಣವೇ? ಬಹುಶಃ ಅವರ ಉದಾರ ಮಾನವತಾವಾದಿ ನಿಲುವುಗಳು ಈತನ ವಿಕೃತ ಮನಸ್ಸಿಗೆ ಅನೈತಿಕವಾಗಿ ಕಂಡಿರಬಹುದೇನೋ? ಸರ್ಕಾರವೇ ಕೊಡುವ ಅಂಕಿಅಂಶಗಳ ಪ್ರಕಾರ ಯಾಕೆ ಒಂದೇ ಸಮುದಾಯದ ಮತ್ತು ಜಾತಿಯ ಜನ ಹೆಚ್ಚು ಕೊಲೆಯಾಗುತ್ತಾರೆ? ಇದು ಬಾಲಗಂಗಾಧರ ಹೇಳುವಂತೆ ಕಾನೂನು ಮತ್ತು ಸುವ್ಯವಸ್ಥೆಯ ಸಮಸ್ಯೆಯೆ? ಹಾಗಾದರೆ ಈ ದೇಶದಲ್ಲಿ ಅಸ್ತಿತ್ವದಲ್ಲಿರುವ ಕಾನೂನು, ಶ್ರೇಣೀಕೃತ ವ್ಯವಸ್ಥೆಯಿಂದ ಮುಕ್ತವಾಗಿದ್ದರೆ, ಕೆಲವು ಜಾತಿ ಮತ್ತು ಸಮುದಾಯಗಳಿಗೆ ಯಾಕೆ ಸೂಕ್ತ ರಕ್ಷಣೆ ಒದಗಿಸುತ್ತಿಲ್ಲ?

ವಿಚಿತ್ರವೆಂದರೆ ಈತನ ಭಟ್ಟಂಗಿಗಳ ಗುಂಪು ಇವನೊಬ್ಬ ಮಹಾ ದಾರ್ಶನಿಕ, ಸಂಭವಾಮಿ ಯುಗೇ ಯುಗೇ ಎಂದು ಪರಾಕು ಹಾಕುತ್ತಾ ದಶಕದ ಹಿಂದೆ ಕುವೆಂಪು ವಿಶ್ವವಿದ್ಯಾಲಯಕ್ಕೆ ಬರಮಾಡಿಕೊಂಡು ಬಡ ವಿದ್ಯಾರ್ಥಿಗಳಿಗೆ ಮೀಸಲಿಟ್ಟ ಹಣವನ್ನು ಈ ಬಾಲಗಂಗಾಧರನ ಚಟುವಟಿಕೆ ಮತ್ತು ಚರ್ಚೆಗಳಿಗೆ ಧಾರೆ ಎರೆದಿದ್ದರು. ವಿಶ್ವವಿದ್ಯಾಲಯದ ಕಳೆದ ಇಪ್ಪತ್ತೈದು ವರ್ಷಗಳ ಇತಿಹಾಸದಲ್ಲಿ ಯಾವ ವಿಭಾಗಕ್ಕೂ ಅಷ್ಟು ಅಲ್ಪ ಸಮಯದಲ್ಲಿ ಅಷ್ಟು ದೊಡ್ಡ ಮೊತ್ತದ ಹಣವನ್ನು ವಿ.ವಿ.ಯಿಂದ ಕೊಟ್ಟ ಉದಾಹರಣೆಗಳಿಲ್ಲ. ಇವರಿಗಾಗಿ ಭವ್ಯವಾದ ಕೋಣೆಗಳು, ಇಂಟರ್‌ನೆಟ್, ಕಂಪ್ಯೂಟರ್ ಇತ್ಯಾದಿ ಸೌಕರ್ಯಗಳು ಮತ್ತು ಒಂದು ಹೊಸ ಕಟ್ಟಡವನ್ನೂ ಮೀಸಲಿಡಲಾಗಿತ್ತು. ವಿಪರ್ಯಾಸವೆಂದರೆ ಕುವೆಂಪು ವಿ.ವಿ.ಯ ಅಂಬೇಡ್ಕರ್ ಅಧ್ಯಯನ ಕೇಂದ್ರವನ್ನು ನವೀಕರಿಸಿದ ಸಾರ್ವಜನಿಕ ಶೌಚಾಲಯದಲ್ಲಿ ಈಗಲೂ ನಡೆಸಲಾಗುತ್ತಿದೆ. ಅಂಬೇಡ್ಕರ್ ಸಿದ್ಧಾಂತದ ಒಲವಿರುವವರೇ ಹೆಚ್ಚಾಗಿರುವ ಕುವೆಂಪು ವಿವಿಯಲ್ಲಿ ಈತನನ್ನು ಸಹಿಸಿಕೊಂಡು ಪುರಸ್ಕರಿಸಿರುವುದನ್ನು ಹೇಗೆ ಅರ್ಥೈಸಿಕೊಳ್ಳಬೇಕು? ಸಹಿಷ್ಣುತೆಯೋ ಅಥವಾ ಅಸಹಿಷ್ಣುತೆಯೋ?

ಈ 'ಆಮದು ಜಗದ್ಗುರು'ಗಳ ಉವಾಚ ಕೇಳೋಣ, ಕಲಿಯೋಣ, ಹೊಸದನ್ನು ಕೇಳಿ ನಮ್ಮ ಜ್ಞಾನ ಮತ್ತು ತಿಳಿವಳಿಕೆಯನ್ನು ವಿಸ್ತರಿಸಿಕೊಳ್ಳೋಣವೆಂದು ಕರ್ನಾಟಕದ ಶೈಕ್ಷಣಿಕ ವರ್ಗ ಈತನನ್ನು ಆಹ್ವಾನಿಸಿ ಮುಕ್ತ ಮನಸ್ಸಿನಿಂದ ಚರ್ಚಿಸಿದಾಗ ಈತ ಜಾತಿ ಮತ್ತು ಕೋಮುದ್ವೇಷವನ್ನು ಕಕ್ಕುವುದನ್ನು ಬಿಟ್ಟರೆ ಬೇರೇನನ್ನೂ ಮಾಡಲಿಲ್ಲ. ಪ್ರೊ. ಕಲಬುರ್ಗಿ, ದಾದ್ರಿ ಪ್ರಕರಣ ಮತ್ತು ಅಂಬೇಡ್ಕರ್ ಬಗ್ಗೆ ಈ ವಿದ್ವಾಂಸನ ದುರಭಿಪ್ರಾಯಗಳು ಭಯಾನಕವಾಗಿ ಮತ್ತು ಸಮಾಜ-ವಿರೋಧಿಯಾಗಿ ಕಂಡರೂ, ಈತನ ಬಗ್ಗೆ ತಿಳಿದವರಿಗೆ ಎಳ್ಳಷ್ಟೂ ಆಶ್ಚರ್ಯವಾಗುವುದಿಲ್ಲ.

ಇಪ್ಪತ್ತನೇ ಶತಮಾನದ ಮೊದಲ ಮತ್ತು ಮಧ್ಯ ಭಾಗದಲ್ಲಿ ಯೂರೋಪಿನ ಆಳ್ವಿಕೆಯಿಂದ ಬಿಡುಗಡೆಗೊಂಡ ಆಫ್ರಿಕ, ದಕ್ಷಿಣ ಅಮೆರಿಕ ಮತ್ತು ಏಷ್ಯಾ ಖಂಡದ ಬಹುತೇಕ ಬಡರಾಷ್ಟ್ರಗಳ ಬುದ್ಧಿಜೀವಿಗಳು ತಮ್ಮ ಜ್ಞಾನ ಮತ್ತು ಬೌದ್ಧಿಕ ಶಕ್ತಿಯನ್ನು ತಮ್ಮ ಸಮಾಜದಲ್ಲಿ ಬಹಳವಾಗಿ ಕಾಡುತ್ತಿದ್ದ ಹಸಿವು, ಬಡತನ, ಅಸಮಾನತೆ, ಶೋಷಣೆ ಮತ್ತು ಅವೈಜ್ಞಾನಿಕ ಮೌಢ್ಯಗಳನ್ನು ತೊಲಗಿಸಲು ಬಳಸಬೇಕೆಂಬ ನಿಲುವನ್ನು ತಳೆದು ಆ ನಿಟ್ಟಿನಲ್ಲಿ ಕಾರ್ಯೋನ್ಮುಖರಾದರು. ಇದಕ್ಕೆ ಯೂರೋಪಿನಲ್ಲಿ ಚಾಲ್ತಿಯಲ್ಲಿದ್ದ ಸಮಾಜವಾದಿ ಮತ್ತು ಮಾರ್ಕ್ಸ್‌ವಾದಿ ಸಿದ್ಧಾಂತದ ಪ್ರಭಾವವು ಒಂದು ಕಾರಣ. ಈ ಬಗೆಯ ನಿಲುವುಗಳು ಸಮಾಜಕ್ಕೆ ಅನಿವಾರ್ಯ ಮತ್ತು ಅಗತ್ಯ ಎಂದು ಮನಗಂಡಿದ್ದರು. ಈ ತರಹದ ಸಾಂಸ್ಕೃತಿಕ ಮತ್ತು ರಾಜಕೀಯ ಚೌಕಟ್ಟುಗಳು ವಿದ್ವತ್ ಜಗತ್ತನ್ನು ಕಲ್ಮಶಗೊಳಿಸಿ ವಸ್ತುನಿಷ್ಠ ಶೈಕ್ಷಣಿಕ ಸಂಶೋಧನೆಯನ್ನು ಭಗ್ನಗೊಳಿಸಿತು ಎಂದು ಹೇಳುವವರಿದ್ದಾರೆ. ಆದರೆ 'ಪೊಲಿಟಿಕಲಿ ಕರೆಕ್ಟ್' ಮಿತಿಗಳಿಗೆ 'ಪೊಲಿಟಿಕಲಿ ಇನ್‌ಕರೆಕ್ಟ್' ಧ್ಯೇಯಗಳು ಉತ್ತರವಾಗಲಾರವು.


ಭಾರತದಲ್ಲಿ ಆಧುನಿಕತೆಯ ಪ್ರಜ್ಞೆ ಅನಾವರಣಗೊಂಡಾಗ ಯಜಮಾನ್ಯ ಮತ್ತು ಶೋಷಿತ ವರ್ಗಗಳ ಮುಖಾಮುಖಿಯು ಹಲವು ಹೊಸ ಸಾಧ್ಯತೆಗಳು, ತಿಕ್ಕಾಟ, ಪ್ರತಿರೋಧಗಳಿಗೆ ಎಡೆಮಾಡಿಕೊಟ್ಟಿತು. ಸರಳವಾಗಿ ಹೇಳಬೇಕೆಂದರೆ ಪಟ್ಟಭದ್ರ ಕೋಮುವಾದಿ, ಜಾತಿವಾದಿ ಹಿತಾಸಕ್ತ ವರ್ಗಗಳು ತಿಲಕ್, ಗೋಲ್ವಾಲ್ಕರ್, ಹೆಡ್ಗೆವಾರ್ ಮತ್ತು ಈ ತರಹದ ಇತರರ ಸುತ್ತ ತಮ್ಮ ರಾಷ್ಟ್ರದ ಪರಿಕಲ್ಪನೆಯನ್ನು ಕಟ್ಟಿಕೊಂಡರೆ ದಮನಿತ ಸಮುದಾಯಗಳಿಗೆ ಅಂಬೇಡ್ಕರ್, ಮಾರ್ಕ್ಸ್ ಮತ್ತು ಲೋಹಿಯಾ ಮುಖ್ಯವಾಗುತ್ತಾರೆ. ಇದರ ನಡುವೆಯೇ ಹೊಸ ಹೊಳಹು ಮತ್ತು ದರ್ಶನಗಳ ಗಾಂಧಿ, ಆಶೀಷ್ ನಂದಿಯಂತಹವರನ್ನು ಕೂಡ ಹಲವು ವೈರುಧ್ಯಗಳ ನಡುವೆ ಬೌದ್ಧಿಕ ವಲಯ ಸ್ವೀಕರಿಸಿದೆ.

ಬಾಲಗಂಗಾಧರನನ್ನು ಈ ನಡುವೆ ಯಾವ ಪರಂಪರೆಯ ಹಿನ್ನೆಲೆಯಲ್ಲಿ ಅರ್ಥಮಾಡಿಕೊಳ್ಳಬೇಕು? ಈತನ ಶಿಷ್ಯರೇ ಹೇಳುವಂತೆ ಈತ ಯಾವುದೋ ಹೊಸಪ್ರಜ್ಞೆ ಮತ್ತು ಆಯಾಮದ ಹರಿಕಾರನಂತೂ ಖಂಡಿತ ಅಲ್ಲ. ಯಾಕೆಂದರೆ ಈತ ಹೇಳುವುದೆಲ್ಲವನ್ನೂ ಈಗಾಗಲೇ ಬಲಪಂಥೀಯ ಗುಂಪುಗಳು ಹೇಳಿಯಾಗಿದೆ. ಬಾಲಗಂಗಾಧರನ ಲೇಖನ ಮತ್ತು ಭಾಷಣ ಬೇಜವಾಬ್ದಾರಿಯ ವರ್ತನೆಯನ್ನಷ್ಟೆ ಅಲ್ಲ, ಈತ ಯಾವ ಸಂಸ್ಕೃತಿಯ ವಾರಸುದಾರನಾಗಿದ್ದಾನೆ ಎಂಬುದನ್ನು ಜಗಜ್ಜಾಹೀರುಗೊಳಿಸಿದೆ. ಪ್ರಜ್ಞಾವಂತರ ಮತ್ತು ಬಾಲನ ನಡುವೆ ಚರ್ಚೆ, ಸಂವಾದ ಮತ್ತು ಬೌದ್ಧಿಕ ಸಾಧ್ಯತೆಗಳು ಕ್ಷೀಣಿಸಿಹೋಗಿವೆ. ಮಡುಗಟ್ಟಿದ ಮನುಷ್ಯ ವಿರೋಧಿ ಸಂಪ್ರದಾಯದ ತಳಹದಿಯ ಮೇಲೆ ತನಗೆ ಅನುಕೂಲವಾಗುವಂತೆ, ಚಾಲ್ತಿಯಲ್ಲಿರುವ ಯೂರೋಪಿನ ಸಿದ್ಧಾಂತಗಳನ್ನು ಆಯ್ಕೆ ಮಾಡಿ ಮಂಡಿಸುವ ಈತನ ಕುತರ್ಕ ಖಂಡಿತ ಹೊಸದಲ್ಲ. ಪ್ರಾಯಶಃ ಅದು ದಮನಕಾರಿ, ಪ್ರತ್ಯೇಕವಾದಿ ಹಾರುವರ ಸಮಾಜ ವಿಜ್ಞಾನ ಆಗಬಹುದಷ್ಟೆ. ಆಧುನಿಕ ಯುರೋಪಿನ ಸ್ವಯಂವಿಮರ್ಶಾ ಸಂಪ್ರದಾಯವನ್ನು ಬಳಸಿಕೊಂಡು, ಯುರೋಪಿನ ನಾಗರಿಕತೆ ಮತ್ತು ಸಂಸ್ಕೃತಿಯನ್ನು ಟೀಕಿಸುವ ಈತ ಭಾರತೀಯ ಸ್ವಯಂವಿಮರ್ಶಾ ಸಂಪ್ರದಾಯವನ್ನು ಅಸಹಿಷ್ಣುತೆಯೆಂದು ಜರಿಯುತ್ತಾನೆ. ಈ ತರಹದ ಚಿಂತಕರಿಗೆ ಡೊನಾಲ್ಡ್ ಟ್ರಂಪ್ ಪಾಶ್ಚಾತ್ಯ ಅಸಹಿಷ್ಣುತೆಯ ಪ್ರತೀಕವಾದರೆ, ನಮ್ಮ ದೇಶದ ಕೋಮುವಾದಿಗಳು ಭಾರತೀಯ ಪರಂಪರೆಯ ನಿಜ ವಾರಸುದಾರರಾಗಿ ಕಂಡರೆ ಆಶ್ಚರ್ಯವಿಲ್ಲ.

■ ದತ್ತಾತ್ರೇಯ. ಎಂ

ಬ್ರಾಹ್ಮಣ್ಯ

■ ಗಿರೀಶ್ ತಾಳಿಕಟ್ಟೆ



ರೈತನೊಬ್ಬ ವರ್ಷಾನುವರ್ಷ ಕಷ್ಟಪಟ್ಟು ಬೆಳೆಸಿದ್ದ ಹಣ್ಣುಗಳ ತೋಟ ಅದು. ಸಸಿಗಳನ್ನು ತಂದು, ನೀರುಣಿಸಿ, ಪ್ರಾಣಿಗಳಿಂದ ರಕ್ಷಿಸಿ ಅವು ದೊಡ್ಡ ಮರಗಳಾಗುವವರೆಗೆ ಸಲುಹಿದ್ದ. ಈಗ ಪ್ರತಿ ಮರವೂ ಹಣ್ಣುಗಳಿಂದ ತುಂಬಿಕೊಂಡಿದ್ದವು. ಹಣ್ಣುಗಳನ್ನು ಕಿತ್ತು ಮಾರಾಟ ಮಾಡಲು ತೀರ್ಮಾನಿಸಿದ ರೈತ ತನ್ನ ಮಗನ ಸಮೇತ ತೋಟಕ್ಕೆ ಬಂದ.

ಅಲ್ಲೊಬ್ಬ ಅಪರಿಚಿತ ವ್ಯಕ್ತಿ ಮರದ ಕೊಂಬೆಯ ಮೇಲೆ ಕೂತು ಬೇಕಾಬಿಟ್ಟಿಯಾಗಿ ಹಣ್ಣುಗಳನ್ನು ಕಿತ್ತು ತಿಂದು ಎಸೆಯುತ್ತಿದ್ದ. ರೈತನಿಗೆ ಕೋಪ ಬಂತು.

"ಏಯ್, ಯಾರೋ ನೀನು. ನನ್ನ ಮರಗಳಲ್ಲಿ ಏನು ಮಾಡುತ್ತಿದ್ದೀಯ? ಹಗಲುಹೊತ್ತಿನಲ್ಲೇ ಹಣ್ಣುಗಳನ್ನು ಕದಿಯಲು ನಿನಗೆ ನಾಚಿಕೆಯಾಗುವುದಿಲ್ಲವೇ?" ರೈತ ಜೋರು ಧ್ವನಿಯಲ್ಲಿ ಗದರಿಸಿದ.

ಆ ಅಪರಿಚಿತ ವ್ಯಕ್ತಿ ರೈತನತ್ತ ತಿರುಗಿ ನೋಡಿದ, ಆದರೆ ಏನೊಂದನ್ನೂ ಪ್ರತಿಕ್ರಿಯಿಸದೆ ತನ್ನ ಪಾಡಿಗೆ ತಾನು ಹಣ್ಣುಗಳನ್ನು ಕಿತ್ತು ತಿನ್ನುವುದನ್ನು ಮುಂದುವರೆಸಿದ.

ರೈತ ಮತ್ತೆ ಕಿರುಚಿದ, "ಏಯ್ ನಿನಗೆ ನಾನೇಳುತ್ತಿರುವುದು ಅರ್ಥವಾಗುತ್ತಿಲ್ಲವಾ? ಹತ್ತಾರು ವರ್ಷ ನಾನು ಕಷ್ಟಪಟ್ಟು ಬೆಳೆಸಿದ ಮರಗಳಿವು. ಅವುಗಳಿಂದ ಹಣ್ಣುಗಳನ್ನು ಕಿತ್ತು ತಿನ್ನಲು ನಿನಗ್ಯಾರು ಅಪ್ಪಣೆ ಕೊಟ್ಟರು. ಈ ಹಣ್ಣುಗಳ ಮೇಲೆ ನಿನಗ್ಯಾವ ಅಧಿಕಾರವೂ ಇಲ್ಲ, ಕೆಳಗಿಳಿ."

ಮರದ ಮೇಲಿಂದಲೇ ಅಪರಿಚಿತ ವ್ಯಕ್ತಿ ತನ್ನ ಮೊಂಡು ಧ್ವನಿ ತೆಗೆದ. "ನಾನ್ಯಾಕೆ ಕೆಳಗಿಳಿಯಬೇಕು? ಈ ಮರಗಳು ನಿನ್ನವಾ? ಈ ಭೂಮಿ ದೇವರದ್ದು. ನಾನು ದೇವರ ಸೇವಕ. ದೇವರ ಭೂಮಿಯ ಮೇಲೆ ಬೆಳೆದ ಈ ತೋಟವೂ ದೇವರ ತೋಟವೆ. ದೇವರ ತೋಟದ ಹಣ್ಣುಗಳನ್ನು ದೇವರ ಸೇವಕ ತಿನ್ನುತ್ತಿದ್ದಾನೆ, ಕೇಳಲು ನೀನ್ಯಾರು?"

ಅಪರಿಚಿತನ ಮಾತುಕೇಳಿ ರೈತನಿಗೆ ಆಘಾತವಾಯಿತು. ಇದೆಂತಹ ಮೊಂಡು ವಾದ ಅನ್ನಿಸಿತು. ಇವನಿಗೆ ಸರಿಯಾದ ಪಾಠ ಕಲಿಸಬೇಕೆಂದು ನಿರ್ಧರಿಸಿದ ಆತ ಮಗನನ್ನು ಕಳಿಸಿ ಒಂದು ಹಗ್ಗ ತರಿಸಿಕೊಂಡ. ನಂತರ ಮಗನನ್ನು ಮರ ಹತ್ತಿಸಿ ಅಪರಿಚಿತ ವ್ಯಕ್ತಿಯನ್ನು ಬಲವಂತವಾಗಿ ಕೆಳಗಿಳಿಸಿದ.

ಕೆಳಗಿಳಿದ ವ್ಯಕ್ತಿಯನ್ನು ಮರಕ್ಕೆ ಕಟ್ಟಿಹಾಕಿದ ರೈತ, ಪಕ್ಕದಲ್ಲೇ ಬಿದ್ದಿದ್ದ ಕೋಲನ್ನು ಎತ್ತಿಕೊಂಡು ಅಪರಿಚಿತನಿಗೆ ಬಾರಿಸತೊಡಗಿದ.

"ಏಯ್, ಏನು ಮಾಡ್ತಿದೀಯ. ಒಬ್ಬ ಅಮಾಯಕನನ್ನು ಹೊಡೆಯುತ್ತಿದ್ದಿಯ. ನಿನಗೆ ದೇವರ ಭಯವಿಲ್ಲವೇ?" ಅಪರಿಚಿತ ನೋವಿನಿಂದ ಒದರಾಡಿದ.

"ನಾನ್ಯಾಕೆ ಭಯ ಪಡಬೇಕು?" ರೈತ ದೃಢ ಧ್ವನಿಯಲ್ಲಿ ಮುಂದುವರೆಸಿದ "ಇದೋ ನೋಡು, ನನ್ನ ಕೈಯಲ್ಲಿರುವ ಕೋಲು ದೇವರಿಗೆ ಸೇರಿದ್ದು. ನಾನು ದೇವರ ಸೇವಕ. ಹಾಗಾಗಿ ನಾನು ಭಯ ಪಡುವ ಅಗತ್ಯವೇ ಇಲ್ಲ. ನೀನೂ ಅಷ್ಟೇ. ದೇವರು ಮತ್ತು ದೇವರ ಸೇವಕನ ಕೆಲಸದ ನಡುವೆ ಅಡ್ಡ ಬರಬೇಡ. ಸುಮ್ಮನಿದ್ದು ಬಿಡು" ಎಂದು ಮತ್ತೆ ಬಾರಿಸಲಾರಂಭಿಸಿದ.

ಅಪರಿಚಿತನ ಚರ್ಮ ಕಿತ್ತು ಬಂದು, ರಕ್ತ ಸುರಿಯಲಾರಂಭಿಸಿತು. ತಾಳಲಾರದ ನೋವಿನಿಂದ ಚೀರಿಕೊಂಡ "ದಮ್ಮಯ್ಯ ದಯವಿಟ್ಟು ಹೊಡೆಯೋದನ್ನು ನಿಲ್ಲಿಸಯ್ಯಾ. ನಿನ್ನ ಹಣ್ಣುಗಳನ್ನು ತಿಂದದ್ದು ನನ್ನ ತಪ್ಪಾಯ್ತು. ಇದು ನಿನ್ನ ತೋಟ, ಇಲ್ಲಿಂದ ಹಣ್ಣು ಕೀಳುವುದಕ್ಕೂ ಮೊದಲು ನಿನ್ನ ಅಪ್ಪಣೆ ಪಡೆಯಬೇಕಿತ್ತು. ಆದರೆ ನಾನು ಉದ್ಧಟತನ ಮಾಡಿದೆ. ದಯವಿಟ್ಟು ಕ್ಷಮಿಸು, ನನ್ನನ್ನು ಬಿಟ್ಟುಬಿಡು."

ರೈತ ಮುಗುಳ್ನಕ್ಕು ಹೇಳಿದ "ಹಾಗೆ ಬಾ ದಾರಿಗೆ. ಖಂಡಿತ ನಿನ್ನನ್ನು ಬಿಡ್ತೀನಿ. ಯಾಕೆಂದ್ರೆ ನಿನ್ನ ತಪ್ಪಿನ ಅರಿವು ನಿನಗಾಗಿದೆ. ದೇವರು ತನ್ನ ಎಲ್ಲಾ ಸೇವಕರಿಗೂ ಮೆದುಳು ಕೊಟ್ಟಿದ್ದಾನೆ, ರಟ್ಟೆಯಲ್ಲಿ ಕಸುವನ್ನೂ ತುಂಬ ಕಳಿಸಿದ್ದಾನೆ. ಅದರರ್ಥ ಅವರವರ ಅನ್ನವನ್ನು ಅವರೇ ಬುದ್ಧಿ ಉಪಯೋಗಿಸಿ ದುಡಿದು ತಿನ್ನಬೇಕು ಅಂತ. ಅದರ ಬದಲು ದೇವರನ್ನೇ ನೆಪ ಮಾಡಿಕೊಂಡು ಮತ್ತೊಬ್ಬರ ರಟ್ಟೆಗಳ ದುಡಿವನ್ನು ಕಿತ್ತು ತಿನ್ನಲು ನಮ್ಮ ಮೆದುಳುಗಳನ್ನು ಬಳಸಬಾರದು."

ಜೀವ ಉಳಿದ ಖುಷಿಯಲ್ಲಿ ಅಪರಿಚಿತ ಅಲ್ಲಿಂದ ಕಾಲ್ಕಿತ್ತ.



ಯೋಗೇಶ್ ಮಾಸ್ಟರ್

ಪುರಾಣದ ಹೂರಣ

ಸುಪಾರಿ ದೇವಿ ಉಪಾಸಕರು

ಮೈಸೂರಿನಲ್ಲಿ ಶ್ರೀವಿದ್ಯಾ ಉಪಾಸಕರ ...ೂಹವಿದೆ. ಇದರ ನೇತೃತ್ವ ವಹಿಸಿರುವವರು ಶ್ರೀವಿದ್ಯೆ...ನ್ನು ಉಪಾಸನೆ ಮಾಡುವವರನ್ನೆಲ್ಲಾ ಒಂದೆಡೆ ತಂದು, ...ತಿ, ವರ್ಣ ಭೇದವಿಲ್ಲದೇ ಆರಾಧಿಸುವವರೆಲ್ಲರಿಗೂ ...ಯುವ ವಿದ್ಯೆ ಇದು ಎಂದು ಗುಪ್ತವಾಗಿದ್ದ ಶ್ರೀವಿದ್ಯಾ ...ಪಾಸನೆಯನ್ನು ಸಾರ್ವತ್ರಿಕಗೊಳಿಸುವ ಪ್ರಾರಂಭಿಕ ಪ್ರಯತ್ನ ...ರದ್ದು. ಅದರಲ್ಲಿ ಮೌಢ್ಯವೆಷ್ಟೋ, ಸಾಫಲ್ಯ ...ಫಲ್ಯಗಳೆಷ್ಟೋ, ಸಾಧಕರೆಂದು ಬಂದು ಹೋಗುವವರಲ್ಲಿ ...ಳ್ಳುಗಳೆಷ್ಟೋ, ಗಟ್ಟಿ ಕಾಳುಗಳೆಷ್ಟೋ. ಅದು ಬೇರೆ ...ತು. ನಾನು ಯಾವ ಮಂತ್ರದೀಕ್ಷೆ ತೆಗೆದುಕೊಳ್ಳದಿದ್ದರೂ, ...ವುದೇ ಪೂಜೆಗಳಲ್ಲಿ ಎಂದಿಗೂ ಭಾಗವಹಿಸದಿದ್ದರೂ ...ತ್ಯ ಮತ್ತು ಕಲಾಸಂಸ್ಕೃತಿಯ ಕಾರಣಕ್ಕಾಗಿ ಹಲವಾರು ... ಅಲ್ಲಿಗೆ ಹೋಗಬೇಕಾಗಿ ಬಂದಿತ್ತು. ನಾನು ಪೌರಾಣಿಕ ...ಭೂಷಣದ ದೇವಿಯರನ್ನು ಮನ್ನಿಸದಿದ್ದರೂ, ಅದರ ...ಮ ಪ್ರತಿಮೆಯ ಸುತ್ತಾ ಜಾತಿಭೇದಗಳೇನೂ ಇಲ್ಲದೇ, ...ತೆಯ ಗೀಳು ಅಥವಾ ಬ್ರಾಹ್ಮಣ್ಯಕೆಯ ದರ್ಬಾರು ...ನೂ ಇಲ್ಲದೇ ಜನರು ನೆರೆಯುತ್ತಿದ್ದದ್ದು ಒಂದು ...ಕ್ಕೆ ಜನರನ್ನು ಸಾಮರಸ್ಯದಿಂದ ಒಗ್ಗೂಡಿಸಲೊಂದು ...ಯ ನೆಪವೆಂದು ಅನ್ನಿಸಿತು.

ಮಗುವಿನಂತಹ ಸರಳ

ಅಲ್ಲಿ ನಾನೊಬ್ಬ ಸಾಧಕರನ್ನು ಕಂಡಿದ್ದೆ. ಅವರು ...ಕರ್ಣದಿಂದ ಬಂದಿದ್ದಂತಹ ಶ್ರೀವಿದ್ಯಾ ಉಪಾಸಕ ...ಧರ್ ಅಡಿ ಎಂಬುವರು. ಅವರು ಸಂಸ್ಕೃತದಲ್ಲಿ ರಚಿಸಿದ್ದ ...ಯೊಂದಕ್ಕೆ ನಾನು ಸಂಗೀತ ಸಂಯೋಜನೆ ಮಾಡಿದ್ದೆ. ...ನ್ನು ಅವರು ಮೊದಲಬಾರಿಗೆ ಕೇಳಿದರು. ಆಗ ಅವರು ... ಸಂಭ್ರಮವನ್ನು ಮತ್ತು ಅವರು ಅದನ್ನು ...ವ್ಯಕ್ತಗೊಳಿಸಿದ ರೀತಿಯನ್ನು ನಾನು ಎಂದಿಗೂ ...ಯಲಾರೆ. ಅವರು ಮಾತನಾಡುವ ರೀತಿ, ಅವರು ...ಮುಕೊಳ್ಳುವ ರೀತಿ, ಅವರು ತಮ್ಮನ್ನು ಅಭಿವ್ಯಕ್ತಿಗೊಳಿಸಿ...ಳ್ಳುವ ರೀತಿ ಮತ್ತು ಇತರರನ್ನು ಉಪಚರಿಸುವ ರೀತಿ; ...ಗಳನ್ನು ನೋಡಿದರೆ ಒಂದು ಮುಗ್ಧಾತಿಮುಗ್ಧ ಮಗುವಿನ ...ಯಂತಿತ್ತು. ಬಂದವರೆಲ್ಲಾ ಕಾಲಿಗೆ ಎರಗುವಂತಹ ...ವಿನ ಸ್ಥಾನಮಾನವಿದ್ದರೂ, ಯಾರನ್ನೂ ಕಡೆಗಣಿಸದೇ ...ರನ್ನೂ ಮಗುವಿನ ಹಾಗೆ ಸತ್ಕರಿಸುವುದು ಒಂದು ...ಷ ಎನ್ನಿಸಿತು. ಸಾಧಾರಣವಾಗಿ ಸಾಮಾಜಿಕವಾದ ...ಚಾರದ ಮತ್ತು ತೋರ್ಪಡಿಸಿಕೊಳ್ಳುವಿಕೆಯ ಪ್ರಕಾರ ...ಡುವುದಾದರೆ ಹುಚ್ಚ ಎನ್ನಿಸುವುದಾದರೂ, ...ಂತವರಿಗೆ ಅವರದು ತೀರಾ ಮಗುತನವೆಂದೇ ...ುವುದು. ನೈಸರ್ಗಿಕವಾದಂತಹ ಸರಳತೆ ಅವರಲ್ಲಿತ್ತು. ...ತ ಬಗ್ಗೆ ದೊಡ್ಡ ಸಾಧಕರೆಂದು ಅವರಿವರು ಏನೇ ...ುತ್ತಿದ್ದರೂ, ಅವರು ಸಾಧಿಸಿರುವ ಫಲವೇ ಆ ...ತನವೆಂದು ನನಗೆ ಅನ್ನಿಸಿತು. ಅಷ್ಟೊಂದು ಸರಳತೆ ...ತ್ತು ಮುಗ್ಧತೆಯಿಂದ ಸಂಗೀತವನ್ನು ಕೇಳುವುದು, ...ಯುವುದು, ನಗುವುದು, ಊರಿನಲ್ಲಿರುವ ತಮ್ಮ ...ನಿಗೆ ಫೋನ್ ಮಾಡಿ ನಾನು ಕೇಳಿಸಿದ ಸಂಗೀತವನ್ನು ...ವಂತೆ ಮಾಡುವುದರಲ್ಲಿ ತೋರಿದ ಲವಲವಿಕೆ ...ತನದ್ದೇ ಆಗಿತ್ತು. ನಾನು ಅವರೊಂದಿಗೆ ಮಾತಾಡುತ್ತಾ ...ವಿದ್ಯಾ ಉಪಾಸನೆಯಲ್ಲಿ) ಸಾಧನೆ ಎಂದರೇನು ಎಂದು ...ದೆ. "ಏನನ್ನೂ ಸಾಧಿಸುವ ಹಂಬಲ ಇಲ್ಲದೇ ...ವುದು" ಎಂದರು. ಅಲ್ಲಿಗೆ ನನ್ನ ಮೊದಲ ಮತ್ತು ...ಯ ಪ್ರಶ್ನೆ ಮುಗಿದುಹೋಯಿತು.

...ಜ, ಏನನ್ನಾದರೂ ಸಾಧಿಸಬೇಕು ಎಂದು ಹೇಳುವ ...ಗಳ ಧ್ವನಿಯ ಹಿಂದೆ ಕೀರ್ತಿ, ಯಶಸ್ಸು, ಸಂಪತ್ತಿನ ...ಲಗಳ ವಾಸನೆಗಳನ್ನು ಗ್ರಹಿಸುತ್ತೇನೆ. ಬಹಳಷ್ಟು ...ಗೆ ಸಾಧನೆ ಎಂಬುದೇ ಇತರರಿಗಿಂತ ಅದೆಷ್ಟೋ ... ಮೇಲಕ್ಕೇರುವುದು. ಎಲ್ಲರೂ ತಿಂದು, ಕುಡಿದು, ...ಗಿ, ಸಂಸಾರಗಳನ್ನು ಮಾಡಿ ಸತ್ತು ಹೋಗದೇ ...ದರೂ ಸಾಧಿಸಿ, ಇತರರಿಗಿಂತ ತಾವು ಬಹಳ ...ದವರು, ಉತ್ತಮರು ಎಂಬುದನ್ನು ನಿರೂಪಿಸುವುದೇ ... ಎಂದಾಗುತ್ತದೆ. ಒಟ್ಟಾರೆ ಯಾವುದನ್ನೋ ಗುರಿ ...ಕೊಂಡು ಅದನ್ನು ಪಡೆದೇ ತೀರುವುದು.

...ದರೆ ಶ್ರೀಧರ್ ಅಡಿ ನಾನು ಪ್ರಶ್ನೆ ಕೇಳಿದ ತಕ್ಷಣವೇ ...ಮರು ಆಲೋಚನೆಯೂ ಇಲ್ಲದೇ ತಟ್ಟನೆ ಕೊಟ್ಟ ...ತ್ತರ ಬಹಳ ಪ್ರಾಮಾಣಿಕವಾಗಿ ನನಗೆ ಕಂಡಿತು.

ಸಾಧನೆಯು ಮತ್ತು ದಾಖಲೆಗಳ ಅಸಹಜ ಮನಸ್ಥಿತಿ

...ದನ್ನೋ ಸಾಧಿಸುವುದು, ದಾಖಲೆಗಳನ್ನು ...ಸುವುದು, ಬೇರೆಯವರು ಮಾಡುವುದಕ್ಕಿಂತ ...ನಾಗಿ ಮಾಡಬೇಕೆಂದು ಪ್ರಯತ್ನಪೂರ್ವಕವಾಗಿ ...ಯುವುದು, ಇವೆಲ್ಲವೂ ತೀರಾ ಅಸ್ವಾಭಾವಿಕವಾದಂತಹ ಮನಸ್ಥಿತಿಗಳು. ತಮ್ಮ ಆಸಕ್ತಿ, ಶಕ್ತಿ ಮತ್ತು ಸಾಮರ್ಥ್ಯ ಹಾಗೂ ಅದರಲ್ಲಿ ತಾವೇ ತೊಡಗಿಸಿಕೊಳ್ಳುವಂತಹ ಬದ್ಧತೆ ಇವುಗಳಿಂದ ಪಕ್ವತೆ ಮತ್ತು ಪರಿಪೂರ್ಣತೆಯನ್ನು ಪಡೆದಾಗ ಇತರರು ಅದನ್ನು ಗುರುತಿಸಿ ಅದನ್ನು ಸಾಧನೆ ಎಂದು ಕರೆಯುವರು. ಆದರೆ ಲೋಕದ ದೃಷ್ಟಿಯಿಂದ ಸಾಧಕರೆಂದು ಕರೆಯುವ ಅವರಿಗೆ ಅದೊಂದು ಸಾಧನೆ ಏನೂ ಅಲ್ಲ, ಅದೊಂದು ಅವರ ಆಸಕ್ತಿಗೆ ದೊರಕುವ ತೃಪ್ತಿಯಿರಬಹುದು ಅಥವಾ ಸಾಮರ್ಥ್ಯಕ್ಕೆ ಸಿದ್ಧಿಸಿರುವ ಫಲವಿರಬಹುದು. ಸಾಧನೆ ಎಂದೂ ಕರೆಯುವವರ ಧೋರಣೆಯೇ ಹೊರತು ಸಾಧನೆಯೆಂಬುದರ ಅಳತೆಗೋಲು ಅಥವಾ ಮಾನದಂಡವೂ ಆ ಕರೆಯುವಿಕೆ ಯೂ ಏನಲ್ಲ. ಇದು ಬಹಳಷ್ಟು ಮಂದಿಗೆ ಅರ್ಥವಾಗದು. ಯಾವಾಗಲೂ ತಮ್ಮ ಸಾಧನೆ, ವೈಫಲ್ಯಗಳನ್ನು ಸಮಾಜದ ದೃಷ್ಟಿಕೋನದಿಂದಲೇ, ದೊರಕುವ ಸ್ಥಾನಮಾನಗಳಿಂದಲೇ ಅಳೆಯುವ ಮಂದಿಗೆ ಈಗ ನಾನು ಹೇಳುವುದು ಅರ್ಥವಾಗದು. ಅರ್ಥವಾದರೂ ಅರಗಿಸಿಕೊಳ್ಳಲು ಕಷ್ಟವಾಗುವುದು.

ಆಸೆ ಮತ್ತು ಭಯದ ಸೂತ್ರಗಳು


ಅಂತೆಯೇ ಶ್ರೀ ವಿದ್ಯಾ ಉಪಾಸಕರೆಂದು ಕರೆದುಕೊಳ್ಳುವ ಅಥವಾ ಸಾಧನೆಗೆಂದು ಬರುವ ಬಹಳ ಮಂದಿಯಲ್ಲಿ ನಾನು ಗಮನಿಸಿದ್ದೇನೆಂದರೆ, ಬಯಸಿದ್ದನ್ನೆಲ್ಲಾ ಪಡೆಯುವ ಹಂಬಲ, ತಮಗೆ ತೊಂದರೆ ಮಾಡುವವರನ್ನು ಸದೆ ಬಡೆಯುವ ಛಲ, ಸಮಾಜದಲ್ಲಿ ಎತ್ತರದ ಸ್ಥಾನದಲ್ಲಿ ಸ್ಥಾಪಿತರಾಗಿ ತಮ್ಮ ಅಹಂಕಾರವನ್ನು ಘನವಾಗಿ ಪ್ರದರ್ಶಿಸುವ ಹಟ; ಹೀಗೆ ಗುರುವನ್ನು ಓಲೈಸುವವರಲ್ಲಿ ಕಾಣುವುದೂ ಅದೇ ಆಸೆ ಅಥವಾ ಭಯ. ಇಂತಹ ದೇವಿ ಉಪಾಸನೆ ಅಥವಾ ಶ್ರೀವಿದ್ಯಾ ಉಪಾಸನೆಯ, ಇನ್ನೂ ಮುಂದುವರಿದು ಹೇಳಬೇಕೆಂದರೆ ಶಕ್ತಿ ಸಾಧನೆಯ ಮನೋವೈಕಲ್ಯಕ್ಕೆ, ದಕ್ಷಿಣ ಭಾರತದ ಮೇರು ಸಂಗೀತ ನಿರ್ದೇಶಕ ಇಳಯರಾಜರವರೂ ಜಾರಿದ್ದರು. ಅವರೂ ಈ ಬಗೆಯ ಸಾಧನೆಯ ಗೀಳಿಗೆ ಒಳಗಾಗಿ ಜನರನ್ನು ಸೇರದೇ, ಶೇಕ್‌ಹ್ಯಾಂಡ್ ಕೊಡ ಕೊಡದೇ ಒಂದು ತರಹದ ಚಿತ್ತವಿಭ್ರಮೆಗೆ ಒಳಗಾಗಿದ್ದರು. ಆದರೆ ನಂತರ ಅದು ಸಮತೋಲನ ಪಡೆಯಿತೆನ್ನಿ. ಆದರೆ ಅಂತವರೂ ನಮ್ಮಂತಹ ಗುರುಗಳ ಕಾಲಿಗೆ ಬಿದ್ದು



ಆಶೀರ್ವಾದಗಳನ್ನು, ಮಂತ್ರೋಪದೇಶಗಳನ್ನು ಪಡೆಯುತ್ತಾರೆಂದರೆ! ಅದೂ ಒಂದು ಇಂತಹ ಗುರುಗಳ ಕ್ರೆಡಿಟ್. ಸೋ ಕಾಲ್ಡ್ ಸಾಮಾನ್ಯ ಜನರಿಗೂ ಆಕರ್ಷಣೆ. ಡಾ. ರಾಜ್‌ಕುಮಾರ್, ರಜನೀಕಾಂತ್, ಅಮಿತಾಬ್ ಬಚ್ಚನ್‌ರಂತವರೇ ಅಯ್ಯಪ್ಪ ಮಾಲೆಗಳನ್ನು ಹಾಕುವಾಗ ಇನ್ನು ನಾವು? ಎಂಬಂತೆ. ಸಾಮಾನ್ಯ ಜನರನ್ನು ಆಕರ್ಷಿಸುವ ಇರಾದೆಯುಳ್ಳ ಅನೇಕಾನೇಕ ಸ್ಟಾರ್‌ಗಳು ಜನಪ್ರಿಯ ಮೌಢ್ಯಗಳನ್ನು ಸಾರಾಸಗಟಾಗಿ ಸಮಾಜದಲ್ಲಿ ಬಿತ್ತುತ್ತಾರೆ ಮತ್ತು ಬೆಳೆಸುತ್ತಾರೆ. ಮತ್ತೂ ಕೆಲವೊಮ್ಮೆ ಅವರ ಪಾಡಿಗೆ ಅವರು ಮಾಡಿಕೊಳ್ಳುವುದಕ್ಕೆ ವ್ಯಾಪಕ ಪ್ರಚಾರಗಳೂ ಸಿಕ್ಕಿ ಸಮಾಜದಲ್ಲಿ ಅವು ಗಟ್ಟಿಗೊಳ್ಳುತ್ತಾ ಹೋಗುತ್ತವೆ.

ಅಂತೆಯೇ ತನ್ನ ಸುತ್ತ ಭಕ್ತಾದಿಗಳ ಕೋಟೆಯನ್ನು ಕಟ್ಟಿಕೊಂಡಂತಹ ಓರ್ವ ದೇವೀ ಉಪಾಸಕ ಗುರು ಬಡಬಡಿಸುತ್ತಿರುವುದನ್ನು ನಾನು ಕೇಳಿದ್ದೇನೆ. "ನಾನು ಯಾರು? ಲಲಿತೆಯ ಭಕ್ತ, ನನ್ನನ್ನು ವಿರೋಧಿಸಿದರೆ, ಬೈದರೆ ಅವರನ್ನು ನಕುಲಿ ಶ್ಯಾಮಲೆಯು ತನ್ನ ವಜ್ರದಂತಗಳಿಂದ ಕಡಿದು ಹಾಕುತ್ತಾಳೆ." ಈ ಧಮಕಿಗಳಿಗೆ ಬೆದರಿದ ಕೆಲವರು ನನ್ನೊಡನೆ ಹೇಳಿಕೊಳ್ಳುತ್ತಿದ್ದರು: "ಗುರು ಅಂತ ಅನ್ನಿಸಿಕೊಂಡವರು ಈ ರೀತಿ ಹಟ, ರೋಷ, ದ್ವೇಷ ಸಾಧಿಸಬಹುದೇ? ಗುರು ಅಂತ ಅನ್ನಿಸಿಕೊಂಡಿರುವ ಸ್ಥಾನದಲ್ಲಿದ್ದುಕೊಂಡು ಅವರ ಬಗ್ಗೆ ಇವರ ಬಗ್ಗೆ ಅಸೂಯೆ ಪಡಬಹುದೇ? ಕೆಟ್ಟದನ್ನು ಹೇಳಬಹುದೇ? ಕೇಡನ್ನು ಬಯಸಬಹುದೇ?"

ತಂತ್ರ ಸಾಧಕರ ಬಗ್ಗೆ ಇಷ್ಟೊಂದು ಭಯವೇಕೆಂದರೆ,



ದೇವತಾ ಶಕ್ತಿ ಎಂದು ಏನು ಹೇಳುವರೋ ಅವೆಲ್ಲವೂ ಮಂತ್ರ ಸ್ವರೂಪದಲ್ಲೇ ಇವೆ. ಆ ಮಂತ್ರವನ್ನು ಸಾಧಿಸಿದವರು ಬೇರೆಯಲ್ಲ, ಸಾಕ್ಷಾತ್ ದೇವರೂ ಬೇರೆ ಅಲ್ಲ ಎಂಬಂತಹ ನಂಬಿಕೆಗಳೂ ಇವೆ. ಆದರೆ; ಗುರುಗಳೆಂದು ಅನ್ನಿಸಿಕೊಂಡಿರುವವರನ್ನು ನೋಡುತ್ತಾ ಹೋದರೆ, ಅವರ ರಾಜಕೀಯ ಪ್ರೇರೇಪಣೆಗಳು, ತಮಗೆ ಹಣ, ವಸ್ತುಗಳನ್ನು ಕೊಟ್ಟವರ ಪರವಾಗಿ ಕೆಲಸ ಮಾಡುವವರಂತೆ ತೋರುವುದು, ಅವರಿಗೆ ಹೆಚ್ಚಿನ ಮಾನ್ಯತೆ ನೀಡುವುದು, ಅವರು ದೂರುವ ವ್ಯಕ್ತಿಗಳ ವಿರುದ್ಧವಾಗಿ ಮಂತ್ರಗಳನ್ನು ಪ್ರಯೋಗ ಮಾಡುವ ಪ್ರಯತ್ನಗಳನ್ನು ಮಾಡುವುದು; ಇವೆಲ್ಲಾ ತೋರುವುದೇನೆಂದರೆ ಸುಪಾರಿ ಮಾಂತ್ರಿಕರಿವರು ಎಂದು. ಅವರ ಸುತ್ತಲೂ ನೆರೆಯುವ ಮಂದಿಯೂ ಚಿಕ್ಕ ಮಕ್ಕಳು ದೂರುವಂತೆ ಅವನ ಬಗ್ಗೆ, ಇವನ ಬಗ್ಗೆ ದೂರುತ್ತಾ ಅವರಿಗೆ ಸರಿಯಾದ ಶಾಸ್ತಿ ಮಾಡಲು ಕೇಳುತ್ತಿರುತ್ತಾರೆ. ಇದೊಂದು ಅತ್ಯಂತ ಕೊಳಕಾದ ಮತ್ತು ಅಸಹನೀಯವಾದ ದೃಶ್ಯಗಳು.

ನಮಗಾಗಿ ಪ್ರಾರ್ಥಿಸಿ

ಕ್ರೈಸ್ತರಲ್ಲಿ ಇತರರಿಗಾಗಿ ಪ್ರಾರ್ಥಿಸುವ ಪರಿಪಾಠವುಂಟು. ಆದರೆ ಇತರರಿಗೆ ಶಾಸ್ತಿ ಮಾಡುವ ಪ್ರಾರ್ಥನೆಗಳು ಇಲ್ಲವೆಂಬುದು ನನ್ನ ಗ್ರಹಿಕೆ. ವೈದಿಕರಲ್ಲೂ ಅಥವಾ ಹಿಂದೂ ಪ್ರಾರ್ಥನೆಗಳಲ್ಲೂ, ಮುಸಲ್ಮಾನರಲ್ಲೂ ಇತರರ ಯಶಸ್ಸಿಗಾಗಿ, ಆರೋಗ್ಯಕ್ಕಾಗಿ, ಉತ್ತಮ ಭವಿಷ್ಯಕ್ಕಾಗಿ ಪ್ರಾರ್ಥಿಸುವ ಪರಿಪಾಠವುಂಟು. ಆದರೆ, ಇತರರಿಗೆ ಶಾಸ್ತಿ ಮಾಡುವ, ಕೆಡುಕುಂಟು ಮಾಡುವ ಸುಳುಹುಗಳು ಮಾಂತ್ರಿಕರಲ್ಲಿಯೇ ಕಾಣುವುದು. ಎಂತೆಂತಹ ಘೋಷಣೆಗಳೆಂದರೆ, ಮಾಟ ಪ್ರಯೋಗಕ್ಕೆ ಒಳಗಾಗುವ ವ್ಯಕ್ತಿಯ ಆರೋಗ್ಯವನ್ನು ನಾಶ ಮಾಡುವುದು, ಸಂಪತ್ತು ಮತ್ತು ಸಂಪನ್ಮೂಲಗಳನ್ನು ನಾಶಮಾಡುವುದು, ಸಂಬಂಧಗಳನ್ನು ಒಡೆಯುವುದು, ಏಳ್ಗೆಯು ಉಂಟಾಗದಿರುವಂತೆ ನೋಡಿಕೊಳ್ಳುವುದು, ಏನೇ ಪ್ರಯತ್ನಗಳನ್ನು ಮಾಡಿದರೂ ಕೆಲಸಗಳೆಲ್ಲವೂ ವಿಫಲವಾಗುವಂತೆ ಮಾಡುವುದು, ರೋಗ ರುಜಿನಗಳಿಂದ ನರಳುವುದು, ಕೊನೆಗೆ ಸಾಯುವುದು. ಇದು ಸುಪಾರಿ ಮಾಂತ್ರಿಕರ ಸಾಮರ್ಥ್ಯಗಳೆಂದು ನಂಬುತ್ತಾರೆ. ಅಂತೆಯೇ ಅವರು ಹೆದರಿಸುತ್ತಾರೆ, ಸಾಮಾನ್ಯ ಜನರು ಹೆದರುತ್ತಾರೆ.

ಈ ಶಾಕ್ತ ತಂತ್ರ ಸಾಧನೆಯಲ್ಲಿ ನೈಸರ್ಗಿಕವಾಗಿ ಮುಗ್ಧತೆಯನ್ನು ಹೊಂದಿರುವ ಮಗುವಿನಂತಹ ಮನುಷ್ಯರು ಒಂದೆಡೆಯಾದರೆ, ಅಪ್ರಬುದ್ಧವಾಗಿ, ಅಪಕ್ವವಾಗಿ ಮಕ್ಕಳಂತೆ ಚಾಡಿ ಹೇಳಿಕೊಂಡು ದೂರಿಕೊಂಡು ಮಾಟ ಮಾಡಿಸುವಂತಹ ಗಂಭೀರ ತಿಕ್ಕಲುತನಗಳನ್ನು ಪ್ರದರ್ಶಿಸುವ ಮಂದಿಯೊಂದು ಕಡೆ.

ಮಂಗಳೂರಿನ (ಅದೆಷ್ಟು ತಿಣುಕಿದರೂ ದೇವಾಲಯದ ಹೆಸರೂ ಮತ್ತು ಸಾಧಕನ ಹೆಸರೂ ನೆನಪಿಗೆ ಬರುತ್ತಿಲ್ಲ. ಆತ ಮಂಗಳೂರು, ಪುತ್ತೂರು ಮತ್ತು ಕಾಸರಗೋಡುಗಳಲ್ಲಿ ಅಪಾರಸಂಖ್ಯೆಯ ಭಕ್ತಾನುಯಾಯಿಗಳನ್ನು ಹೊಂದಿದ್ದಾನೆ.) ಓರ್ವ ದೇವೀ ಉಪಾಸಕ. ಆತನ ಕಾಲಿನ ಬುಡದಲ್ಲಿ ಅನೇಕ ವಾಣಿಜ್ಯೋದ್ಯಮಿಗಳು ಮತ್ತು ಶ್ರೀಮಂತರು ಮುಗಿಬಿದ್ದಿರುತ್ತಾರೆ. ಆತನದ್ದು ಕಾಳಿದೇವಿಯ ದೇವಸ್ಥಾನವೋ ಅಥವಾ ಆಶ್ರಮವೋ ಎಂತದ್ದೋ ಇದೆ. ಆತ ಒಲಿದರೆ ಸಂಪತ್ತು, ಆರೋಗ್ಯ ಯಶಸ್ಸು ಬರುವಂತೆ ಮಾಡುವನಂತೆ. ಆತ ಮುನಿದರೆ ಸರ್ವನಾಶವಾಗುವುದಂತೆ.

ನಾನೊಬ್ಬ ಆಧ್ಯಾತ್ಮಿಕ ಸಾಧಕನೆಂದು ಹೊರನೋಟಕ್ಕೆ ನಂಬಿದವರು, ಆತನ ಬಳಿಗೆ ಕರೆದುಕೊಂಡು ಹೋಗಿ ಪರಿಚಯಿಸಿದರು. ಬೆಂಗಳೂರಿನಲ್ಲಿ ಆತನ ಸ್ವಾಗತಕ್ಕೆ ಮತ್ತು ಪೂಜೆಗೆ ಭವ್ಯವಾದಂತಹ ಸಮಾರಂಭವನ್ನು ಏರ್ಪಡಿಸುತ್ತಾರೆ. ಆತನಿಗೆ ಮತ್ತು ಆತನ ಹೆಂಡತಿಗೆ ಸಾಕ್ಷಾತ್ ಶಿವ ಶಕ್ತಿಯರೇನೋ ಎಂಬಂತೆ ಪೂಜೆ ಮಾಡುತ್ತಾರೆ. ನನ್ನ ಜೊತೆಯಲ್ಲಿದ್ದವರು (ಆತನ ಭಕ್ತರು) ಹೇಳುತ್ತಿದ್ದರು, "ಅವರಿಗೆ ಇಲ್ಲಿ ಇರುವವರೆಲ್ಲರ ಮನಸ್ಸು ತಿಳಿಯುತ್ತದೆ. ಅವರಿಗೆ ತಿಳಿಯದೇ ಇರುವುದು ಏನಿಲ್ಲ. ಅವರಿಗೆ ಏನಾದರೂ ಬೈದುಕೊಂಡರೆ, ಅಂದರೆ, ಅವರಿಗೆ ತಿಳಿಯುತ್ತದೆ. ಜೊತೆಗೆ ಬೈದುಕೊಂಡವರಿಗೆ ಸರಿಯಾದ ಶಾಸ್ತಿಯಾಗುತ್ತದೆ." ನನ್ನನ್ನು ಅವರ ಬಳಿಗೆ ಕರೆದುಕೊಂಡು ಹೋಗಿ "ಇವರು ನಮ್ಮಲ್ಲಿ ದೇವಿಯ ಬಗ್ಗೆ, ಉಪನಿಷತ್ತು ಮತ್ತು ಪುರಾಣಗಳ ಬಗ್ಗೆ ಪ್ರವಚನ ಮಾಡುತ್ತಾರೆ" ಎಂದು ಪರಿಚಯಿಸುವ ಯತ್ನ ಮಾಡುತ್ತಿದ್ದರು. ಆದರೆ ಆತನಿಗೆ ಪಕ್ಕದಲ್ಲಿಯೇ ಮಂಗಳೂರಿನ ಪ್ರತಿಷ್ಠಿತ ಹೋಟೆಲೊಂದರ ಉದ್ಯಮಿಗೆ ಆಶೀರ್ವಾದಗಳನ್ನು ಮಾಡುವ ಅವಸರದಲ್ಲಿದ್ದು, ನಮ್ಮ ಕಡೆ ನೋಡುತ್ತಲೇ ಇರಲಿಲ್ಲ. ನನ್ನ ಅಲ್ಲಿಗೆ ಒಯ್ದವರಿಗೆ ಮುಜುಗರ ಉಂಟಾಗಿ ಕೊಂಚ ಆಗ್ರಹಪೂರ್ವಕವಾಗಿಯೇ ನನ್ನನ್ನು ಅವರಿಗೆ ಪರಿಚಯ ಮಾಡಿಸುವ ಯತ್ನ ಮಾಡಿದರು. ಆತನೋ ಕಾಟಾಚಾರಕ್ಕೆ ನನಗೂ ಒಂದೆರಡು ಹಣ್ಣುಗಳನ್ನು ಕೊಟ್ಟು, ಕುಂಕುಮವಿಟ್ಟು ಆಶೀರ್ವದಿಸುವ ಪದ್ಧತಿ ನೆರವೇರಿಸುವ ಕೆಲಸ ಮಾಡಿದರು. ಆದರೆ ಅವರ ಎದುರು ನಿಂತಷ್ಟೂ ಹೊತ್ತೂ ನಾನು ಆತನನ್ನು ನನ್ನ ಕೋಪದ ಪರಮಾವಧಿಯ ಕೊಳಕು ಮಾತುಗಳಲ್ಲಿ ಬೈದುಕೊಳ್ಳುತ್ತಿದ್ದೆ. ಇಂತವರೇ ದಕ್ಷಿಣ ಕನ್ನಡವನ್ನು ಮೂಢನಂಬಿಕೆಯ ರಾಜಧಾನಿಯನ್ನಾಗಿ ಮಾಡುತ್ತಿರುವುದು ಎಂದು ಶಪಿಸಿಕೊಳ್ಳುತ್ತಿದ್ದೆ. ಅಷ್ಟೊಂದು ಜನರನ್ನು ಯಾವುದೋ ಒಂದು ಭಯ ಮತ್ತು ಆಸೆಗಳಿಗೆ ಒಳಮಾಡಿ ತನ್ನ ಅಧೀನದಲ್ಲಿಟ್ಟುಕೊಂಡು, ಪಕ್ಕಾ ಸುಳ್ಳಿನ ಪ್ರಭಾವವನ್ನು ಸೃಷ್ಟಿಸಿರುವ ಆತನ ಬಗ್ಗೆ ನನಗೆ ತೀರಾ ಅಸಮಾಧಾನ ಹುಟ್ಟಿತ್ತು. ಅವನು ಮಾತಾಡಿದ್ದರಲ್ಲಿ ಒಂದಾದರೂ ಸಾಮರಸ್ಯದ, ಸಹಬಾಳ್ವೆಯ ಮಾತಿರಲಿಲ್ಲ. ನಂಬಿದರೆ, ನಡೆದುಕೊಂಡರೆ ಬಯಸಿದ್ದು ನೆರವೇರುತ್ತದೆ ಎಂದೂ, ನಡೆದುಕೊಳ್ಳದೇ ಹೋದರೆ ತೊಂದರೆಯಾಗುವುದು ಎಂಬ ಭಯವನ್ನು ಬಿತ್ತುತ್ತಿದ್ದ ಆತನನ್ನು ಎದುರಿಸಲು ನನ್ನಿಂದ ಹೇಗೆ ಸಾಧ್ಯ ಎಂದು ಯೋಚಿಸುತ್ತಿದ್ದೆ. ಆ ನನ್ನ ಒಳಗಿನ ಮಾತುಗಳೇನಾದರೂ ಆತನಿಗೆ ತಿಳಿದಿದ್ದೇ ಆದ ಪಕ್ಷದಲ್ಲಿ, ಅವನ ದೇವೀ ಉಪಾಸನೆಯ ಶಕ್ತಿಯಿಂದ ಸುಟ್ಟು ಭಸ್ಮ ಮಾಡಬೇಕಾಗಿತ್ತು. ಅಷ್ಟು ಕೆಟ್ಟಾ ಕೊಳಕು ಮಾತುಗಳನ್ನು ನಾನು ಎಷ್ಟೇ ಕೋಪದ ಪರಮಾವಧಿಯನ್ನು ಮುಟ್ಟಿದರೂ ಎಂದಿಗೂ ಸಾರ್ವಜನಿಕವಾಗಿ ಹೇಳಲು ಸಾಧ್ಯವೇ ಇಲ್ಲ.

ನಾನು ದಾರಿಯಲ್ಲಿ ಬರುತ್ತಾ ನನ್ನ ಅವರ ಬಳಿಗೆ ಕರೆದೊಯ್ದವರಿಗೆ ನಾನು ಮನಸ್ಸಿನಲ್ಲಿ ಬೈದುಕೊಳ್ಳುತ್ತಿದ್ದುದ್ದನ್ನು ಹೇಳಿದೆ. ಹಾಗೂ ಆತನಿಗೆ ಅದೇನೂ ಗೊತ್ತಾಗಲಿಲ್ಲವೆಂದೂ, ಅವರಿಗೆ ಗೊತ್ತಾಗುವುದೂ ಇಲ್ಲವೆಂದೂ, ಆತನ ಸುತ್ತಲೂ ನೆರೆದಿರುವ ಮಂದಿಯ ಭಯ ಮತ್ತು ಆಸೆಗಳೇ ಆತನನ್ನು ಆ ಸ್ಥಾನದಲ್ಲಿ ಇರಿಸಿರುವುದು ಎಂದೂ ಅವರಿಗೆ ಸ್ಪಷ್ಟಪಡಿಸಲು ನೋಡಿದೆ. ಆದರೆ ಅವರು ಒಪ್ಪಲಿಲ್ಲ. ಬದಲಾಗಿ, ಮೊದಲ ಬಾರಿ ಆದ್ದರಿಂದ ಅವರು ಕ್ಷಮಿಸಿರಬಹುದು ಅಥವಾ ಇಂದು ರಾತ್ರಿ ತಮ್ಮ ಉಪಾಸನಾ ಸಮಯದಲ್ಲಿ ಅದನ್ನು ಕಂಡುಕೊಂಡು ನಿಮ್ಮ ಮೇಲೆ ಏನಾದರೂ ಪ್ರಯೋಗ ಮಾಡಿಬಿಡಬಹುದು. ದಯವಿಟ್ಟು ಕ್ಷಮೆ ಕೇಳಿ ಎಂದು ಆಗ್ರಹಿಸಿ, ನನ್ನ ಬಾಯಿಂದ ಮತ್ತಷ್ಟು ಕೆಟ್ಟ ಮಾತುಗಳನ್ನು ಹೊರಡಿಸಿದರು. ಅದಾದ ಮೇಲೆ ಅವರು ನನ್ನ ಸಂಪರ್ಕವನ್ನೇ ಬಿಟ್ಟುಬಿಟ್ಟರು. ಅವರಿಗೆ ಬಂದ ಭಯವೆಂದರೆ, ನನ್ನಂತಹ ಕೆಟ್ಟ ಮಾತಿನ ನಾಸ್ತಿಕನ ಸಂಗವು ಅವರ ಬದುಕಿನ ಮೇಲೆ ಪರಿಣಾಮ ಬೀರಬಹುದು ಅಥವಾ ದೇವರು, ದೈವ, ಭೂತ ಮತ್ತು ದೇವಿ ಉಪಾಸಕರ ಆಗ್ರಹಕ್ಕೆ ಗುರಿಯಾಗಬಹುದು ಎಂದು ನನ್ನ ಸಂಬಂಧವನ್ನು ಸಂಪೂರ್ಣವಾಗಿ ತೊರೆದರು.

ದೇವಿ ಉಪಾಸಕರು ಮಾಟ ಮಂತ್ರಾದಿ ವಿದ್ಯಾ ಪ್ರವೀಣರಾಗುವುದು ಹೇಗೆ? ವಾಮಾಚಾರಗಳು, ಶ್ರೀವಿದ್ಯೆ ಉಪಾಸನೆಗಳು ಹೇಗೆ ಮತ್ತು ಏಕೆ ಒಂದಕ್ಕೊಂದು ತಳುಕು ಹಾಕಿಕೊಂಡಿತು? ನಿಜಕ್ಕೂ ತಾಂತ್ರಿಕತೆಯಲ್ಲಿ ಅಂತಹ ಶಕ್ತಿಗಳಿವೆಯೇ? ಪ್ರಕೃತಿ ಮತ್ತು ಶಕ್ತಿ ಇವುಗಳ ನಡುವೆ ಇರುವ ಸಂಬಂಧ ಮತ್ತು ವ್ಯತ್ಯಾಸಗಳೇನು ಎಂದು ಮುಂದೆ ನೋಡೋಣ.

'ಗಡ್ಡೆ' ರಹಿತ ಗೀತೆಗೆ ಅಸ್ತಿತ್ವವೇ ಇಲ್ಲ

ಹೊಗಳಿಕೆ ತೆಗಳಿಕೆ



ಭಗವದ್ಗೀತೆಯನ್ನು ಸಾರಾಸಗಟಾಗಿ ನೂರಕ್ಕೆ ನೂರು ಕೆಟ್ಟದ್ದನ್ನಷ್ಟೇ ಪ್ರಚೋದಿಸುವ ಗ್ರಂಥವೆಂದರೆ ಅದು ಪೂರ್ವಾಗ್ರಹದ ಮಾತಾಗುತ್ತದೆ. ಅಷ್ಟು ದೊಡ್ಡ ಗ್ರಂಥದಲ್ಲಿ ಕೆಲವಾರು ಒಳ್ಳೆಯ ಅಂಶಗಳು ಖಂಡಿತಾ ಇವೆ. ಇದು ಬೈಬಲ್, ಖುರಾನ್‌ನಂತೆ ಪ್ರತ್ಯೇಕ ಅಸ್ತಿತ್ವವನ್ನು ಹೊಂದಿರದೇ ಮಹಾಭಾರತದ ಒಂದು ಭಾಗವಷ್ಟೆ ಆಗಿದ್ದರೂ (ಮಹಾಭಾರತದಲ್ಲೂ ಕೇವಲ ಗೀತೆಯಷ್ಟೆ ಅಲ್ಲದೇ ಅದರಂತೇ ಇರುವ ಭೀಷ್ಮ ಶರಶಯ್ಯೆಯಲ್ಲೇ ಮಲಗಿ ಪಾಂಡವರಿಗೆ ಉಪದೇಶಿಸಿದ ರಾಜಧರ್ಮದ ಪಾಠಗಳು, ಕುಂತಿ ದ್ರೌಪದಿಗೆ ಉಪದೇಶಿಸಿದ ಸ್ತ್ರೀ ಧರ್ಮದ ಉಪದೇಶ ಹಾಗು ವಿಧುರ ನೀತಿ ಮೊದಲಾದವುಗಳೂ ಇವೆ) ನಮ್ಮಲ್ಲಿ ಗೀತೆಗೂ ಮಿಗಿಲಾದ ಉಪನಿಷತ್ ಬ್ರಹ್ಮಸೂತ್ರಗಳಂತಹ ಅನೇಕ ತತ್ವಶಾಸ್ತ್ರೀಯ ಗ್ರಂಥಗಳಿವೆ. ಆದರೂ ಬ್ರಾಹ್ಮಣರು ಗೀತೆಗೆ ಅತ್ಯಂತ ಮಹತ್ವವನ್ನು ನೀಡಿರುವುದು ತಮ್ಮ ಸಿದ್ಧಾಂತಗಳನ್ನದು ಪರಿಣಾಮಕಾರಿಯಾಗಿ ಸಮರ್ಥಿಸುತ್ತದೆಂದೇ ಹೊರತು ಬೇರೇನಕ್ಕಲ್ಲ. ಕೆಳವರ್ಗದವರಿಗೆ 'ಗಡ್ಡೆ'ಗಳೆಂದು ತೋರುವ ಆದರೆ ವಿಪ್ರ ಸಮೂಹಕ್ಕೆ ಪೂರಕವೆನಿಸಿರುವಂತಹ (ಜಾತಿ-ಕರ್ಮ ಇತ್ಯಾದಿಗಳನ್ನು ಸಾಕ್ಷೀಕರಿಸುವ) ಅಂಶಗಳನ್ನು ತೆಗೆಯಹೊರಟರೆ ಗೀತೆಯ ಮಾನ್ಯತೆಯನ್ನೇ ತೆಗೆದಂತಾಗುತ್ತದಷ್ಟೆ. ಹೇಗಿದ್ದರು ವೈದಿಕರು ಹಾಗು ಸನಾತನವಾದಿಗಳಿಗೆ ಗೀತೆಯ ಈ ಗಡ್ಡೆಗಳೇ ಜೀವಾಳ ತಾನೆ?

ಹಿಂದೂಗಳ ಧರ್ಮಗ್ರಂಥಗಳಲ್ಲಿ ಅನೇಕಾನೇಕ ಒಳ್ಳೆಯ ಅಂಶಗಳನ್ನು ಸಾರುವ ಮಾತುಗಳಿವೆ. ಉದಾ ಸರ್ವೇ ಜನಾಃ ಸುಖಿನೋ ಭವಂತು ಅಥವ ಎಲ್ಲಾ ಜೀವಿಗಳಲ್ಲೂ ಇರುವ ಆತ್ಮ ಒಂದೇ ಇತ್ಯಾದಿ ಇತ್ಯಾದಿ. ಆದರೆ ನಿಜಕ್ಕೂ ಇದನ್ನು ಸ್ವಲ್ಪವಾದರೂ ಈ ತನಕ ಪಾಲಿಸಲಾಗಿದೆಯೇ? ಇವೆಲ್ಲ ಭಾಷಣ-ಬರಹಗಳಲ್ಲಿ ಉಲ್ಲೇಖಿಸಲು ಹಾಗು ತಮ್ಮ ಔನ್ನತ್ಯದ ಸಮರ್ಥನೆಗಾಗಿ ಹೆಚ್ಚಾಗಿ ಬಳಕೆಯಾಗಿತ್ತದೆಯೇ ಹೊರತು ತಮ್ಮ ನಿತ್ಯವ್ಯವಹಾರ ಕರ್ಮಗಳಲ್ಲಿ ಗೀತೆ-ಮನುಸ್ಮೃತಿಗಳ ನಕಾರಾತ್ಮಕ ಅಂಶಗಳನ್ನಷ್ಟೇ ಹೆಚ್ಚಾಗಿ ಅಳವಡಿಸಿಕೊಂಡಿರುವುದನ್ನ ಕಾಣಬಹುದು. ಹಾಗಾಗಿ ತೆಗೆಯಲು ಅಸಾಧ್ಯವಿರುವ ಈ ಗಡ್ಡೆ ಆಪರೇಷನ್ ಮಾಡಿಸಿಕೊಂಡು ಅದನ್ನ ಒಪ್ಪಿ ಅಪ್ಪಿಕೊಳ್ಳುವುದೆನ್ನುವುದಕ್ಕಿಂತ ಅವನ್ನು ಇಗ್ನೋರ್ ಮಾಡುವುದೇ ಹೆಚ್ಚು ಉತ್ತಮ. ಅಷ್ಟಕ್ಕೂ ಅನ್ನ ನೀರು ಗಾಳಿಯಂತೆ ಈ ಗೀತೆಯಿಲ್ಲದೇ ಮಾನವ ಬದುಕುಳಿಯುವುದೇ ಕಷ್ಟ ಅನ್ನುವಂತಾದ್ದೇನಿದೆ?

-ಎಮ್‌ಎಸ್. ನೆಲ್ಲಿಕಾರ್

ದೇವನೂರರ ವಿವೇಕವನ್ನು ಅರ್ಥೈಸಿಕೊಳ್ಳಬೇಕು

ಜನನುಡಿ ಸಮಾವೇಶದಲ್ಲಿ ದೇವನೂರು ಮಹದೇವ ಅವರು ಆಡಿದ ಮೌಲಿಕ ಮಾತುಗಳ ಮೂಲ ಆಶಯವನ್ನು ಗ್ರಹಿಸದೇ ಅವರ ಲೇಖನವನ್ನು ತಪ್ಪಾಗಿ ಅರ್ಥೈಸಿ ಶ್ರೀಧರ್ ಪ್ರಭು ಹಾಗೂ ಹಾರೋಹಳ್ಳಿ ರವಿ ಮೈಸೂರು ಅವರುಗಳ ಪ್ರತಿಕ್ರಿಯೆ (ವಾರ್ತಾ ಭಾರತಿ ಸಂಚಿಕೆ 24-12-2015 ಮತ್ತು 25-12-2015) ಒರಟು ವಿಚಾರವಾದದ ಹಿನ್ನೆಲೆಯಿಂದ ಕೂಡಿದೆ. ದೇವನೂರರನ್ನು ಕುರಿತು ದಲಿತ ಆದಿಶಂಕರಾಚಾರ್ಯರಾಗಿ ಬಿಂಬಿಸಿರುವುದು ನಿಮಗೆ ಶೋಭೆ ತರುವುದಿಲ್ಲ ಮಿತ್ರರೇ. ವೇದಗಳ ಕಾಲದಿಂದಲೂ ಚಾರುವಾಕರು, ಪುರೋಹಿತಶಾಹಿಗಳ ಆಚರಣೆಗಳನ್ನು ದೇವರ ಅಸ್ತಿತ್ವವನ್ನು ಕಡೆಗಣಿಸುತ್ತಲೇ ಹಿಂದಿನ ಬಾಗಿಲುಗಳಿಂದ ದೇವರುಗಳನ್ನು ಬರಮಾಡಿಕೊಂಡಿರುವ ಮರ್ಮವೇನು? ದ್ರಾವಿಡ ಚಳವಳಿ, ದಲಿತ ಚಳವಳಿಗಳು, ಪುರಾಣಗಳನ್ನು, ಕಾವ್ಯಗಳನ್ನು ಭಂಜಿಸುತ್ತಾ ಅದಕ್ಕೆ ಪರ್ಯಾಯವಾದ ಸಾಂಸ್ಕೃತಿಕ ನಡೆಯ ಬಗ್ಗೆ ಚಿಂತಿಸದೇ ಇರುವುದು ಯಾಕೆ? ತಾವು ಪಡೆದಿರುವ ಚಿಂತನೆಗಳ ಮೂಲದಲ್ಲಿ ಕೊರತೆ ಇದೆಯಾ? ಚರಿತ್ರೆಯ ಉದ್ದಗಲಕ್ಕೂ ಕ್ರಾಂತಿಗಳನ್ನು ಮಣಿಸುತ್ತಾ, ಪ್ರತಿಕ್ರಾಂತಿ ತನ್ನ ಯಜಮಾನ್ಯ ನೆಲೆಗಳನ್ನು ವಿಸ್ತರಿಸುತ್ತಿರುವ ತಂತ್ರಗಳೇನು? ದೇವನೂರರ ಆತಂಕವನ್ನು ಸಮಚಿತ್ತದಿಂದ ತಾವುಗಳು ಗ್ರಹಿಸಿದ್ದರೆ ನೀವಿಷ್ಟು ಆಕ್ರೋಶವಾಗಿ ಪ್ರತಿಕ್ರಿಯಿಸುತ್ತಿರಲಿಲ್ಲವೇನೊ. ಶಂಕರಾಚಾರ್ಯರಾದಿಯಾಗಿ ಪುರೋಹಿತಶಾಹಿಗಳು ನಮ್ಮ ಮೂಲ ಸಂಸ್ಕೃತಿಯ ಸಾಂಸ್ಕೃತಿಕ ನೆಲೆಗಳನ್ನು ನಾಶಮಾಡಿ ವೈದಿಕ ಸಾಂಸ್ಕೃತಿಕ ಕೇಂದ್ರಗಳನ್ನಾಗಿ ಪರಿವರ್ತಿಸಿರುವುದು ಎಂತಹ ಸೋಜಿಗ.

ಅಂಬೇಡ್ಕರ್ ಅವರು ಈ ಕರ್ಮಠ ಪುರೋಹಿತಶಾಹಿಗಳು ನಮ್ಮ ಆದಿಮೂಲ ಸಂಸ್ಕೃತಿಯನ್ನು ಅದೆಷ್ಟು ವಿಕೃತಗೊಳಿಸಿದ್ದಾರೆಂದರೆ ಸೂಕ್ಷ್ಮ ಗ್ರಹಿಕೆಯಿಂದ ಗ್ರಹಿಸದೇ ಇದ್ದರೆ ಗುರುತು ಸಿಗಲಾರದಷ್ಟು ವಿಕೃತಗೊಳಿಸಿದ್ದಾರೆಂದು ಆಶ್ಚರ್ಯಚಕಿತರಾಗುತ್ತಾರೆ. ಯಾವ ಚಳವಳಿ ಸಾಂಸ್ಕೃತಿಕ ನಡೆಯಾಗಬೇಕಾಗಿತ್ತೋ ಆ ಚಳವಳಿ ಒಂದು ಹೆಜ್ಜೆಯೂ ಕ್ರಮಿಸದೇ ಇರುವುದು ವಿಪರ್ಯಾಸ. ಪಟ್ಟಭದ್ರರಿಗೆ ಪ್ರತಿಕ್ರಿಯಿಸುತ್ತಾ ನಮ್ಮ ಆಯಸ್ಸು ವ್ಯಯ ಮಾಡುವುದರ ಬದಲು ಸಮುದಾಯದ ಮನಸ್ಸಿನೊಡನೆ ಕೂಡಿಕೆಯಾಗಿ ನಮ್ಮ ಮಾತು ಸಮುದಾಯದ ಮಾತು ಆಗುವಂತಾಗಲು ಏನೇನು ಅಂತ ಹುಡುಕಬೇಕಾಗುತ್ತದೆ ಆಗ ನಡೆಯೂ ಸಿಗಬಹುದು. ಅಂತಹ ನಡೆಗಾಗಿ ಕುವೆಂಪು ದರ್ಶನದ ಪ್ರತಿಮ ದೃಷ್ಟಿ ಪಡೆದರೆ ನಮಗೆ ಸಾಧ್ಯವಾಗುತ್ತದೆ ಎಂಬ ದೇವನೂರರ ವಿವೇಕವನ್ನು ಅರ್ಥೈಸಿಕೊಳ್ಳಬೇಕಾಗುತ್ತದೆ.

70ರ ದಶಕದಲ್ಲಿ ನಡೆದ ಕರ್ನಾಟಕ ಬರಹಗಾರರ ಹಾಗೂ ಕಲಾವಿದರ ಸಮ್ಮೇಳನದಲ್ಲಿ ಕುವೆಂಪು ಮಾತಾಡ್ತ ಈ ಪುರೋಹಿತಶಾಹಿಗಳು ಹುಲಿ ಇದ್ದಂತೆ ನೀವು ಜೋಡು ನಳಿಗೆ ತೋಟಾ, ಕೋವಿ ಇಟ್ಟುಕೊಂಡು- ಗುರಿ ಕಟ್ಟಿ ತಲೆಗೆ ಹೊಡೆದರೆ ಒಂದೇ ಹೊಡೆತಕ್ಕೆ ಅದು ಬೀಳಬೇಕು. ಆದರೆ ಈ ವಿಚಿತ್ರ ಬೇಟೆಯಲ್ಲಿ ಗುಂಡು ತಗುಲಬೇಕಾಗಿದ್ದು ಹುಲಿಯ ತಲೆಗಲ್ಲ...... ನಿಮ್ಮ ತಲೆಗೆ! ತಲೆ ತಲೆ ಮೊದಲು ತಲೆಯಲ್ಲಿರುವ ಮೆದುಳನ್ನು ಕ್ಲೀನ್ ಮಾಡಬೇಕು (ದೇವಯ್ಯಹರವೆ ಲೇಖನ) ನಾವು ಅಂತಹ ಬೌದ್ಧಿಕತೆಯನ್ನ ಪಡೆಯಬೇಕೆನ್ನುತ್ತಾರೆ. ಆ ಹಿನ್ನೆಲೆಯಲ್ಲಿ ಪುರಾಣಕಾವ್ಯಗಳನ್ನು ಹಳೆಯ ಒಡವೆಗಳೆಂದು ಬಗೆದು ಬಿಸಾಕದಿರಿ ಅವುಗಳನ್ನು ಕರಗಿಸಿ ಹೊಸರೂಪ ಪಡೆಯಬೇಕಾಗಿದೆ; ಆ ಪ್ರಯತ್ನ ಕವಿ ಕಲಾವಿದರು ಮಾಡಬೇಕೆನ್ನುತ್ತಾರೆ. ಅದರ ಫಲವೇ ಶೂದ್ರತಪಸ್ವಿ. ಶಂಭೂಕನನ್ನು ವದಿಸಲು ಶ್ರೀ ರಾಮಬಾಣ ಬಿಟ್ಟಾಗ ಆ ಬಾಣ ಶಂಭೂಕನನ್ನು ಸುತ್ತಿ ಮತ್ತೆ ವಾಪಸ್ಸಾಗುವ ಪ್ರತಿಮಾ ದೃಷ್ಟಿ ರಚಿಸಿದರು. ಆ ನಾಟಕದ ಬಗ್ಗೆ ಮಾಸ್ತಿ ಆದಿಯಾಗಿ ಪುರೋಹಿತಶಾಹಿಗಳು ಬೊಬ್ಬೆ ಹೊಡೆಯುತ್ತಾರೆ. ಕುವೆಂಪು ಅದಕ್ಕೆ ಎದೆಗುಂದಲಿಲ್ಲ, ಲೋಹಿಯಾ ಅವರು ಪುರಾಣಗಳು ಶತಶತಮಾನಗಳ ಕಾಲದಿಂದ ಜನರ ಮನಸ್ಸನ್ನು ಅಖಂಡವಾಗಿ ಆಳುತ್ತಾ ಬಂದಿದೆ. ಹಾಗೆಯೇ ಪುನಶ್ಚರಣೆ ಮಾಡುವಲ್ಲಿ ದೊಡ್ಡ ದೊಡ್ಡಗಾಯಕರು, ಕವಿಗಳು ಅದನ್ನು ನಯಗೊಳಿಸಲು ತಮ್ಮ ಪ್ರತಿಭೆಯನ್ನು ಬಳಸಿದರು.

ಇತಿಹಾಸದ ವ್ಯಕ್ತಿಗಳಾದ ಬುದ್ಧ, ಅಶೋಕ ಇವರ ಬಗ್ಗೆ ನಮ್ಮ ಜನರಲ್ಲಿ ಕಾಲುಭಾಗಕ್ಕೆ ಮಿಕ್ಕ ತಿಳಿದಿಲ್ಲ, ರಾಮ, ಕೃಷ್ಣ ಶಿವ (ಲೋಹಿಯಾರವರ ಲೇಖನ) ಎಲ್ಲಾ ವ್ಯಕ್ತಿಗಳಿಗೂ ಗೊತ್ತು, ಪ್ರಗತಿಪರ ಚಿಂತಕರು ಪುರಾಣ ಕಾವ್ಯಗಳಲ್ಲಿರುವ ದೋಷಗಳನ್ನು ಪ್ರತಿರೋಧಿಸಿದ್ದು ಸಾಕು. ದೇವನೂರು ಹೇಳಿದಂತೆ ಸಮುದಾಯದ ಮನಸ್ಸಿನೊಡನೆ ನಾವು ಕೂಡಿಕೆಯಾಗಿ ಮಥಿಸಿ ಮರುಹುಟ್ಟು ಪಡೆಯದಿದ್ದರೆ ನಾವು ಸಮುದಾಯದಿಂದಲೇ ಹೊರಹಾಕಲ್ಪಟ್ಟವರು ಆಗಿಬಿಡಬಹುದಾ? ಅದಕ್ಕಾಗಿ "ನಾವು ಸಾಂಸ್ಕೃತಿಕ ಕಣ್ಣಿಗಾಗಿ ತಪಸ್ಸು ಮಾಡಬೇಕಾಗಿದೆ". ಈ ಮಾತು ಎಷ್ಟು ಪ್ರಸ್ತುತ?

- ವಿ.ಬಾಲಕೃಷ್ಣ ಮಾಲೂರು



ಹವ್ಯಕ ವಂಚಕರಿಗೊಂದು ಆಶ್ರಮ?

ಎಚ್‌ಡಿಎಫ್‌ಸಿಯ ವಿಶಾಲಾಕ್ಷಿ ಭಟ್ಟಮ್ಮ ದೋಚಿದ 50 ಕೋಟಿಗೂ ಹೆಚ್ಚು ದುಡ್ಡು ಎಲ್ಲಿ ಹೋಯಿತು ಎಂದು ಪೊಲೀಸರೂ ಅಷ್ಟು ಆಳವಾಗಿ ಕೆದುಕಲಿಕ್ಕಿಲ್ಲ, ಕಾರಣ ಈಗಿನ ಕಾಂಗ್ರೆಸ್ ಸಚಿವರೊಬ್ಬರ ಕುಟುಂಬದ ಹೆಂಗಸರೇ ಈ ವಂಚನೆಯಲ್ಲಿ ಪಾಲ್ಗೊಂಡಿರುವುದು ಪೊಲೀಸರ ಕೈಕಟ್ಟಿಲಿದೆ. ಇನ್ನು ಬ್ಯಾಂಕ್ ವಂಚನೆಗಳ ವಿಷಯದಲ್ಲಿ ಪೊಲೀಸರು ಮಾತ್ರವಲ್ಲ ಸಿಬಿಐನವರೂ ಆಳವಾಗಿ ಕೆದುಕದೇ ತಿಪ್ಪೆ ಸಾರಿಸುತ್ತಾರೆ ಎಂಬುದು ಎಲ್ಲಾ ರಾಷ್ಟ್ರೀಕೃತ ಬ್ಯಾಂಕಿನವರ ಸ್ವಂತ ಅನುಭವ.

ಸುಮಾರು 23 ವರ್ಷಗಳ ಹಿಂದೆ ಮಂಗಳೂರಿನ ಸಂತ ಆಲೋಶಿಯಸ್ ಕಾಲೇಜಿನ ಆವರಣದಲ್ಲಿದ್ದ ಸೆಂಟ್ರಲ್ ಬ್ಯಾಂಕಿನ ಶಾಖೆಯಲ್ಲಿ ಇದೇ ಶಿರಸಿಯ ಹವ್ಯಕ ಬ್ರಾಹ್ಮಣ ಕ್ಯಾಶಿಯರ್ 35 ಲಕ್ಷ ರೂಪಾಯಿ ವಂಚನೆ ಮಾಡಿ ಪರಾರಿಯಾದ. ಆಗಿನ 35 ಲಕ್ಷ ಎಂದರೆ ಈಗಿನ 35 ಕೋಟಿಗೆ ಸಮ ಎನ್ನಬಹುದು. ಮೊದಲು ತನಿಖೆ ನಡೆಸಿದ ಕರ್ನಾಟಕ ಪೊಲೀಸ್ ಮತ್ತು ಕರ್ನಾಟಕ ಸಿಐಡಿಗಳಿಂದ ತಲೆ ಮರೆಸಿಕೊಂಡು ಹೋಗಿದ್ದ ಆ ಕ್ಯಾಶಿಯರ್ ಭಟ್ಟನನ್ನು ಹಿಡಿಯಲಾಗಲಿಲ್ಲ, ಅದಕ್ಕಾಗಿ ಬ್ಯಾಂಕಿನವರು ಇದನ್ನು ಸಿಬಿಐಗೆ ವಹಿಸಿದರು. ಅವರಿಗೂ ವಂಚಕ ಭಟ್ಟನನ್ನು ಹಿಡಿಯಲಾಗಲಿಲ್ಲ, ಕೊನೆಗೆ 23 ವರ್ಷಗಳ ನಂತರ ಒಬ್ಬ ಅಮಾಯಕ 70 ವರ್ಷ ವಯಸ್ಸಿನ ಸಾಯುವ ಸ್ಥಿತಿಯಲ್ಲಿರುವ ಅದೇ ಬ್ಯಾಂಕಿನ ನಿವೃತ್ತ ಕ್ರಿಶ್ಚಿಯನ್ ನೌಕರನನ್ನು ಫಿಕ್ಸ್ ಮಾಡಿ ಸಿಬಿಐ ಸಹ ಕೈ ತೊಳೆದುಕೊಂಡಿತು. ಸಿಬಿಐ ಅಧಿಕಾರಿಗಳೇ ತನಿಖಾ ಸಮಯದಲ್ಲಿ ಬ್ಯಾಂಕ್ ಮೇಲಧಿಕಾರಿಗಳಿಗೆ ಹೇಳಿದ್ದೇನೆಂದರೆ: "ಆ ವಂಚಕ ಕ್ಯಾಶಿಯರ್ ಭಟ್ಟ ಉತ್ತರ ಪ್ರದೇಶದಲ್ಲಿ ಆಶ್ರಮ ತೆರೆದು ಕೂತಿದ್ದಾನೆ, ಹಾಗಾಗಿ ಅವನನ್ನು ಮುಟ್ಟಲು ನಮಗೆ ಆಗುತ್ತಿಲ್ಲ!"

ಈಗ ನೋಡಿದರೆ ಅದೇ ಶಿರಸಿಯ ಇನ್ನೋರ್ವ ಹವ್ಯಕ ಭಟ್ಟಮ್ಮ ಅದೇ ಉತ್ತರ ಪ್ರದೇಶದ ಒಂದು ಆಶ್ರಮದಲ್ಲಿ ಅಡಗಿ ಕುಳಿತಿರಬಹುದು. ಹಾಗಾದರೆ 23 ವರ್ಷಗಳ ಹಿಂದೆ ಮಂಗಳೂರಿನ ಸಂತ ಆಲೋಶಿಯಸ್ ಕಾಲೇಜಿನಲ್ಲಿಯ ಬ್ಯಾಂಕಿನ ಶಾಖೆಯಲ್ಲಿ ವಂಚನೆ ಮಾಡಿದ ಕ್ಯಾಶಿಯರ್ ಭಟ್ಟ ಉತ್ತರ ಪ್ರದೇಶದಲ್ಲಿ ಆಶ್ರಮ ತೆರೆದು ಕುಳಿತು ಕರ್ನಾಟಕದಿಂದ ವಂಚನೆ ಮಾಡಿ ತಲೆ ಮರೆಸಿಕೊಂಡು ಓಡಿಬರುವ ಹವ್ಯಕ ವಂಚಕರಿಗೆಲ್ಲಾ ತನ್ನ ಆಶ್ರಮದಲ್ಲಿ ಅಡಗಿ ಕೂರಲು ಅನುವು ಮಾಡಿ ಕೊಡುತ್ತಿದ್ದಾನೆಯೇ ಎಂಬ ಅನುಮಾನ ಮಂಗಳೂರಿನ ಬ್ಯಾಂಕ್ ನೌಕರರಿಗೆ ಮೂಡುತ್ತಿರುವುದು ಸಹಜ. 23 ವರ್ಷಗಳ ಹಿಂದೆ ತನಿಖೆಯ ನೆಪದಲ್ಲಿ ಬ್ಯಾಂಕಿನ ಖರ್ಚಿನಲ್ಲಿ ಧರ್ಮಸ್ಥಳ ಕೊಲ್ಲೂರು ಸುಬ್ರಹ್ಮಣ್ಯ ಕ್ಷೇತ್ರಗಳ ದರ್ಶನ ಮಾಡಿ ಅದೇ ಬ್ಯಾಂಕಿನವರ ಖರ್ಚಿನಲ್ಲಿ ಒಂದು ವಾರ ಪಟ್ಟಾಗಿ ತಿಂದು ಕುಡಿದು ಮಜಾ ಮಾಡಿದ ಸಿಬಿಐ ತನಿಖಾಧಿಕಾರಿಗಳು 23 ವರ್ಷ ಹಳೆಯ ಕನ್ನಡಿಗ ವಂಚಕನ ಉತ್ತರ ಪ್ರದೇಶದ ಆಶ್ರಮ ಪತ್ತೆ ಮಾಡಿ ಆತನನ್ನು ಅವನ ಗಡ್ಡ ದಂಡ ಕಮಂಡಲ ಸಹಿತ ಹೆಡೆಮುರಿ ಕಟ್ಟಿ ತರುವರೇ ಎಂದು ಕಾದು ನೋಡಬೇಕಿದೆ.

- ಅಭಿಷೇಕ್.ಪಿ. ಸುಳ್ಯ

ಲೋಕಕಲ್ಯಾಣದ ಹೆಸರಲ್ಲಿ ಮೌಢ್ಯತೆ

ಯಡಿಯೂರಪ್ಪ ನೆಟ್ಟಗೆ ಮೆರೆದು ಅಧಿಕಾರ ಚಲಾಯಿಸುತ್ತಿದ್ದಾಗ ಯಾರೋ ಜ್ಯೋತಿಷಿ ಹೇಳಿದಂತೆ 'ಯಡ್ಯೂರಪ್ಪ' ಆದರು. ಅದೇ ರೀತಿ ಜಯಲಲಿತ ತನ್ನ ಹೆಸರಿನ ಮುಂದೆ ಮತ್ತೊಂದು 'A' ಸೇರಿಸಿಕೊಂಡು ಜಯಲಲಿತಾ ಆದರು. ನಸೀಬು ಖುಲಾಯಿಸುತ್ತದೆಂದು ಮಾಡಿಕೊಂಡ ಈ ಬದಲಾವಣೆ ಅವರು ಜೈಲುಪಾಲಾಗಿಸು



ವುದನ್ನ ಮಾತ್ರ ತಪ್ಪಿಸಲೇ ಇಲ್ಲ, ಮೊನ್ನೆ ತೆಲಂಗಾಣದ ತಿಕ್ಕಲು ಸಿಎಂ ಚಂದ್ರಶೇಖರ ರಾವ್ ಜನರ ಕೋಟಿಗಟ್ಟಲೆ ತೆರಿಗೆ ಹಣವನ್ನು ವ್ಯಯಿಸಿ ಲೋಕಕಲ್ಯಾಣಕ್ಕಾಗಿ ನಡೆಸಿದ ಯಜ್ಞ ಅನಾಹುತವನ್ನು ಸೃಷ್ಟಿಸಿ ಜನರಿಗೆ ವಾಕರಿಕೆಯನ್ನ ತರಿಸಿತ್ತು, ಕೆಲ ಸಮಯದ ಹಿಂದೆ ನಮ್ಮ ಸಿದ್ದರಾಮಯ್ಯ ಸರಕಾರದ ಯಾವುದೋ ಇಲಾಖೆಯ ಯಾವುದೋ ವಿಚಾರದಲ್ಲಿ ಅಗ್ನಿಹೋತ್ರ(ಒಂದು ಬಗೆಯಲ್ಲಿ ಸಣ್ಣ ರೀತಿಯ ಯಜ್ಞ)ದ ಅಳವಡಿಕೆಯನ್ನು ಶಿಫಾರಸ್ಸು ಮಾಡಿದ್ದು ಸುದ್ದಿಯಾಗಿತ್ತು, (ಈ ಅಗ್ನಿಹೋತ್ರದಿಂದ ಬೆಳೆಗಳು ಚೆನ್ನಾಗಿ ಬರುತ್ತದಂತೆ, ಕೀಟಗಳು ಬರುವುದಿಲ್ಲವಂತೆ, ಅಷ್ಟೆ ಯಾಕೆ ನಮ್ಮ ಮಾಜಿ ಮಂತ್ರಿ ಬಿಜೆಪಿಯ ರಾಮದಾಸರು ಭೋಪಾಲ್ ದುರಂತದಲ್ಲಿ ಅಗ್ನಿಹೋತ್ರದ ಕಾರಣಕ್ಕಾಗಿ ಬಚಾವಾದ ಕುಟುಂಬದವರಿಂದ ಕೆಲ ಟೆಕ್ನಿಕ್‌ಗಳನ್ನು ಕಲಿತು ಸಂಜೀವಿನಿ ವಿದ್ಯೆಯನ್ನ ಅಳವಡಿಸಿಕೊಂಡಿದ್ದ ಸುದ್ದಿಯೂ ಟಿವಿ ನೈನ್‌ನ 'ಹೀಗೂ ಉಂಟೆ'ಯಲ್ಲೊಮ್ಮೆ ಬಂದಿತ್ತು)

ಮೊನ್ನೆ ಮೊನ್ನೆ ಮಂಡ್ಯದ ಸೀತಾಲಕ್ಷ್ಮಿ ಎಂಬಾಕೆ ವೈಕುಂಠ ಏಕಾದಶಿಯ ನೆಪದಲ್ಲಿ ಬಸವನಗುಡಿಯ ಉತ್ತರಾದಿಮಠದ ಬಾವಿಗೆ ಹಾರಿ ಆತ್ಮಹತ್ಯೆ ಮಾಡಿಕೊಂಡ (ಕ್ಷಮಿಸಿ ಸ್ವರ್ಗಸ್ಥರಾ) ಸುದ್ದಿಯೊಂದು ಬಂದಿತ್ತು, ಒಂದೂವರೆ ದಶಕದ ಹಿಂದೆ 2000ನೇ ಇಸವಿ ಕಾಲಿಡುವಾಗ ಹಬ್ಬಿದ ಪ್ರಳಯವೋ, ಯೇಸುವಿನ ಪುನರಾಗಮನವೋ ಅಥವ ಮತ್ತಿನ್ನೆಂತದ್ದೋ ಬೊಗಳೆಗಳ ಮೌಢ್ಯಕ್ಕೆ ಬಲಿಬಿದ್ದ ಕೆಲ ವಿದ್ಯಾವಂತ ಸಾಫ್ಟ್‌ವೇರ್ ಇಂಜಿನಿಯರ್‌ಗಳು ಇದೇ ಸೀತಾಲಕ್ಷ್ಮಿಯ ರೀತಿಯಲ್ಲೇ ಇಹಲೋಕವನ್ನು ತ್ಯಜಿಸಿದ್ದರು. ಇಂತಹ ಯಾರಿಗೂ ತಿಳಿಯದ ಅಸ್ಪಷ್ಟತೆಯ (ಒಬ್ಬೊಬ್ಬರು ಮನಸ್ಸಿಗೆ ಬಂದಂತೆ ಒಂದೊಂದು ರೀತಿಯಲ್ಲಿ ವ್ಯಾಖ್ಯಾನಿಸುವ) ಸ್ವರ್ಗ, ಮೋಕ್ಷ, ಪುಣ್ಯ, ಪರಲೋಕಗಳ ಭ್ರಮೆಗೆ ಬಿದ್ದು ಈ ಇಹಲೋಕದ ತಮ್ಮ ಬದುಕನ್ನು (ಆ ಮೂಲಕ ತಮ್ಮನ್ನು ನಂಬಿದವರ ಬದುಕನ್ನೂ ಕೂಡ) ನರಕ ಮಾಡಿಕೊಂಡವರೆಷ್ಟೋ. ಇಂತವರನ್ನು ಕಂಡೇ ಚಾರ್ವಾಕ ಜನರಿಗೆ ಬುದ್ಧಿಮಾತನ್ನು ಹೇಳಿದ್ದು: ಇಲ್ಲದ ಸ್ವರ್ಗ ನರಕ ಮೋಕ್ಷ ಇತ್ಯಾದಿಗಳ ಭ್ರಮೆಗಳಿಗೆ ಬಿದ್ದು ಬದುಕನ್ನು ಹಾಳುಮಾಡಿಕೊಳ್ಳಬೇಡಿ ಹುಚ್ಚಪ್ಪಗಳೇ. ನಿಮ್ಮ ಮುಂದಿರುವ ಬದುಕಿನ ವಾಸ್ತವವನ್ನರಿತು ಆತ್ಮಸಾಕ್ಷಿಗನು ಗುಣವಾಗಿ ಇದ್ದಷ್ಟು ದಿನ ಚೆನ್ನಾಗಿ ಬದುಕಿ. ಒಗಟಿನಂತಹ ಆತನ ಮಾತಿನಲ್ಲಿ ಕೇವಲ ಋಣಂ ಕೃತ್ವಾ ಘೃತಂ ಪಿಭೇತ್- (ಸಾಲ ಮಾಡಿಯಾದರೂ ತುಪ್ಪ ತಿನ್ನು) -ಎಂಬುದಷ್ಟನ್ನೇ ಮುಖ್ಯವಾಗಿ ತೆಗೆದುಕೊಂಡ ವಿರೋಧಿಗಳು ಅದನ್ನು ತಿರುಚಿ ಆತ ಮೋಸವನ್ನು ಪ್ರಚೋದಿಸುತ್ತಿದ್ದಾನೆ ಎಂದು ಅಪವ್ಯಾಖ್ಯಾನವನ್ನು ಅದಕ್ಕೆ ಪ್ರತಿಯಾಗಿ ಹಬ್ಬಿಸಿದ್ದರು. ಯಾರೋ ಒಬ್ಬ ಹಿರಿಯ ಯಾವುದೋ ಖುಷಿಯ ಮೂಡ್‌ನಲ್ಲಿ "ಹೋಗಿ ಮಕ್ಕಳೇ, ಸಂಜೆವರೆಗೆ ಬೇಕಾದ್ದು ಮಾಡಿಕೊಳ್ಳಿ" ಅಂದರೆ ಹೋಗಿ ಕೊಲೆ ಸಹ ಮಾಡಿ ಎಂದರ್ಥವೇ? ಇಲ್ಲಿ ಪದಗಳ ಭಾವ ಮುಖ್ಯವೇ ಹೊರತು ವಾಚ್ಯಾರ್ಥವಲ್ಲ. ಬುದ್ಧಿ ಹೇಳಿದ ಚಾರ್ವಾಕ (ಜನರಿಂದ ಸಿಹಿಮಾತುಗಾರ ಎಂಬ ಬಿರುದಾಂಕಿತನಾದ ಆತ) ನನ್ನು ಬುದ್ಧಿವಂತಿಕೆಯಿಂದ ವೈದಿಕರು ಈ ರೀತಿಯಾಗಿ ತಿರುಚಿ ಕೆಟ್ಟವನನ್ನಾಗಿಸಿದ್ದರು.

ಇದೇ ರೀತಿ ಭಾರತದಂತೆ ಜಾತ್ಯತೀತತೆಯನ್ನು ಅಳವಡಿಸಿಕೊಳ್ಳದ ಮುಸಲ್ಮಾನ ಸಂಪ್ರದಾಯ ಅನುಸರಿಸುವ ಕುವೈಟ್‌ನಲ್ಲಿರುವ 11 ಮಂದಿ ಕನ್ನಡಿಗರು ಅಲ್ಲಿ ನೀಡಿದ ಎಚ್ಚರಿಕೆಯನ್ನೂ ಧಿಕ್ಕರಿಸಿ ಸತ್ಯನಾರಾಯಣ ಪೂಜೆ ಮಾಡಿ ಜೈಲುಪಾಲಾಗಿ ಪಡಿಪಾಟಲು ಪಟ್ಟದ್ದು ಕೆಲದಿನಗಳ ಹಿಂದೆ ಸುದ್ದಿಯಾಗಿತ್ತು, ಸತ್ಯನಾರಾಯಣ ಕಥೆಯಲ್ಲಿ ಆ ಪೂಜೆಯನ್ನು ಮಾಡಿದರೆ ಸಿಗುವ ಲಾಭಗಳ ಬಗ್ಗೆ ದೊಡ್ಡ ಪಟ್ಟಿಯೇ ಇದೆ. ಈ ಲಾಭದ ಕಥೆ ಒತ್ತಟ್ಟಿಗಿರಲಿ ರಾಜಕುಮಾರ್ ನಟಿಸಿದ ಚಿತ್ರವೊಂದರ (ದಾರಿ ತಪ್ಪಿದ ಮಗ) ಮೂಲಕ ಪ್ರಸಿದ್ಧವಾದ "ಕಾಪಾಡು -ಶ್ರೀಸತ್ಯ ನಾರಾಯಣ" ಎಂಬ ವಾಕ್ಯವೂ ಇಲ್ಲಿ ಫಲಿಸದೇ ಅಪಮೌಲ್ಯಕ್ಕೊಳಗಾಯಿತು ಪೂಜಾ ಫಲವೂ ಇಲ್ಲ, ಜೈಲುವಾಸದ ಬಳಿಕ ಉದ್ಯೋಗವೂ ಕೈಬಿಟ್ಟು ಆ 11 ಭಕ್ತರುಗಳು ಹಣೆಯಲ್ಲಿ 111 (ಮೂರುನಾಮ) ಬರೆಸಿಕೊಂಡು ಊರ ಹಾದಿ ಹಿಡಿಯಬೇಕಾಗಿ ಬಂತು.

ಭಕ್ತಿನಂಬಿಕೆಗಳನ್ನು ಬದುಕಿನಲ್ಲಿ ಅಳವಡಿಸಿಕೊಂಡಿದ್ದರೆ ಅದು ಖಂಡಿತಾ ತಪ್ಪಲ್ಲ, ಬದುಕಿನಲ್ಲಿ ಈ ಭಕ್ತಿ ನಂಬಿಕೆಗಳಿರಬೇಕೇ ವಿನಹ ಬದುಕೇ ಇವಾಗಬಾರದು. ಬೆಂಗಳೂರಿನಲ್ಲಿ ಇತ್ತೀಚೆಗೆ ಕೋಟ್ಯಾಧಿಪತಿ ವೃದ್ಧನೊಬ್ಬ ಮಗಳಿಂದಲೇ ಸುಪಾರಿ ಕೊಲೆಗಡುಕರಿಗೆ ಬಲಿಯಾದ ಸುದ್ದಿ ಬಂದಿತ್ತು, ಆತ ತನ್ನ ನಿವೃತ್ತಿಯ ಸಮಯವ

ಆಧ್ಯಾತ್ಮಿಕ ಆಮೂ ಇದೂಗಳಿಗೆ ವ್ಯಯಿಸುವ ಬದಲು ತನ್ನ ಮಗಳ ಕುರಿತಾಗಿ (ಆಕೆ ಹಾದಿ ತಪ್ಪಿದವಳಾಗಿದ್ದರೂ) ಯೋಚಿಸಿದ್ದಿದ್ದರೆ ಆತನೂ ಸಾಯುತ್ತಿರಲಿಲ್ಲ, ಆಕೆಯೂ ಜೈಲುಪಾಲಾಗುತ್ತಿರಲಿಲ್ಲ. ಬದುಕಿಗೊಂದು "ಫಿನಿಶಿಂಗ್" (ನಯವಂತಿಕೆ) ಕೊಡಲು ಈ ಆಧ್ಯಾತ್ಮ- ನಂಬಿಕೆಗಳೆಲ್ಲ ಇರಬೇಕು ಸತ್ಯ. ಆದರೆ ಇವು ಲೆಕ್ಕಕ್ಕಿಂತ ಅತಿಯಾದಲ್ಲಿ ಬದುಕು ಇವುಗಳಿಂದಲೇ "ಫಿನಿಷ್" ಆಗಿಬಿಡುವುದು ಮತ್ತಷ್ಟು ಸತ್ಯ. ಜನರಿಗೆ ತಿಳಿ ಹೇಳುವವರ್ಯಾರು?

- ಅವಿನಾಶ್ ಎಮ್.ಎಸ್. ನೆಲ್ಲಿಕಾರ್

ವಿವೇಕಾನಂದರ ಬಗ್ಗೆ ಸುಳ್ಳುಗಳ ಪ್ರಚಾರ

ಕಳೆದ ವಾರ ಬೆಂಗಳೂರಿನಲ್ಲಿ ಬ್ಯೂಗಲ್ ರಾಕ್ ಗಾರ್ಡನ್ನಿನಲ್ಲಿ ನಡೆದ ಒಂದು ಸಮಾರಂಭದಲ್ಲಿ ಹಿಂದೂ ಯುವಬ್ರಿಗೇಡಿನ ಮುಖಂಡ ಚಕ್ರವರ್ತಿ ಸೂಲಿಬೆಲೆ ಎಂಬ ಸಂಘ ಪರಿವಾರದವನು ಸ್ವಾಮಿ ವಿವೇಕಾನಂದರ ಬಗ್ಗೆ ಮಾತನಾಡುತ್ತಾ ಅವರು ಯಾವ ಜಾತಿಯವರೆಂದು ಎಲ್ಲಿಯೂ ಉಲ್ಲೇಖವಾಗಿಲ್ಲ, ಹಾಗಾಗಿ ಅವರು ಯಾವ ಜಾತಿಯವರೆಂದು ಈಗಲೂ ಯಾರಿಗೂ ಗೊತ್ತಿಲ್ಲ ಎಂದು ಹೇಳಿದನು ಎಂದು ಆರ್‌ಎಸ್‌ಎಸ್ ಮುಖವಾಣಿ ಕನ್ನಡ ದಿನಪತ್ರಿಕೆಯಲ್ಲಿ ವರದಿಯಾಗಿದೆ. ಇದು ವಿವೇಕಾನಂದರ ಬಗ್ಗೆ ಬೇಕೆಂದೇ ಜನರನ್ನು ದಾರಿ ತಪ್ಪಿಸುವ ಸಂಘ ಪರಿವಾರದವರ ಹುನ್ನಾರ ಎಂದು ಬಿಡಿಸಿ ಹೇಳಬೇಕಾಗಿಲ್ಲ. ಸ್ವಾಮಿ ವಿವೇಕಾನಂದರು ಕಾಯಸ್ಥ ಅರ್ಥಾತ್ ಬೆಂಗಾಲಿ ಕ್ಷತ್ರಿಯ ಜಾತಿಯವರೆಂದು ಅವರ ಎಲ್ಲಾ ಜೀವನ ಚರಿತ್ರೆಗಳಲ್ಲಿ ಉಲ್ಲೇಖಿತವಾಗಿದೆ. ಮೇಲಾಗಿ ವಿವೇಕಾನಂದರ ಸಂಬಂಧಿಕರು ಇಂದಿಗೂ ಕೊಲ್ಕತ್ತಾದಲ್ಲಿ ಇದ್ದಾರೆ. ಸೂಲಿಬೆಲೆಗೆ ಗೊತ್ತಿಲ್ಲದಿದ್ದರೆ ಈ ಸಂಬಂಧಿಕರನ್ನೇ ನೇರವಾಗಿ ಕೇಳಲಿ. ಸುಮ್ಮನೆ ವಿವೇಕಾನಂದರ ಜಾತಿ ಬಗ್ಗೆ ಕರ್ನಾಟಕದಲ್ಲಿ ತಪ್ಪು ಮಾಹಿತಿ ಹರಡುವುದು ಬೇಡ. ನಿಜವಾಗಿ ಎಲ್ಲಾ ಉತ್ತರ ಭಾರತೀಯ ಕಾಯಸ್ಥ ಜಾತಿಯವರಂತೆ ವಿವೇಕಾನಂದರೂ ಮಾಂಸಾಹಾರಿಯಾಗಿದ್ದರು. ಅಷ್ಟೇ ಅಲ್ಲ, ಅವರು ಅಮೆರಿಕಾಕ್ಕೆ ಹೋಗಿದ್ದಾಗ ಗೋಮಾಂಸ ಸೇವಿಸಿದ್ದಾಗಿ ಅವರೇ ಒಂದೆಡೆ ಹೇಳಿಕೊಂಡಿದ್ದಾರೆ. ಮೇಲಾಗಿ ಆಗಿನ ಕಾಲದಲ್ಲಿ ಬೆಂಗಾಲಿ ಬ್ರಾಹ್ಮಣರು ಯಜ್ಞದಲ್ಲಿ ಆಕಳ ಕರುವನ್ನು ಬಲಿಕೊಟ್ಟು ಯಜ್ಞದ ಬೆಂಕಿಯಲ್ಲಿ ಬೆಂದ ಕರುವಿನ ಮಾಂಸವನ್ನು ಯಾಜ್ಞಿಕರು ಸ್ಥಳದಲ್ಲಿಯೇ ಪ್ರಸಾದವಾಗಿ ಸೇವಿಸುತ್ತಿದ್ದುದ್ದನ್ನು ತಾನು ಕಣ್ಣಾರೆ ನೋಡಿರುವುದಾಗಿ ವಿವೇಕಾನಂದರು ತಮ್ಮ ಕೃತಿಗಳಲ್ಲಿ ಬರೆದಿದ್ದಾರೆ. ಸ್ವಾಮಿ ವಿವೇಕಾನಂದರು ಅಮೆರಿಕಾದಲ್ಲಿ ಹಿಂದೂ ಧರ್ಮದ ಪತಾಕೆ ಹಾರಿಸಿರುವುದು ನಿಜ. ಆದರೆ ತಮ್ಮ ತಾಯಿನಾಡು ಭಾರತದಲ್ಲಿ ಮಾತ್ರ ವಿವೇಕಾನಂದರ ಪ್ರಗತಿಪರ ನೀತಿಗಳನ್ನು ನೋಡಿ ಬೆಂಗಾಲಿ ವೈದಿಕರು ವಿವೇಕಾನಂದರಿಗೆ ಅಪಾರ ಕಿರುಕುಳ ಕೊಟ್ಟು ಅವರ ಜೀವನ ದುರ್ಭರ ಮಾಡಿದ್ದೂ ನಿಜ. ವಿವೇಕಾನಂದರಿಗೆ ಹಿಂದೂ ಧರ್ಮಕ್ಕಿಂತ ಬೌದ್ಧ ಧರ್ಮ ಹೆಚ್ಚು ಪ್ರಿಯವಾಗಿತ್ತು. ಆದರೂ ಈಗ ಸಂಘ ಪರಿವಾರದ ನಾಜಿ ಗೋಬೆಲ್‌ಗಳ ವದಂತಿ ಫ್ಯಾಕ್ಟರಿಯಲ್ಲಿ ತಯಾರಾದ ಕಟ್ಟು ಕತೆಯೇನೆಂದರೆ ಅಮೆರಿಕದ ಕ್ರೈಸ್ತರು ವಿವೇಕಾನಂದರಿಗೆ ಅಪಾರ ಕಿರುಕುಳ ಕೊಟ್ಟಿದ್ದರು ಎಂಬುದಾಗಿ. ಕೇಸರಿ ಮುಖಂಡರ ಇಂತಹ ಹಸಿ ಹುಸಿ ಸುಳ್ಳು ಈಗ ಹೆಚ್ಚು ದಿನ ನಡೆಯಲು ಸಾಧ್ಯವಿಲ್ಲ. ಕಾರಣ ಈಗ ಎಲ್ಲೆಡೆಯೂ ಸ್ವಾಮಿ ವಿವೇಕಾನಂದರ ಜೀವನ ಚರಿತ್ರೆ ಹಾಗೂ ಅವರೇ ಬರೆದ ಆತ್ಮಚರಿತ್ರೆಗಳ ಪ್ರತಿಗಳು ಲಭ್ಯವಿವೆ. ಗ್ರಾಮೀಣ ಪ್ರದೇಶದ ಸರಕಾರಿ ಶಾಲೆಗಳಿಗೂ ಸರಕಾರವೇ ವಿವೇಕಾನಂದರ ಕೃತಿಗಳನ್ನು ಪೂರೈಸುವುದು ಉತ್ತಮ. ನಮ್ಮ ಭಾರತದ ಮೊದಲಿನ ರಾಷ್ಟ್ರಪತಿ ಬಾಬು ರಾಜೇಂದ್ರ ಪ್ರಸಾದ್, ಲಾಲ್ ಬಹದ್ದೂರ್ ಶಾಸ್ತ್ರೀ, ಜ್ಯೋತಿ ಬಸು, ಅಮಿತಾಭ್ ಬಚ್ಚನ್, ಶತ್ರುಘ್ನ ಸಿನ್ಹಾ ಮೊದಲಾದವರೆಲ್ಲ ಭಾರತದ ಪ್ರಸಿದ್ಧ ಕಾಯಸ್ಥ ಕ್ಷತ್ರೀಯರು.

ಭಾರತೀಯರು ಅಸಹಿಷ್ಣುಗಳಲ್ಲ, ಅವರು ಸ್ವಾಭಿಮಾನಿಗಳು ಹಾಗೂ ಈ ಸ್ವಾಭಿಮಾನವನ್ನೇ ಕೆಲವರು ಅಸಹಿಷ್ಣುತೆ ಎಂದು ತಪ್ಪಾಗಿ ಕರೆಯುತ್ತಿದ್ದಾರೆ ಎಂದು ಸೂಲಿಬೆಲೆ ಅದೇ ಮೊನ್ನಿನ ಸಮಾರಂಭದಲ್ಲಿ ಹೇಳಿದನು. ಹಾಗಾದರೆ ಈಗಲೂ ವೈದಿಕರು ದೇವಸ್ಥಾನಗಳಲ್ಲಿ ಹಾಗೂ ಮಠಗಳಲ್ಲಿ ಬಹಿರಂಗ ಜಾತಿಭೇದ ಹಾಗೂ ಪಂಕ್ತಿ ಭೇದ ಮಾಡುವುದು ಅಸಹಿಷ್ಣುತೆ ಅಲ್ಲದಿದ್ದರೆ ಇನ್ನೇನು? ಹಿಂದೂ ಧರ್ಮದೊಳಗಿನ ಮೇಲುಕೀಳೆಂಬ ಜಾತಿಗಳು ಭಾರತೀಯರಲ್ಲಿ ಸನಾತನ ಕಾಲದಿಂದಲೂ ಭಾರಿ ಅಸಹಿಷ್ಣುತೆ ಇದೆಯೆಂಬುದಕ್ಕೆ ಗಟ್ಟಿ ಪುರಾವೆ. ಇನ್ನು ಸೂಲಿಬೆಲೆ ಹೆಮ್ಮೆಪಡುತ್ತಿರುವ ಭಾರತೀಯರ ಸ್ವಾಭಿಮಾನದ ನೈಜ ಸ್ವರೂಪ ಹೇಳಬೇಕೆಂದರೆ ಮೊಘಲರ ಕಾಲದಲ್ಲಿ ಮುಸ್ಲಿಂ ರಾಜರ ಆಸ್ಥಾನದಲ್ಲಿ ಕೆಲಸಕ್ಕಿದ್ದವರಲ್ಲಿ ಹೆಚ್ಚಿನವರು ಬ್ರಾಹ್ಮಣರು ಮತ್ತು ವೈಶ್ಯರು. ಅದೇ ಪ್ರಕಾರ ಬ್ರಿಟಿಷರ ಕಾಲದಲ್ಲೂ ಬ್ರಿಟಿಷ್ ಅಧಿಕಾರಿಗಳ ಕಾಲು ನೆಕ್ಕಿ ಸರಕಾರಿ ಗುತ್ತಿಗೆ ಪಡೆಯುತ್ತಿದ್ದವರಲ್ಲಿ ಹೆಚ್ಚಿನವರು ಉತ್ತರ ಭಾರತೀಯ ವೈಶ್ಯರು ಮತ್ತು ಜೈನರು. ಬ್ರಿಟಿಷರ ಕಚೇರಿಗಳಲ್ಲೂ ಅವರ ಜೀಹುಜೂರಿ ಮಾಡಿ ಗುಮಾಸ್ತ ಕೆಲಸ ಗಿಟ್ಟಿಸಿದವರಲ್ಲಿ ಹೆಚ್ಚಿನವರೇ ಬಹುಸಂಖ್ಯಾತರು. ಆಗೆಲ್ಲಾ ಬ್ರಾಹ್ಮಣ ವೈಶ್ಯರ ಮತ್ತು ವೈಶ್ಯರ ಸ್ವಾಭಿಮಾನ ಎಲ್ಲಿ ಹೋಗಿತ್ತು?

ನಾನು ದಲಿತರೆಲ್ಲರ ಕ್ಷಮೆ ಕೇಳುತ್ತಾ ನಿಜ ಹೇಳಬೇಕೆಂದರೆ ದಲಿತರಲ್ಲಿ ಈಗಲೂ ಸ್ವಾಭಿಮಾನ ಇಲ್ಲವೇ ಇಲ್ಲವೆಂದು ವಿಷಾದದಿಂದ ಹೇಳಬೇಕಾಗುತ್ತದೆ. ಒಂದು ವೇಳೆ ದಲಿತರಲ್ಲಿ ಸ್ವಾಭಿಮಾನವಿದ್ದಿದ್ದರೆ, ಅವರು ಹಿಂದೂ ಧರ್ಮವು ತಮ್ಮನ್ನು ಇಷ್ಟೊಂದು ಹೀನಾಯವಾಗಿ ಸಾವಿರಾರು ವರ್ಷಗಳಿಂದ ನಡೆಸಿಕೊಳ್ಳುತ್ತಿದೆ ಎಂದು ಮನವರಿಕೆ ಆಗಿರುವಾಗ ಹಾಗೂ ಕನಿಷ್ಠ ಮುಂದಿನ ಇನ್ನೂರು ವರ್ಷಗಳವರೆಗೂ ದಲಿತರನ್ನು ಹಿಂದೂ ಮೇಲ್ಜಾತಿ ಹೀಗೆಯೇ ಹೀನಾಯವಾಗಿ ನಡೆಸಿಕೊಳ್ಳುತ್ತದೆ ಎಂದು ಖಾತ್ರಿಯಾಗಿರುವಾಗ ಅವರು ಇನ್ನೂ ಹಿಂದೂ ಧರ್ಮಕ್ಕೆ ಜೋತು ಬಿದ್ದಿರುವುದು ಅವರಲ್ಲಿ ಸ್ವಾಭಿಮಾನ ಇನ್ನೂ ಮೂಡಿಲ್ಲ ಎನ್ನುವುದಕ್ಕೆ ಸಾಕ್ಷಿ. ಜತೆಗೆ ಡಾ.ಅಂಬೇಡ್ಕರರು ತೋರಿಸಿದ ಹಾದಿಯ ಬಗ್ಗೆ ದಲಿತರಿಗೆ ಇನ್ನೂ ನಂಬಿಕೆ ಹುಟ್ಟಿಲ್ಲ ಎಂಬುದಕ್ಕೆ ಪುರಾವೆಯಿದು. ಜನ್ಮ ಕೊಟ್ಟ ತಂದೆ-ತಾಯಿಗಳೇ ಮಗನನ್ನು ಕೆಟ್ಟದಾಗಿ ನಡೆಸಿಕೊಂಡು ದಿನಾಲೂ ಅವಮಾನಿಸುತ್ತಿದ್ದರೆ ಸ್ವಂತ ಮಗನೇ ತಂದೆಯ ಮನೆ ಬಿಟ್ಟುಹೋಗುತ್ತಾನೆ. ಹಿರಿಯರಿಂದ ಬಳುವಳಿಯಾಗಿ ಬಂದ ಮನೆ ಎಷ್ಟೇ ಭವ್ಯವಾಗಿರಲಿ ಅದರೊಳಗೆ ವಿಷಕಾರಿ ಹಾವು ಚೇಳುಗಳು ತುಂಬಿಕೊಂಡಿದ್ದರೆ ಹಾಗೂ ಆ ಹಿರಿಯರ ಮನೆ ರಿಪೇರಿ ಮಾಡಲಾಗದಷ್ಟು ಗೆದ್ದಲು ಹಿಡಿದಿದೆ ಎಂದು ಗೊತ್ತಾದ ಮೇಲೆ ಯಾರೇ ಆಗಲಿ ಅದು ತಮ್ಮ ಹಿರಿಯರ ಮನೆ ಎಂಬ ಅಭಿಮಾನ ತೊರೆದು ಒಂದು ಸಣ್ಣ ಬಾಡಿಗೆ ಮನೆಗೆ ವಲಸೆ ಹೋಗುವುದು ಖಂಡಿತ. ಆದರೆ ಭಾರತದ ದಲಿತರು ಮಾತ್ರ ಇಷ್ಟೊಂದು ಘೋರ ಅವಮಾನ ಶತಮಾನಗಳಿಂದ ಆಗುತ್ತಿದ್ದರೂ ಅವರು ಇನ್ನೂ ಹಿಂದೂ ಧರ್ಮಕ್ಕೆ ಅಂಟಿಕೊಂಡಿರುವುದು ಅವರಲ್ಲಿ ಸ್ವಾಭಿಮಾನ ಇಲ್ಲವೇ ಇಲ್ಲ ಎಂಬುದಕ್ಕೆ ಸಾಕ್ಷಿ.

- ವೀರಪ್ಪ ಡಿ.ಎನ್. ಮಂಗಳೂರು

ಇಲ್ಲೇ ಸ್ವರ್ಗ, ಇಲ್ಲೇ ನರಕ, ಮೇಲೇನಿಲ್ಲ ಸುಳ್ಳು!

ಕನ್ನಡ ಚಲನಚಿತ್ರಗೀತೆಯ ಈ ಸಾಲುಗಳಂತೆ ಸ್ವರ್ಗ ಮತ್ತು ನರಕ ಎಂಬುದು ಇಲ್ಲಿದೆ ಹೊರತು ಮೇಲಲ್ಲ. ಅದನ್ನು ಸೃಷ್ಟಿ ಮಾಡಿಕೊಳ್ಳುವುದು ಮಾತ್ರ ಮನುಷ್ಯರ ಕೆಲಸ ಎನ್ನುವುದು ವಾಸ್ತವ. ಈ ವಾಸ್ತವವನ್ನು ಮರೆಸಿ ಜನರನ್ನು ಭ್ರಮಾಲೋಕಕ್ಕೆ ಕರೆದುಕೊಂಡು ಹೋಗಿ ಅವರ ಬದುಕನ್ನು ದುಸ್ತರ ಮಾಡುವುದೇ ಸಮಾಜದ ಕೆಲವರ ಕೆಲಸವಾಗಿದೆ.

ಮೊನ್ನೆ ಮಂಡ್ಯದ ಸೀತಾಲಕ್ಷ್ಮಿ ಎಂಬ ಮಹಿಳೆ ವೈಕುಂಠ ಏಕಾದಶಿ ದಿವಸ ಬೆಂಗಳೂರಿಗೆ ಬಂದು ಉತ್ತರಾದಿ ಮಠದ ಬಾವಿಗೆ ಹಾರಿ ಆತ್ಮಹತ್ಯೆ ಮಾಡಿಕೊಂಡಿರುತ್ತಾಳೆ. ಕಾರಣವಿಷ್ಟೇ: ವೈಕುಂಠ ಏಕಾದಶಿಯ ದಿವಸ ಪ್ರಾಣ ಹೋದರೆ ವ್ಯಕ್ತಿಯು ನೇರವಾಗಿ ಸ್ವರ್ಗ ಸೇರುತ್ತಾರೆ ಎಂಬ ನಂಬಿಕೆ. ಏಕೆಂದರೆ ಅಂದು ಸ್ವರ್ಗದ ಬಾಗಿಲು ತೆರೆದಿರುತ್ತದೆ ಎಂದು ಧಾರ್ಮಿಕ ನಂಬಿಕೆ. ಹಾಗೇ ಮಹಿಳೆಯನ್ನು ನಂಬಿಸಲಾಗಿದೆ. ಹಿಂದಿನ ಕಾಲದಿಂದ ನಂಬುತ್ತಾ ಬಂದಿರುವ ಪುರಾಣದ ಕಥೆಗಳನ್ನು ವಾಸ್ತವ ಎಂದು ತಿಳಿದುಕೊಂಡಿರುವುದೆ ಆ ಮಹಿಳೆಯು ಮಾಡಿದ ದೊಡ್ಡ ತಪ್ಪು. ಇಷ್ಟಕ್ಕೂ ಸ್ವರ್ಗವೆನ್ನುವುದು ಮೇಲಿರುವುದು ಎನ್ನುವುದೆ ಒಂದು ಊಹೆಯಷ್ಟೆ. ಸ್ವರ್ಗ ಮತ್ತು ನರಕ ಇಲ್ಲಿಯೇ ಇವೆ. ಸಮಾಜಮುಖಿಯಾಗಿ ಬದುಕುವುದರ ಮೂಲಕ ಸ್ವರ್ಗವನ್ನು ಸೃಷ್ಟಿಸಿಕೊಳ್ಳಬೇಕು. ಅದನ್ನು ಬಿಟ್ಟು ಜೀವ ಕಳೆದುಕೊಂಡು ಇನ್ನೊಂದು ಸ್ವರ್ಗಕ್ಕೆ ತಡಕಾಡುವುದು ಭ್ರಮೆ.

ಅದಕ್ಕಾಗಿ ಪ್ರತಿಯೊಬ್ಬರು ವೈಜ್ಞಾನಿಕ ಮನೋಭಾವವನ್ನು ಬೆಳೆಸಿಕೊಂಡು, ಯಾವುದನ್ನು ಪ್ರಶ್ನೆ ಮಾಡದೆ ಒಪ್ಪಿಕೊಳ್ಳಬಾರದು. ಅದಕ್ಕಾಗಿ ಸಮಾಜದ ಯುವಕರಲ್ಲಿ ವೈಚಾರಿಕತೆಯನ್ನು ಬೆಳೆಸುವಂತ ಶಿಕ್ಷಣವನ್ನು ಕೊಡಬೇಕು. ಅಂತಹ ವಾತಾವರಣವನ್ನು ನಿರ್ಮಾಣ ಮಾಡುವುದು ಪಾಲಕರ ಹಾಗೂ ಸರ್ಕಾರದ ಕರ್ತವ್ಯವಾಗಿದೆ.

ಇಂತಹ ದುರ್ಘಟನೆಯಿಂದ ನಾಗರಿಕ ಸಮಾಜ ತಲೆತಗ್ಗಿಸುವಂತೆ ಮಾಡಿದೆ. ಇದರಿಂದ ಸೀತಾಲಕ್ಷ್ಮಿಯಂತ ಮುಗ್ಧ ಮಹಿಳೆಯರು ಬಲಿಯಾಗುವುದನ್ನು ಗಮನಿಸಿದರೆ ಜನರು ಆತ್ಮವಿಶ್ವಾಸವನ್ನು ಕಳೆದುಕೊಂಡು ಮೂಢನಂಬಿಕೆಗೆ ಜೋತು ಬಿದ್ದು ತಮ್ಮ ಬದುಕನ್ನು ದುಸ್ತರ ಮಾಡಿಕೊಳ್ಳುತ್ತಿದ್ದಾರೆ. ಇದಕ್ಕೆಲ್ಲಾ ಯಾರು ಹೊಣೆ?

ಕಾಲ್ಪನಿಕ ಕತೆಗಳನ್ನು ನಿಜ ಎಂಬಂತೆ ನಂಬಿಸಿ ಜನರನ್ನು ಅಂಧಕಾರಕ್ಕೆ ತಳ್ಳುವವರೇ ಇಂತಹ ಘಟನೆಗಳಿಗೆ ಹೊಣೆಗಾರರಾಗುತ್ತಾರೆ. ಇಂತಹ ನಂಬಿಕೆಗಳು ಕೇವಲ ಹಿಂದೂ ಧರ್ಮದಲ್ಲಿ ಮಾತ್ರವಲ್ಲ ಇಸ್ಲಾಂ ಮತ್ತು ಕ್ರೈಸ್ತ ಧರ್ಮಗಳೂ ಇದಕ್ಕೆ ಹೊರತಾಗಿಲ್ಲ ಎನ್ನಬಹುದು.

- ಬಸವರಾಜ ಬಾಣದ, ಗುಳೇದಗುಡ್ಡ

ವಿ.ಸೂ. : ನಿಮ್ಮ ಅನಿಸಿಕೆಗಳನ್ನು lankesh70@rediffmail.com ಗೆ ಮಿಡಿ ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು. ನಿಮ್ಮ ಪ್ರತಿಕ್ರಿಯೆಗಳನ್ನು 9980331427 ನಂಬರ್‌ಗೂ ಚಿಕ್ಕದಾಗಿ ಮತ್ತು ಚೊಕ್ಕದಾಗಿ SMS ಕಳುಹಿಸಬಹುದು.

ವೀಕೆಂಡ್ ವಿತ್ ರಮೇಶ್ ಮನಸ್ಸಿಗೆ ಹತ್ತಿರವಾದ ಕೆಲಸವದು

'ವೀಕೆಂಡ್ ವಿತ್ ರಮೇಶ್' ಎಂಬ ಟಾಕ್ ಶೋ ಮೂಲಕ ಮತ್ತೆ ಕಿರುತೆರೆ ಪ್ರವೇಶ ಮಾಡಿದ್ದಾರೆ ನಿರ್ದೇಶಕ, ನಟ ರಮೇಶ್ ಅರವಿಂದ್. ಇದರ ಜತೆಗೆ ಒಂದು ಸಿನಿಮಾದಲ್ಲೂ ನಟಿಸುತ್ತಿದ್ದಾರೆ. ಮತ್ತೊಂದು ಸಿನಿಮಾಗೆ ಆಕ್ಷನ್ ಕಟ್ ಕೂಡ ಹೇಳಲಿದ್ದಾರೆ.




ಈವರೆಗೂ ಯಾವುದೇ ಕಾಂಟ್ರೊವರ್ಸಿ ಮಾಡಿಕೊಳ್ಳದೇ ಇರುವ ಏಕೈಕ ನಟನೆಂದರೆ ರಮೇಶ್ ಅರವಿಂದ್. ಸದಾ ಮುಗುಳ್ನಗುತ್ತಲೇ ಎಲ್ಲರನ್ನೂ ಆಕರ್ಷಿಸುವ ವ್ಯಕ್ತಿತ್ವ ಅವರದ್ದು. ಸದ್ಯ ಜೀ ಕನ್ನಡ ವಾಹಿನಿಗಾಗಿ 'ವೀಕೆಂಡ್ ವಿತ್ ರಮೇಶ್' ಕಾರ್ಯಕ್ರಮವನ್ನು ನಡೆಸಿಕೊಡುತ್ತಿದ್ದಾರೆ. ಅಲ್ಲದೇ 'ಪುಷ್ಪಕ ವಿಮಾನ' ಎಂಬ ಶೀರ್ಷಿಕೆಯ ಚಿತ್ರದಲ್ಲೂ ನಟಿಸುತ್ತಿದ್ದಾರೆ. ಗಣೇಶ್ ನಟನೆಯ ಚಿತ್ರಕ್ಕೂ ಇವರು ಆಕ್ಷನ್ ಕಟ್ ಹೇಳಲು ಮುಂದಾಗಿದ್ದಾರೆ. ಅವರ ಜತೆಗಿನ ಮಾತುಕತೆ ಇಲ್ಲಿದೆ.

** ನಿರ್ಮಾಪಕರ ವಿರೋಧದ ನಡುವೆಯೂ ಮತ್ತೆ ಕಿರುತೆರೆಗೆ ಬಂದಿದ್ದೀರಿ?*

ಕಳೆದ ವರ್ಷವೇ ನಾನು ಈ ವಿಷಯ ಕುರಿತು ಸ್ಪಷ್ಟಪಡಿಸಿದ್ದೇನೆ. ನನ್ನ ಶೋಗೂ ಸಿನಿಮಾ ಇಂಡಸ್ಟ್ರಿಗೂ ಸಂಬಂಧ ಕಲ್ಪಿಸುವುದು ಸರಿಯಲ್ಲ ಎಂದು ನಾನು ಹೇಳಿದ್ದೇನೆ. ನಾನು ಕಿರುತೆರೆಗೆ ಬಂದರೆ ಯಾರಿಗೂ ಹಾನಿ ಆಗದು. ಒಂದು ವೇಳೆ ಹಾನಿಯಾಗುವುದಾದರೆ ಖಂಡಿತಾ ಅಂತಹ ಕಾರ್ಯಕ್ರಮದಲ್ಲಿ ನಾನು ಭಾಗಿ ಆಗಲಾರೆ. ಅಲ್ಲದೇ ಈ ಕಾರ್ಯಕ್ರಮವನ್ನು ನಾನು ಕಮರ್ಷಿಯಲ್ ಅಂತ ನೋಡುವುದಿಲ್ಲ. ಸಾಧನೆಯನ್ನು ಸಿಲಿಬ್ರಿಟಿ ಮಾಡುವ ಅಪರೂಪದ ಶೋ ಅದು.

** ಮತ್ತೆ ಸೆಕೆಂಡ್ ಸೀಸನ್‌ನನ್ನು ಯಾಕೆ ಒಪ್ಪಿಕೊಂಡಿದ್ದೀರಿ?*



'ವೀಕೆಂಡ್ ವಿತ್ ರಮೇಶ್' ಕಾರ್ಯಕ್ರಮ ನನ್ನ ಮನಸ್ಸಿಗೆ ಹತ್ತಿರವಾದ ಶೋ. ಅಲ್ಲದೇ ನನ್ನಿಂದ ಯಾವ ಕೆಲಸ ಆಗಬೇಕೋ, ಅದನ್ನು ಆ ಶೋ ನಡೆಸಿಕೊಡುತ್ತಿದೆ. ಸಾಧನೆ ಅನ್ನುವುದು ಸಾಮಾನ್ಯವಲ್ಲ. ಎಲ್ಲರೂ ಆ ಗುರಿಯನ್ನು ತಲುಪುವುದಕ್ಕೆ ಆಗುವುದಿಲ್ಲ. ಅಲ್ಲದೇ ಪ್ರತಿಯೊಬ್ಬ ಸಾಧಕನ ಹಿಂದೆಯೂ ಅದ್ಭುತ ಕತೆ ಇದೆ. ಅದನ್ನು ಕೇಳಿಸಿಕೊಳ್ಳುವುದೇ ಒಂದು ಹೆಮ್ಮೆ. ಈ ಕಾರಣಕ್ಕಾಗಿ ನಾನು ಶೋ ಒಪ್ಪಿಕೊಂಡೆ.

** ಈ ಕಾರ್ಯಕ್ರಮದ ವಿಶೇಷತೆ ಏನು? ನೀವು ಯಾವುದನ್ನು ಸ್ಪೆಷಲ್ ಅಂತ ಕರೆಯುತ್ತೀರಿ?*

ಆ ಕಾರ್ಯಕ್ರಮವನ್ನು ಸಿದ್ಧ ಪಡಿಸಿದ ರೀತಿಯೇ ವಿಭಿನ್ನವಾಗಿದೆ. ಇದು ಖಂಡಿತಾ ಟಾಕ್ ಶೋ ಅನಿಸಿಕೊಳ್ಳುವುದಿಲ್ಲ. ಸಾಧಕರ ಕುರ್ಚಿಯ ಎದುರು ಕೂತು, ಸಾಧನೆ ಮಾಡಿದವರ ಕತೆ ಕೇಳುತ್ತೇವೆ. ಅವರ ಭಾವನೆಗೆ ರಿಯ್ಯಾಕ್ಟ್ ಮಾಡುತ್ತೇವೆ. ಆ ಕತೆಯಲ್ಲಿ ನಮ್ಮದೂ ಒಂದು ಕತೆ ಇದೆ ಅಂತ ಹುಡುಕುತ್ತೇವೆ. ಈ ರೀತಿಯ ಕಾರ್ಯಕ್ರಮ ಕನ್ನಡದಲ್ಲಿ ಈವರೆಗೂ ಬಂದಿಲ್ಲ. ತೀರಾ ಬೇರುಮಟ್ಟಕ್ಕೆ ಇಳಿದು ಸಾಧನೆಯನ್ನು ಹುಡುಕಲಾಗುತ್ತಿದೆ. ಹೀಗಾಗಿ ಇದನ್ನು ಸ್ಪೆಷಲ್ ಅಂತ ಕರೆಯುತ್ತೇನೆ.

** ಸಿಲಿಬ್ರಿಟಿಗಳು ಮಾತ್ರ ಸಾಧಕರಾ? ಸಾಮಾನ್ಯ ಜನರು ನಿಮಗೆ ಕಾಣಿಸುವುದೇ ಇಲ್ಲವಾ?*

ಆಗಲೇ ಹೇಳಿದೆ. ಕಾರ್ಯಕ್ರಮದ ಮಾನದಂಡವೇ ವಿಶೇಷವಾಗಿದೆ ಅಂತ. ನಾನು ಯಾರನ್ನೂ ಸಿಲಿಬ್ರಿಟಿ ಅನ್ನುವ ಕಾರಣಕ್ಕೆ ಕರೆದಿಲ್ಲ. ಸಾಮಾನ್ಯ ಸಾಧಕರನ್ನು ಕುರ್ಚಿಯ ಮೇಲೆ ಕೂರಿಸಿದ್ದೇವೆ. ಅಶ್ವಿನ್ ಅನ್ನುವ ಸಾಧಕನ ಕತೆಯೇ ಸ್ಪೆಷಲ್ ಆಗಿತ್ತು. ಅಲ್ಲದೇ ಬೇರೆ ಬೇರೆ ರಂಗದವರನ್ನೂ ಕರೆತಂದಿದ್ದೇವೆ. ಈ ಸೀಸನ್‌ನಲ್ಲಿ ಇನ್ನಷ್ಟು ಸಾಮಾನ್ಯ ಸಾಧಕರನ್ನು ಗುರುತಿಸಿದ್ದೇವೆ. ಸಿಲಿಬ್ರಿಟಿಗಳಿಂದಲೇ ಶೋ ನಡೆಸಲು ಆಗುವುದಿಲ್ಲ. ನಮ್ಮ ಆಲೋಚನೆ ಕೂಡ ಅಂಥದ್ದಲ್ಲ.

** ವೀಕೆಂಡ್ ವಿತ್ ಹೊರತಾಗಿ ಮತ್ತೇನು ಮಾಡುತ್ತಿದ್ದೀರಿ?*

ಹೊಸ ಹುಡುಗರ ಸಿನಿಮಾವೊಂದರಲ್ಲಿ ನಟಿಸುತ್ತಿದ್ದೇನೆ. ಅಲ್ಲದೇ ಈಗಾಗಲೇ ಸುನೀಲ್ ಕುಮಾರ್ ದೇಸಾಯಿ ನಿರ್ದೇಶನದ ಚಿತ್ರದಲ್ಲಿ ನಟಿಸಿದ್ದೇನೆ. ನನ್ನದೇ ನಿರ್ದೇಶನದ ಚಿತ್ರಕ್ಕೂ ತಯಾರಿ ಮಾಡಿಕೊಳ್ಳುತ್ತಿದ್ದೇನೆ. ಹಲವು ಕತೆಗಳನ್ನು ಕೇಳುತ್ತಲೇ ಇರುತ್ತೇನೆ. ನನಗೆ ಇಷ್ಟವಾಗಿದ್ದನ್ನು ಮಾತ್ರ ನಾನು ಮಾಡಲು ಸಾಧ್ಯ.

** ಗಣೇಶ್ ಚಿತ್ರಕ್ಕೆ ನಿರ್ದೇಶನ ಮಾಡುತ್ತಿದ್ದೀರಿ ಅನ್ನುವ ಸುದ್ದಿ ಇದೆ. ಅದು ನಿಜನಾ?*

ಮಾತುಕತೆ ನಡೆದಿದೆ. ಅಂದುಕೊಂಡಂತೆ ನಡೆದರೆ, ಎಲ್ಲಾ ವಿಷಯವನ್ನೂ ಹೇಳುತ್ತೇನೆ. ಖಂಡಿತಾ ನಿರ್ದೇಶನ ಮಾಡುವ ಪ್ಲಾನ್ ಇದೆ. ಅದಕ್ಕೆ ತಯಾರಿಯನ್ನೂ ಮಾಡಿಕೊಳ್ಳುತ್ತಿದ್ದೇನೆ.

** ಮುಂದಿನ ವರ್ಷದ ಪ್ಲಾನ್ ಏನಿದೆ?*

ಈಗಾಗಲೇ ಇಷ್ಟೊಂದು ಕೆಲಸಗಳನ್ನು ಒಪ್ಪಿಕೊಂಡಿದ್ದೇನೆ. ಅದರ ಜತೆ ಓದುವುದು ಇದ್ದೇ ಇರುತ್ತದೆ. ಕೈಲಾದಷ್ಟು ಸಮಾಜಕ್ಕೆ ಕೆಲಸ ಮಾಡುವೆ. ಇದನ್ನು ಬಿಟ್ಟರೆ ಬೇರೆ ಯಾವ ಪ್ಲಾನೂ ಇಲ್ಲ. ಪ್ಲಾನ್ ಮಾಡದೇ ಕೆಲಸ ಮಾಡುವುದು ನನ್ನಿಷ್ಟ. ಅದು ಮಜಾ ಕೂಡ.

Registered No.RNP/KA/BGS/2036/2014-16 Posted at :BGPSO, Mysore Road, Bangalore-26 Thursday R B P LANKESH, Kannada Weekly Price Rs. 15/- 13-01-2016 RNI No. KARKAN2005/146




ಯಶ್‌ಗೆ ತಿರುಗುಬಾಣ

'ಮಾಸ್ಟರ್‌ಪೀಸ್' ಚಿತ್ರದ ಬಗ್ಗೆ ಭಾರೀ ನಿರೀಕ್ಷೆ ಹೊಂದಲಾಗಿತ್ತು. ತಾನು ಪ್ರಚಾರ ಮಾಡದಿದ್ದರೂ ಸಿನಿಮಾವನ್ನು ಪ್ರೇಕ್ಷಕ ಗೆಲ್ಲಿಸುತ್ತಾನೆ, ಮಾಧ್ಯಮಗಳು ತನ್ನ ಹಿಂದೆ ಬೀಳುತ್ತವೆ ಎಂದು ಯಶ್ ಅಂದುಕೊಂಡಿದ್ದರು. ಅದೆಲ್ಲ ಉಲ್ಟಾ ಆಗಿದೆ. ಎರಡನೇ ದಿನಕ್ಕೇ ಬಾಕ್ಸ್ ಆಫೀಸ್ ಸೊರಗಿದೆ. ಮೊದಲ ದಿನದ ಕಲೆಕ್ಷನ್ ಆರು ಕೋಟಿ ಎಂದು ಹೇಳಲಾಗುತ್ತಿದ್ದರೂ ಅದು ಖಚಿತವಿಲ್ಲ.

ಇದೇ ನಿರ್ಮಾಪಕರ 'ನಿನ್ನಿಂದಲೇ' ಸಿನಿಮಾ ಕೂಡ ಹೀಗೆಯೇ ಆಗಿತ್ತು. ಪವರ್‌ಸ್ಟಾರ್ ಪುನೀತ್ ಸಿನಿಮಾ ಅನ್ನುವ ಕಾರಣಕ್ಕೆ 'ನಿನ್ನಿಂದಲೇ' ಚಿತ್ರವು ಮೊದಲ ದಿನ ಎರಡು ಕೋಟಿ ತಂದಿತ್ತು. ಆಮೇಲೆ ಭಾರೀ ಸೋಲು ಅನುಭವಿಸಿತ್ತು. 'ಮಾಸ್ಟರ್‌ಪೀಸ್'ಗೂ ಅದೇ ಗತಿ ಎದುರಾಗಿದೆ. ಎರಡನೇ ದಿನಕ್ಕೆ ಕಲೆಕ್ಷನ್ ಡೌನ್ ಆಗಿದೆ. ಇದರಿಂದ ಯಶ್ ಕೂಡ ಭಯಗೊಂಡಿದ್ದಾರೆ. ತನ್ನ ಸಿನಿಮಾದ ಒಂದು ಫೋಟೋ ಕೊಡಲು ಹಿಂದುಮುಂದು ನೋಡಿದ ಯಶ್‌ಗೆ ಕನ್ನಡದ ಬಹುತೇಕ ಪತ್ರಿಕೆಗಳು ಚಾಟಿ ಬೀಸಿವೆ. ಬಿಡುಗಡೆ ದಿನವೂ ಒಂದೇ ಒಂದು ಫೋಟೋ ಪ್ರಕಟಿಸದಂತೆ ಘೇರಾವು ಹಾಕಿವೆ. ವಿಮರ್ಶೆಯಲ್ಲೂ ಮಿಶ್ರಪ್ರತಿಕ್ರಿಯೆ ಕೊಟ್ಟಿವೆ. ಹೀಗಾಗಿ ಯಶ್ ವಿದೇಶಕ್ಕೆ ಹಾರಿದ್ದಾರೆ.

ಮೆತ್ತಗಾದ ದರ್ಶನ್

ಸಿನಿಮಾ ಪತ್ರಕರ್ತರಿಗಷ್ಟೇ ಅಲ್ಲ, ಅವರ ಚಿತ್ರಗಳ ನಿರ್ದೇಶಕರಿಗೂ ದರ್ಶನ್ ಸಿಗುವುದಿಲ್ಲ ಅನ್ನುವ ಮಾತಿದೆ. ದರ್ಶನ್ ಕೂಡ ಹಾಗೆಯೇ ಇದ್ದಾರೆ. ಆದರೆ ಅವರ ಬ್ಯಾನರ್‌ನ ಸಿನಿಮಾಗಳು ತೆರೆ ಕಾಣುವಾಗ ಎಲ್ಲರಿಗೂ ಲಭ್ಯ ಆಗುತ್ತಾರೆ. ಜನವರಿ 8ನೇ ತಾರೀಖಿಗೆ ದರ್ಶನ್ ಬ್ಯಾನರ್‌ನ 'ಮದುವೆಯ ಮಮತೆಯ ಕರೆಯೋಲೆ' ಸಿನಿಮಾ ಬಿಡುಗಡೆ ಆಗಲಿದೆ. ಎರಡೂವರೆ ಕೋಟಿಯಲ್ಲಿ ನಿರ್ಮಾಣವಾದ ಚಿತ್ರಕ್ಕೆ ಕವಿರಾಜ್ ನಿರ್ದೇಶಕ. ಹೊಸ ಹುಡುಗನನ್ನು ಸಿನಿಮಾ ಇಂಡಸ್ಟ್ರಿಗೆ ಪರಿಚಯ ಮಾಡುತ್ತಿದ್ದಾರೆ ದರ್ಶನ್. ಅಲ್ಲದೇ ನಿರ್ದೇಶಕನಾಗಿ ಕವಿರಾಜ್‌ಗೂ ಇದೇ ಮೊದಲ ಸಿನಿಮಾ. ಹಾಕಿದ ಬಂಡವಾಳ ವಾಪಸ್ಸು ಬರಬೇಕು ಅಂದರೆ ಸ್ವತಃ ದರ್ಶನ್ ಅಖಾಡಕ್ಕೆ ಇಳಿಯಬೇಕು. ಹೀಗಾಗಿ ದರ್ಶನ್ ಎಲ್ಲೆಲ್ಲೂ ಕಾಣಸಿಗುತ್ತಾರೆ. ಸಿನಿಮಾ ನೋಡುವಂತೆ ಮನವಿ ಮಾಡಿದ್ದಾರೆ.



ದರ್ಶನ್ ಮೆತ್ತಗಾಗಲು ಇದೊಂದೇ ಕಾರಣವಲ್ಲ, ಅವರ ಹಿಂದಿನ ಎರಡೂ ಚಿತ್ರಗಳು ಗಲ್ಲಾಪೆಟ್ಟಿಗೆಯಲ್ಲಿ ಮಕಾಡೆ ಮಲಗಿವೆ. ನಿರ್ಮಾಪಕರ ಜೇಬನ್ನು ಖಾಲಿ ಮಾಡಿವೆ. ಹೀಗಾಗಿ ನಿರ್ಮಾಪಕರೂ ಇವರಿಂದ ದೂರ ಆಗುತ್ತಿದ್ದಾರೆ. ಇದೆಲ್ಲವನ್ನೂ ಅರಿತ ದರ್ಶನ್ ಬದಲಾಗಿದ್ದಾರೆ. ಅಲ್ಲದೇ ಹೊಸ ಹುಡುಗರ ಸಿನಿಮಾಗಳು ಗೆಲ್ಲುತ್ತಿರುವುದರಿಂದ, ಪ್ರೇಕ್ಷಕರು ಅವರೆಡೆಗೆ ವಾಲುತ್ತಾರೆ ಅನ್ನುವ ಭಯ ಕೂಡ ಇವರಿಗಿದೆ. ಹೀಗಾಗಿ ದರ್ಶನ್ ನಡೆಯಲ್ಲಿ ದೊಡ್ಡ ಬದಲಾವಣೆ ಕಾಣುತ್ತಿದೆ.



ಕಿಲ್ಲಿಂಗ್ ವೀರಪ್ಪನ್ ಟ್ರಬಲ್

ರಾಮ್‌ಗೋಪಾಲ್ ವರ್ಮಾ ನಿರ್ದೇಶನದ ಕಿಲ್ಲಿಂಗ್ ವೀರಪ್ಪನ್ ಸಿನಿಮಾ ಸಾಕಷ್ಟು ಕುತೂಹಲ ಮೂಡಿಸಿದೆ. ಈ ಸಿನಿಮಾದಲ್ಲಿ ಕನ್ನಡದ ಹೆಸರಾಂತ ತಾರಾಗಣವೇ ಇದೆ. ಅಲ್ಲದೇ ಶಿವರಾಜ್‌ಕುಮಾರ್ ಇದೇ ಮೊದಲ ಬಾರಿಗೆ ಇಂಥದ್ದೊಂದು ಪಾತ್ರವನ್ನು ನಿರ್ವಹಿಸಿದ್ದಾರೆ. ಹೀಗಾಗಿ ಕಿಲ್ಲಿಂಗ್ ವೀರಪ್ಪನ್ ಕುರಿತಾಗಿ ನಿರೀಕ್ಷೆಯಿದೆ. ಅದಕ್ಕೆ ತಕ್ಕಂತೆ ಶಿವಣ್ಣ ಕೂಡ ವಿಭಿನ್ನ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ.

ಈ ಚಿತ್ರದಲ್ಲಿ ಶಿವಣ್ಣ ನಾನಾ ಗೆಟಪ್‌ನಲ್ಲಿ ಕಂಡಿದ್ದಾರೆ. ಅಲ್ಲದೇ ಹಲವು ನೆನಪುಗಳನ್ನು ಈ ಸಿನಿಮಾದಲ್ಲಿ ಕಟ್ಟಿಕೊಡಲಿದ್ದಾರಂತೆ. ರಾಮ್‌ಗೋಪಾಲ್ ವರ್ಮಾ ಇದೇ ಮೊದಲ ಬಾರಿಗೆ ಕನ್ನಡ ಸಿನಿಮಾ ಮಾಡಿದ್ದಾರೆ. ಅಲ್ಲದೇ ಮತ್ತೊಂದು ಸಿನಿಮಾದ ಸಿದ್ಧತೆಯನ್ನೂ ಮಾಡಿಕೊಂಡಿದ್ದಾರೆ. ಹೀಗಾಗಿ ನಾನಾ ರೀತಿಯಲ್ಲಿ ಸಿನಿಮಾದ ಪ್ರಚಾರ ಕೂಡ ನಡೆದಿದೆ. ಹಲವರು ಈ ಸಿನಿಮಾದ ವಿರುದ್ಧ ಕೋರ್ಟ್ ಮೆಟ್ಟಿಲು ಹತ್ತಿದ್ದಾರೆ. ಆದರೂ ಎಲ್ಲವೂ ಅಂದುಕೊಂಡಂತೆ ಸರಿಹೋದರೆ ಜನವರಿ 1ಕ್ಕೆ ಬಿಡುಗಡೆ ಆಗಲಿದೆ. ಜತೆಗೆ ತೆರೆಮರೆಯಲ್ಲಿ ಸಂಧಾನ ಕಸರತ್ತು ಕೂಡ ನಡೆದಿದೆ.



ಈ ಸಿನಿಮಾ ಮುಗಿಯುತ್ತಿದ್ದಂತೆಯೇ ರಾಮ್‌ಗೋಪಾಲ್ ವರ್ಮಾ 'ಅಪ್ಪ' ಅನ್ನುವ ಮತ್ತೊಂದು ಚಿತ್ರಕ್ಕೆ ಆಕ್ಷನ್ ಕಟ್ ಹೇಳಲಿದ್ದಾರೆ. ಈ ಚಿತ್ರಕ್ಕೆ ಸುದೀಪ್ ನಾಯಕ. ಮುತ್ತಪ್ಪ ರೈ ಅವರ ಜೀವನವನ್ನು ಆಧರಿಸಿದ ಸಿನಿಮಾ ಇದಾಗಿದೆ.

ಶ್ರೀಮುರಳಿಗೆ ಗಾಳ ಹಾಕಿದ ಜಯಣ್ಣ

ಯಶ್‌ಗೆ ಸ್ಟಾರ್ ಪಟ್ಟ ತಂದವರು ನಿರ್ಮಾಪಕ ಕಂ ವಿತರಕ ಜಯಣ್ಣ. ಓಡುವ ಕುದುರೆಯ ಬೆನ್ನು ಹತ್ತುವುದು ಇವರ ಹಳೆ ಚಾಳಿ. ಈಗ ಅದನ್ನು ಮತ್ತೆ ಮುಂದುವರಿಸಿದ್ದಾರೆ. ಯಶ್ ಜತೆಗಿಟ್ಟುಕೊಂಡೇ ಶ್ರೀಮುರಳಿಯ ಬೆನ್ನು ಹತ್ತಿದ್ದಾರೆ. ಸದ್ಯ ಶ್ರೀಮುರಳಿಯ ಚಿತ್ರಗಳು ಗಲ್ಲಾಪೆಟ್ಟಿಗೆಯಲ್ಲಿ ಸದ್ದು ಮಾಡುತ್ತಿವೆ. ಈ ಹಿಂದೆ ಅವರ 'ಉಗ್ರಂ' ಸಿನಿಮಾ ಕೂಡ ಒಂದೇ ದಿನಕ್ಕೆ ಐದು ಕೋಟಿ ಬಾಚಿತ್ತು. 'ರಥಾವರ' ಚಿತ್ರದ ಕಲೆಕ್ಷನ್ ಕೂಡ ಅಚ್ಚರಿ ಮೂಡಿಸಿತ್ತು. ಹೀಗಾಗಿ ಜಯಣ್ಣ ತಮ್ಮ ಬ್ಯಾನರ್‌ನಲ್ಲಿ ಶ್ರೀಮುರಳಿಗಾಗಿ ಒಂದು ಸಿನಿಮಾ ನಿರ್ಮಾಣ ಮಾಡುತ್ತಿದ್ದಾರೆ. 'ರಥಾವರ' ವಿತರಿಸುವ ಮುನ್ನ ಇಂಥದ್ದೊಂದು ಅಗ್ರಿಮೆಂಟ್ ಕೂಡ ಮಾಡಿಕೊಂಡಿದ್ದಾರೆ. ಕತೆ ಇನ್ನೂ ಪಕ್ಕಾ ಆಗಿಲ್ಲ, ನಿರ್ದೇಶಕರು ಯಾರು ಅಂತಾನೂ ಗೊತ್ತಿಲ್ಲ. ಆದರೆ, ಜನವರಿಯಲ್ಲಿ ಸಿನಿಮಾ ಸೆಟ್ಟೇರಲಿದೆ.

ಜಯಣ್ಣನಿಗೆ ಯಶ್ ದುಬಾರಿ ಅನಿಸಿದ್ದಾರೆ. ಅಲ್ಲದೇ ಯಶ್ ಅವರ ಮುಂದಿನ ಚಿತ್ರಕ್ಕೆ 25 ಕೋಟಿ ಬಂಡವಾಳ ಬೇಕಿದೆ. ಅಷ್ಟು ಹಾಕುವ ದಡ್ಡತನವನ್ನು ಜಯಣ್ಣ ಮಾಡಲಾರರು. ಹೀಗಾಗಿ ಯಶ್ ಸಿನಿಮಾಗಳನ್ನು ವಿತರಿಸುತ್ತಲೇ ಶ್ರೀಮುರಳಿ ಚಿತ್ರವನ್ನು ನಿರ್ಮಾಣ ಮಾಡುವ ಯೋಜನೆ ಅವರದ್ದು.

ಹರಿಪ್ರಿಯಾ ಸಿಗರೇಟ್ ರಗಳೆ

'ನೀರ್‌ದೋಸೆ' ಸಿನಿಮಾಗಾಗಿ ಹರಿಪ್ರಿಯಾ ವಿಪರೀತ ಸಿಗರೇಟು ಸೇದಿದರಂತೆ. ಹೀಗಾಗಿ ಅವರಿಗೆ ಗಂಟಲು ಸೋಂಕು ಆಗಿದೆ. ಮಾತಾಡುವುದಕ್ಕೂ ಆಗದ ಕಾರಣ ಹರಿಪ್ರಿಯಾ ಆಸ್ಪತ್ರೆಗೆ ದಾಖಲಾಗಿದ್ದಾರೆ. ಇದನ್ನೇ ಬಂಡವಾಳ ಮಾಡಿಕೊಂಡ ನಿರ್ದೇಶಕ ವಿಜಯ ಪ್ರಸಾದ್ ಎಲ್ಲಾ ಸುದ್ದಿ ವಾಹಿನಿಗಳಿಗೆ ಈ ವಿಷಯ ತಿಳಿಸಿ ಭರ್ಜರಿ ಪ್ರಚಾರ ಪಡೆದಿದ್ದಾರೆ. ಈ ನಡೆ ಹರಿಪ್ರಿಯಾಗೆ ಬೇಸರ ತರಿಸಿದೆ.

"ಸಿನಿಮಾದ ದೃಶ್ಯಗಳಲ್ಲಿ ಸಿಗರೇಟು ಸೇದಬೇಕಿತ್ತು ನಿಜ. ಆದರೆ, ಹೆಚ್ಚೆಚ್ಚು



ಚಿತ್ರಿಕೆಗಳನ್ನು ನಿರ್ದೇಶಕರು ತೆಗೆದುಕೊಂಡ ಕಾರಣ ಸಿಗರೇಟು ಸೇವನೆಯನ್ನು ಹೆಚ್ಚು ಮಾಡಬೇಕಾಯಿತು. ಇದರಿಂದ ತೊಂದರೆ ಆಗಿದ್ದು ನನಗೆ. ಆದರೆ ಈ ರೀತಿ ಪ್ರಚಾರ ಪಡೆಯುವ ಅವಶ್ಯಕತೆ ನನಗಿರಲಿಲ್ಲ. ಅಲ್ಲದೇ ಇದನ್ನು ಯಾರೂ ಮಾಡಬಾರದು. ಈ ಘಟನೆಯಿಂದಾಗಿ ನನ್ನ ಮನಸ್ಸಿಗೆ ಇನ್ನಷ್ಟು ನೋವಾಗಿದೆ" ಅಂದಿದ್ದಾರೆ ಹರಿಪ್ರಿಯಾ.

ಈ ಚಿತ್ರದಲ್ಲಿ ಹರಿಪ್ರಿಯಾ ಹೈಟೆಕ್ ಕಾಲ್‌ಗರ್ಲ್ ಪಾತ್ರವನ್ನು ನಿರ್ವಹಿಸುತ್ತಿದ್ದಾರೆ. ಪ್ರತಿ ದೃಶ್ಯದಲ್ಲೂ ಇವರು ಧಮ್ ಎಳೆದಿದ್ದಾರೆ. ದೇಹದಲ್ಲಿ ಬಿಟ್ಟುಕೊಂಡ ಹೊಗೆಯು ಸದ್ಯ ಅವರನ್ನು ಆಸ್ಪತ್ರೆಗೆ ಸೇರಿಸಿದೆ.



'ನೀರ್‌ದೋಸೆ' ಹರಿಪ್ರಿಯಾ

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427,
Fax : 26604536, E-mail :lankesh70@rediffmail.com